ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 26 ಸಂಚಿಕೆ 1
ಜನವರಿ–ಮಾರ್ಚ್ 1997

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SAADHANE : Kannada Quarterly of the Bangalore University, Bangalore . Vol. No. 26, No.1, January 1997, Pp 119 + vii

ವಾರ್ಷಿಕ ಚಂದಾ : ರೂ. ೧೫ - ೦೦
ವಿದ್ಯಾರ್ಥಿಗಳಿಗೆ ರೂ. ೧೦ - ೦೦ (ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ ರೂ.. ೧೫೦- ೦೦

ಪ್ರಕಾಶಕರು :
ಹೆಚ್. ಆಂಜನಪ್ಪ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦ ೦೫೬

ಮುದ್ರಕರು :
ಎಸ್.ಎಂ. ಹೊನ್ನಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ)
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ
ಬೆಂಗಳೂರು - ೫೬೦ ೦೫೬

ಪರಿವಿಡಿ

ಕಾವ್ಯಾವತಾರ

ದೊಡ್ಡರಂಗೇಗೌಡ

ಬದುಕ ಬವಣೆಯು ಮೇರೆ ಮೀರಲು
ಕವಿಯ ಮನವು ಕುದಿಯಿತೋ
ಕಾವ್ಯ ಕೋಗಿಲೆ ಹಾಡಿತೋ!

ನಿತ್ಯ ಬೇಗುದಿ ದೀಪ್ತವಾಗಲು...
ವಾಗರ್ಥ ರೆಕ್ಕೆಯ ತೆರೆಯಿತೋ
ಕಾವ್ಯ ಧ್ವನಿಯೂ ಮೂಡಿತೋ!

ಕಷ್ಟ ಕೋಟಲೆ ಮುತ್ತಿ ಮೊರೆಯಲು
ನುಡಿಯು ಹಂದರ ಹೆಣೆಯಿತೋ
ಅಳಲ ಹೊಳೆಯೇ ಹರಿಯಿತೋ!

ಅಂತರಾತ್ಮದ ಆತ್ಮ ಶೋಧಕೆ..
ಚಿತ್ತ ಹುತ್ತವ ಕಟ್ಟಿತೋ
ನಿಗೂಢ ಚಿಂತನೆ ಬಿತ್ತಿತೋ!

ಭಾವ ಬಾಂದಳ ಮೋಡ ಕಟ್ಟಲು
ಕಲ್ಪನೆಯ ವರ್ಷ ಸುರಿಯಿತೋ
ಸೃಜನೆ ಹೊನಲು ಹರಿಯಿತೋ!

- - -

ಜಿನವಲ್ಲಭಸೂರಿತಿ ಕೃತ ಮಹಾವೀರಸ್ವಾಮಿ ಸ್ತೋತ್ರಂ

ಮೂಲ : ಡಾ. ತಿರುಮಲ ರಾಮಚಂದ್ರ

ಕನ್ನಡಕ್ಕೆ : ಡಾ. ಆರ್. ಶೇಷಶಾಸ್ತ್ರಿ

ಇತ್ತೀಚೆಗೆ ನಿರ್ಣಯಸಾಗರ ಪ್ರೆಸ್ ಅವರ ಕಾವ್ಯ ಮಾಲೆಯ ಸಂಪುಟಗಳನ್ನು ತಿರುವಿ ಹಾಕುತ್ತಿರುವಾಗ ಏಳನೆಯ ಸಂಪುಟದಲ್ಲಿ ಕೆಲವು ಜೈನ ಸ್ತೋತ್ರಗಳು ಕಾಣಿಸಿದವು. ಪ್ರಾಕೃತವಿರಬಹುದೆಂದು ಆತುರದಿಂದ ತೆಗೆದು ನೋಡಿದೆ. ಅಲ್ಲ, ಎಲ್ಲಾ ಸಂಸ್ಕೃತ ಸ್ತೋತ್ರಗಳೇ. ಕೆಲವು ಸ್ತೋತ್ರಗಳಲ್ಲಿ ಸಮ ಸಂಸ್ಕೃತ ಸ್ತೋತ್ರ ಎಂದೂ ಇದೆ. ಮಾನತುಂಗ, ಸಿದ್ಧಸೇನ, ವಾದಿರಾಜ, ಧನಂಜಯ, ಭೂಪಾಲ, ದೇವನಂದಿ, ಸೋಮ ಪ್ರಧಾಚಾರ್ಯ, ಜಂಬೂಗುರು, ಪದ್ಮಾನಂದ, ಜಿನವಲ್ಲಭಸೂರಿ, ಹೇಮಚಂದ್ರಾ ಚಾರ್ಯ, ಜಿನಪ್ರಭಾಚಾರ್ಯ, ವಿಮಲಾಚಾರ್ಯ, ಧನಪಾಲ, ಶೋಭನಮುನಿಗಳು ರಚಿಸಿರುವ ಸ್ತೋತ್ರಗಳು ಈ ಸಂಪುಟದಲ್ಲಿವೆ.

ಬುದ್ಧನಿಗೆ ವರಿಷ್ಠ ಸಮಕಾಲೀನನಾದ ಮಹಾವೀರನೂ ಸಹ ಜನರ ವ್ಯವಹಾರ ಭಾಷೆಯಾದ ಪ್ರಾಕೃತದಲ್ಲಿಯೇ ತನ್ನ ಉಪದೇಶಗಳನ್ನು ಮೊದಲು ಮಾಡಿ ಮುಂದುವರಿಸಿದ. ಆದರೆ ಅನಂತರದವರು ಸಂಸ್ಕೃತದಲ್ಲಿಯೂ ರಚನೆಗಳನ್ನು ಮಾಡಿದರು. ಉಳಿದ ಸಂಸ್ಕೃತ ವಿದ್ವಾಂಸರ ಮೆಚ್ಚುಗೆಯನ್ನು ಪಡೆಯುವುದಕ್ಕಾಗಿಯೇ, ತಮ್ಮ ಧರ್ಮದ ಬಗ್ಗೆ ಆವರ್ಜಿಸಿ ಕೊಳ್ಳುವುದಕ್ಕಾಗಿಯೋ: ಇರಲಿ, ಬೌದ್ಧರಾಗಲೀ, ಜೈನರಾಗಲೀ ಸಂಸ್ಕೃತ ವ್ಯಾಕರಣ ನಿಯಮಗಳನ್ನು ಅಷ್ಟಾಗಿ ಪಾಲಿಸಲಿಲ್ಲ. ಜೈನರಾದರೆ ತಮ್ಮದು ಸಮ ಸಂಸ್ಕೃತ ಪ್ರಾಕೃತವೆಂದಿದ್ದಾರೆ. ಬೌದ್ಧರಿಂದ ರಚಿತವಾದ ಸಂಸ್ಕೃತ ಕವಿತೆಗೆ ಲಲಿತ ವಿಸ್ತರದಲ್ಲಿ ಬೇಕಾದಷ್ಟು ಉದಾಹರಣೆಗಳು ಇವೆ. ಮಾಯಾದೇವಿ ವರ್ಣನೆಯಲ್ಲಿನ ಒಂದು ಶ್ಲೋಕ ಈ ರೀತಿ ಇದೆ.

ಸುರೂಪರೂಪಾ ಯಥದೇವ ಕನ್ಯಾ |
ಸುವಿಭಕ್ತಿ ಗಾತ್ರಾ ಶುಭ ನಿರ್ಮಲಾಂಗೀ ||
ನಸ್ಯೋಸ್ತಿ ದೇವೋ ನಚ ಮಾನುಷೋ ವಾ |
ಯೆ ಮಾಯ ದೃಷ್ಟ್ವಾಧಲಭೇತ ತೃಪ್ತಿಃ ||

ಮಾಯಾದೇವಿ ದೇವ ಕನ್ಯೆಯ ಹಾಗೆ ಅಂದವಾದ ರೂಪವನ್ನು ಹೊಂದಿರುವವಳು. ತಿದ್ದಿ

ತೀರಿಸಿದ ಅಂಗಗಳನ್ನು ಹೊಂದಿರುವವಳು. ಶುಭಕರವಾದ, ನಿರ್ಮಲವಾದ ಶರೀರವನ್ನು ಹೊಂದಿದವಳು. ಆಕೆಯನ್ನು ನೋಡಿ ತೃಪ್ತಿ ಹೊಂದದ ದೇವಲೋಕದ ವಾಸಿಯಾಗಲೀ ಮನುಷ್ಯನಾಗಲೀ ಯಾರೂ ಇಲ್ಲ.

ಮೇಲಿನ ಶ್ಲೋಕದಲ್ಲಿನ ಮೊದಲನೆಯ ಪಾದದಲ್ಲಿನ 'ಯಥ' ಎಂಬುದಕ್ಕೆ ಬದಲಾಗಿ 'ಯಥಾ' ಎಂದಿರಬೇಕು. ಹಾಗೇಯೇ ನಾಲ್ಕನೆಯ ಪಾದದಲ್ಲಿ 'ಮಾಯ' ಎಂಬುದಕ್ಕೆ ಬದಲಾಗಿ 'ಮಾಯಾಂ' ಎಂದಿರಬೇಕು. 'ತೃಪ್ತಿ' ಎಂಬ ಪದದ ಬದಲಾಗಿ 'ತೃಪ್ತಿಂ' ಎಂದಿರಬೇಕು. ಈ ಒಂದು ಸಂಕರ ಸಂಸ್ಕೃತದಲ್ಲಿ ಕವಿಗಳಾದವರು ಶಬ್ದ ಸ್ವರೂಪಗಳನ್ನು ತಮಗೆ ಇಚ್ಛೆ ಬಂದ ಹಾಗೆ ಬದಲಾಯಿಸುತ್ತಿದ್ದರು: ವಿಭಕ್ತಿಗಳನ್ನು ವಿವಕ್ಷಿಯಿಲ್ಲದಂತೆ ಬಳಸುತ್ತಿದ್ದರು.

'ಯತ್ರ ಸ್ಥಿತ್ವಾ ಸುಮತೇ
ದ ರ್ಮೇಷ್ಯಸಿ ಬೋಧಿಸತ್ತ್ವ ಚಿಂತಮ್'

ಮೇಲೆ ನೀಡಿರುವ ನಿದರ್ಶನದಲ್ಲಿ 'ಧರ್ಮಯಿಷ್ಯಸಿ' ಎಂಬುದಕ್ಕೆ ಧರ್ಮೇಷ್ಯಸಿ ಎಂಬುದನ್ನೇ ಬಳಸಿದ್ದಾನೆ, ಸಂಕರ ಸಂಸ್ಕೃತ ಕವಿ. ಜೈನ ಕವಿಗಳೂ ನಡುವಡುವೆ ಪ್ರಾಕೃತ ರೂಪಗಳನ್ನು ಬಳಸಿದ್ದಾರೆ. ಯಾರೂ ತಮ್ಮನ್ನು ಆಕ್ಷೇಪಿಸಬಾರದೆಂದು ತಮ್ಮದು ಸಮ ಸಂಸ್ಕೃತ ಪ್ರಾಕೃತ ಭಾಷೆ ಎಂಬುದಾಗಿ ಹೇಳಿಕೊಂಡಿದ್ದಾರೆ.

ಕಾವ್ಯ ಮಾಲೆಯ ಏಳನೆಯ ಸಂಪುಟದಲ್ಲಿನ ಸ್ತೋತ್ರಕಾರರಲ್ಲಿ ಈ ಜಿನ ವಲ್ಲಭಸೂರಿ ಕನ್ನಡ ಮಹಾಕವಿಯಾದ ಪಂಪನ ಸೋದರನಾದ ಜಿನವಲ್ಲಭನೇ ಇರಬಹುದಾ ಎಂಬ ಸಂದೇಹವುಂಟಾಯಿತು. ಈ ಸ್ತೋತ್ರವನ್ನು ಸಂಪಾದನೆ ಮಾಡಿರುವ ಸಂಪಾದಕರು "ಸ್ತೋತ್ರಸ್ಯಾಸ್ಯ ಏಕಮೇವ ಪುಸ್ತಕಂ ಸಂವೇಗಿ ಸಾಧುವರ ಶ್ರೀಶಾಂತಿ ವಿಜಯಮುನಿಭಿಃ ಅಸ್ಮಭ್ಯಂ ದತ್ತಮ್. ಪುಸ್ತಕಾಂತರಂ ಟೀಕಾವಾನೋಪಲಬ್ಧೇ ಕ್ವಚಿತ್ ಸಂದೇಹೋ ವರ್ತತೇ" - ಈ ಪುಸ್ತಕಕ್ಕೆ ಪ್ರತ್ಯಂತರ ದೊರೆಯಲಿಲ್ಲ. ಒಂದೇ ಒಂದು ಪ್ರತಿಯನ್ನು ಶಾಂತಿ ವಿಜಯಮುನಿ ನಮಗೆ ಕೊಟ್ಟರು. ಮತ್ತೊಂದು ಪ್ರತಿಯಾಗಲೀ ಟೀಕೆಯಾಗಲೀ ದೊರೆಯಲಿಲ್ಲ. ಅಲ್ಲಲ್ಲಿ ಸಂದೇಹಗಳು ಇವೆ ಎಂಬುದಾಗಿ ಅಡಿಟಿಪ್ಪಣಿಯಲ್ಲಿ ನೀಡಿದ್ದಾರೆ.

ಮತ್ತೊಬ್ಬ ಸುಪ್ರಸಿದ್ಧ ಜಿನವಲ್ಲಭಸೂರಿ ಜೈನ ವಾಙ್ಮಯದಲ್ಲಿ ನಮಗೆ ಕಾಣ ಸಿಗದೇ ಇರುವುದರಿಂದ, ಪಂಪ ಮಹಾಕವಿಯ ಸೋದರನಾದ ಜಿನವಲ್ಲಭ ಕನ್ನಡ,

ಸಂಸ್ಕೃತ, ಆಂಧ್ರಭಾಷೆಗಳಲ್ಲಿ ಕವಿಯೂ ಆಗಿದ್ದ ಕಾರಣ ಮಹಾವೀರ ಸ್ವಾಮಿ ಸ್ತೋತ್ರವನ್ನು ರಚಿಸಿರುವ ಜಿನವಲ್ಲಭನು ಬೇರೆ ಯಾರೂ ಆಗಿರದೇ ಪಂಪನ ತಮ್ಮನಾದ ಜಿನವಲ್ಲಭನೇ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದೇನೆ.

ಜಿನವಲ್ಲಭ ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಕಾವ್ಯ ರಚನಾ ಸಾಮರ್ಥ್ಯವನ್ನು ಹೊಂದಿದ್ದವನು. ಈತನು ಜೈನಾಚಾರ್ಯನಾದುದರಿಂದ ಸಮಸಂಸ್ಕೃತ ಪ್ರಾಕೃತದಲ್ಲಿ ಎಷ್ಟೋ ರಚನೆಗಳನ್ನು ಮಾಡಿದ್ದಿರಬೇಕು. ಪ್ರಸ್ತುತದಲ್ಲಿ ಈ ಒಂದು ಕೃತಿ ಮಾತ್ರ ಉಪಲಬ್ಧವಾಗಿದೆ. ಪ್ರಯತ್ನಿಸಿದರೆ ಕನ್ನಡ ನಾಡಿನಲ್ಲಿಯೋ, ಜೈನ ಮಠಗಳಲ್ಲಿಯೋ, ಜೈನ ಮುನಿಗಳ ಬಳಿಯೋ ಈತನ ಮತ್ತೆ ಕೆಲವು ರಚನೆಗಳು ದೊರೆಯಬಹುದು.

ಜಿನವಲ್ಲಭನ ಈ ಮಹಾವೀರ ಸ್ತೋತ್ರ ಮೂವ್ವತ್ತು ಶ್ಲೋಕಗಳ ಒಂದು ಸ್ತೋತ್ರ. ವಸಂತತಿಲಕ, ಮಾಲಿನಿ, ಪೃಥ್ವೀ, ಶಿಖರಿಣಿ, ಮಂದಾಕ್ರಾಂತ, ಶಾರ್ದೂಲ ವೃತ್ತ ಮುಂತಾದ ವೃತ್ತಗಳನ್ನು ಬಳಸಿದ್ದಾನೆ.

ಭಾವಾರಿವಾರಣ ನಿವಾರಣ ದಾರುಣೋರು
ಕಣ್ಠೀರವಂ ಮಲಯಮನ್ದರಸಾರ ಧೀರಮ್
ವೀರಂ ನಮಾಮಿ ಕಲಿಕಾಲ ಕಲಙ್ಕಪಙ್ಕ
ಸಮ್ಭಾರ ಸಂಹರಣ ತುಙ್ಗ ತರಙ್ಗ ತೋಯಮ್ ||೧||

ಮನೋವಿಕಾರಗಳೆಂಬ ಆನೆಗಳನ್ನು ಪಳಗಿಸುವುದರಲ್ಲಿ ಭಯಂಕರ ಮಹಾ ಕಂಠೀರವನೂ, ಮಲಯಮಂದರ ಪರ್ವತಗಳ ಹಾಗೆ ಧೀರನು, ಕಲಿಕಾಲದ ಪಾಪದ ಕೆಸರಿನ ಸಮೂಹವನ್ನು ತೊಲಗಿಸುವುದಕ್ಕೆ ಮೇಲೆದ್ದ ಜಲತರಂಗದಂತಹವನೂ, ಆದ ಮಹಾ ವೀರನನ್ನು ನಮಸ್ಕರಿಸುತ್ತಿದ್ದೇನೆ.

ಬಾಧಂ ವಿಸಾರಿ ಗರಿಮಾ ಮಹಿಮಾ ತವೇಹ
ಬುದ್ಧೋ ನ ದೇವ ಗುರುಣಾವಿ ಪುರನ್ದರೇಣ
ತಂ ಕೋಽ ವ ಗಸ್ತೂ ಮಖಿಲಂ ಜಡಿಮಾಲಯೋಹ
ಮಿಚ್ಛಾಮಿ ಕಿಸ್ತು ತವಣೇವ ಗುಣಾಣುದೇವ ||೨||

ಓ ದೇವಾ! ನಿನ್ನ ಮಹಿಮಾ ವಿಶೇಷವು ಲೋಕವೆಲ್ಲಾ ವ್ಯಾಪಿಸುತ್ತಿದೆ. ಇದನ್ನು ಸುರಗುರುವಾದ ಬೃಹಸ್ಪತಿಯಾಗಲೀ, ಸುರರಾಜನಾದ ಇಂದ್ರನಾಗಲೀ ಅರಿಯದೆ

ಹೋದರು. ಇದು ನಿಜ. ಇಂತಹ ಮಹಿಮಾಗರಿಮೆಯನ್ನು ತಿಳಿದುಕೊಳ್ಳುವುದಕ್ಕೆ ಜಡತ್ವಕ್ಕೆ ನೆಲೆಯಾಗಿರುವ ನಾನೆಷ್ಟರವನು. ನಿನ್ನಗುಣಗಳಲ್ಲಿ ಒಂದು ಅಣುವಿನಷ್ಟಾದರೂ ಅನುಗ್ರಹಿಸು ಎಂದಷ್ಟೇ ಕೋರುತ್ತಿದ್ದೇನೆ.

ಸನ್ತೋ ಗುಣಾ ಗುಣಿಗರೋತವಹಾಸ ಹಂಸ
ನೀಹಾರ ಹಾರ ಧವಲ ಬಾಹುಲೀ ಭವನ್ತಿ
ತೇಸೋಮ ಸೂರ ಹರಿ ಹೀರ ವಿರಞ್ಚಿ ಬುದ್ಧ
ಮಾಯಾವಿದೇವ ನಿವಹೇನ ಮಲೀಮಸಾವಾ ||೩||

ಗುಣವಂತರಲ್ಲಿ ಶ್ರೇಷ್ಠನೇ, ನಿನ್ನ ಉತ್ತಮ ಗುಣಗಳು ನಗೆಯಂತೆ, ಹಂಸದಂತೆ, ಮಂಜಿನಂತೆ, ಮುತ್ತಿನಹಾರದಂತೆ ಬಿಳಿಯವು. ಅವು ಆಗಿಂದಾಗ್ಗೆ ಇಮ್ಮಡಿಯಾಗುತ್ತಿರು ತ್ತವೆ. ಅವುಗಳನ್ನು ಚಂದ್ರನೂ, ಸೂರ್ಯನೂ, ವಿಷ್ಣು, ಶಿವ, ಬ್ರಹ್ಮ, ಬುದ್ಧನೂ, ಮಾಯಾವಿಗಳಾದ ದೇವತೆಗಳು ಮಲಿನಗೊಳಿಸಬಲ್ಲರೇ? (ಹೀರಃ = ಶಿವ ಶಬ್ದಾರ್ಥ ಕಲ್ಪತರು)

ದೇವಂ ಭವನ್ತ ಮಪಹಾಯ ದುರನ್ತ ಮೋಹನ
ಸಂಛನ್ನ ಬುದ್ಧಿ ಮಿಹಿರಾ ಬಹುಭೂರಿ ಕಾಲಮ್
ಸಂಹಾರ ನೀರನಿಲಯೇ ಬಹು ಸಂಸರನ್ತೋ
ವಿನ್ದನ್ತಿ ಜಾನ್ತುನಿವಹಾ ನಹಿ ಸಿದ್ಧಭಾವಮ್||೪||

ದುರಂತವಾದ ಮೋಹಾಂಧಕಾರದಲ್ಲಿ ಮುಚ್ಚಿ ಹೋಗಿರುವ ಬುದ್ಧಿ ಎಂಬ ಸೂರ್ಯ ಹೊಂದಿದವರಾಗಿ, ಬಹಳ ಕಾಲ ಸಂಸಾರಸಾಗರದಲ್ಲಿ ಬಡಿದಾಡುತ್ತಿರುವ ಜೀವರಾಶಿಗಳಿಗೆ ನಿನ್ನನ್ನು ಬಿಟ್ಟರೆ ಸಿದ್ಧಭಾವ -ಮೋಕ್ಷ ಲಭಿಸುವುದಿಲ್ಲ.

ಯುಗ್ಮಮ್ :-

ಸಾ ಸೂಯ ಸಂಗಮ ಸುರೋರು ಸಮೂಢ ದಮ್ಭ
ಸಂರಮ್ಭ ಸಂತಮನ ಸಂಚಯ ಚಣ್ಡಭಾಸಮ್
ಓಂಸಾ ಸರೇರುಹ ತಮಿೂರಮಣಂ ಚಿರೋಡಾ
ಹಂಕಾರ ಕನ್ದಂಲ ದಲೀ ಕರಣಾಬ ದಂಡಮ್||೫||

ವನ್ದೇ ಹ ಮಿನ್ದುದಲ ಭಾಲಮಮದ್ಧಬಧ (ದ್ರ?)
ಸಂದೋಹ ಮಸ್ಥಿರ ರವರಂ ದರಕನ್ದ ಕೋಲಮ್

ಗಮ್ಭೀರ ಸಮ್ಭವ ಜರಾಮರಣೋರುತೀರ
ಸಂಸಾರ ಸಾಗರ ತರೀಕರಣೆಂಚ ವೀರಮ್ ||

ಅಸೂಯೆ, ಸ್ತ್ರೀವ್ಯಾಮೋಹ ಹೆಚ್ಚಾಗಿ ಬೆಳೆದು ಹೋಗಿರುವ ದೇವತೆಗಳ, ಮುದುರಿ ಹೋದ ಗರ್ವಸಂರಂಭವೆಂಬ ಹಿರಿದಾದ ಕತ್ತಲಿಗೆ ಚಂಡ ಭಾಸ್ಕರನಂತಹವನು, ಹಿಂಸೆ ಎಂಬ ಕಮಲಕ್ಕೆ ಚಂದ್ರನಂತಹವನು, ಚಿರಕಾಲದಿಂದಲೂ ನಾಟಿಕೊಂಡು ಹೋಗಿರುವ ಅಹಂಕಾರವೆಂಬ ಬೇರುಗಳನ್ನು ಚೂರು ಚೂರಾಗಿ ಕತ್ತರಿಸಿ ಹಾಕುವ ಖಡ್ಗದಂಡ-ದಂತಹವನು.

ಚಂದ್ರಶಕಲದಂತಹ ಪಣೆಯನ್ನುಳ್ಳವನೂ, ಅಧಿಕವಾದ ಕಲ್ಯಾಣ ಸಮೂಹಕ್ಕೆ ನಿಲಯವಾದಂತಹವನೂ, ಭಯವೆಂಬ ಬೇರನ್ನು ಕಿತ್ತೆಸೆಯುವ ವರಾಹದಂತಹವನೂ, ಗಂಭೀರವಾದ ಜನನಮರಣಗಳೆಂಬ ಕೊನೆಮೊದಲಿಲ್ಲದ ನೀರನ್ನು ಹೊಂದಿರುವ ಸಂಸಾರ ಸಾಗರವನ್ನು ದಾಟುವುದಕ್ಕೆ ನಾವೆಯಂತಹವನೂ ಆದ ಮಹಾವೀರನಿಗೆ ನಮಸ್ಕರಿಸುತ್ತಿದ್ದೇನೆ.

- ಕವಿಯು 'ತರೀಕರಣೆಂ' ಎಂಬ ವಿಚಿತ್ರವಾದ ಪ್ರಯೋಗವನ್ನು ಮಾಡಿದ್ದಾನೆ. 'ತರಿ'ಯಂತಹವನೆಂದೂ - ನಾವೆಯಂತಹವನೆಂದೂ ಅರ್ಥ. ಕರಣೆ ಎಂಬ ಮಾತು ತೆಲುಗಿನದು. ಇದು ಪ್ರಾಕೃತದೊಳಕ್ಕೆ ಪ್ರವೇಶಿಸಿ, ಆ ಮೂಲಕ ಸಂಸ್ಕೃತ ಶಬ್ದ ಭಂಡಾರಕ್ಕೆ ಸೇರಿದೆ ಎಂದು ನನ್ನ ಅಭಿಪ್ರಾಯ. "ಇಕ್ಕರಣೆಯನನ್ಯ ಮೆಱಗಷ್ಮೆತಿ ದುರ್ಮಾತ್ಮಾ" - ಉತ್ತರ ಹರಿವಂಶದ ಪ್ರಯೋಗವನ್ನು ಶಬ್ದ ರತ್ನಾಕರವು ಕೊಟ್ಟಿದ್ದು ದೇ.ವಿ. 'ವಿಧಮು' (ವಿಧ) ಎಂಬ ಅರ್ಥವನ್ನು ನೀಡಿದೆ. ವಿಧ ಎಂದರೆ ಹೋಲಿಕೆ, ಸದೃಶ ಎಂಬ ಅರ್ಥಗಳಿವೆ. ತರೀಕರಣೆಂ ತರಿಯಂತಹವನು ಎಂದು ಅರ್ಥ. ಕವಿಯು ಕರಣೆ ಎಂಬ ತೆಲುಗು ಅವ್ಯಯವನ್ನು ಏಕಾರಾಂತ ಪ್ರಾತಿಪದಕವಾಗಿ ಗ್ರಹಿಸಿ ಕರಣೆಂ ಎಂಬ ದ್ವಿತೀಯಾ ವಿಭಕ್ತಿಯಲ್ಲಿ ಪ್ರಯೋಗಿಸಿದ್ದಾನೆ.

ವಿಶೇಷಕಮ್ :-

ಉದ್ದಾಮ ಕಾಮಭರಭಙ್ಗುರ ಮಙ್ಗಭಙ್ಗ
ಸಂಸಙ್ಗ ಬನ್ಧುರ ಮುರೋರುಹ ಭಾರಭಿನ್ನಮ್
ದೇಹಂ ಸಲೀಲ ಪರಿರಿಙ್ಖಣ ಮಞ್ಜು ಶಿಞ್ಜ
ಮಞ್ಜೀರ ತಾರುಚರಣಂ ಸರಸಂ ವಹನ್ತಿ||೭||

ಸಙ್ಗೀಯ ತಾಲ ಲಯ ಚ ಞ್ಚರ ಚಾರಚಾರೀ
ಸಞ್ಚಾರಿಣೀ ಕರಣಬನ್ಧ ಕಲಾಸು ಸಜ್ಜಾ,
ಉನ್ನಾಲ ನೀರರುಹ ಕೋಮಲ ಬಾಹುವಲ್ಲೀ
ಛಲ್ಲೀವ ವಿದ್ಧ ಬಹು ಕಾಮಿ ಕುರುಙ್ಗಸಜ್ಜಾ||೮||

ಹೇಲಾ ವಿಲೋಲ ಮಣಿ ಕುಣ್ಡಲ ಲೀಢಗಣ್ಡಾ
ಕಙ್ಕೇಲ್ಲಿ ಪಲ್ಲವಕರಾವರಕಮ್ಬು ಕಣ್ಠೀ
ಕೇಲೀಲಲಾಮ ರಮಣೀ ರಮಣೆಯ ಹಾವಾ
ನಾಲಂನಿವಹನ್ತುಮಿಹತೇ ವಿಮಲಾಭಿಸಂಧಿಮ್||೯||

ಉದ್ದಾಮರಾದ ಕಾಮ ಭಾರದಿಂದ ನಶಿಸಿ ಹೋಗುವ ಅಂದವಾಗಿ ಮೂಡಿದ ಅಂಗಗಳ ವಿಲಾಸದಿಂದ ಬಂಧುರಲಾದ, ಸ್ತನಭಾರದಿಂದ ಬಳಲಿ ಹೋಗುವುದು, ಸವಿಲಾಸ ಗಮನದಿಂದ ಮನೋಹರವಾಗಿ ರವಳಿಸುತ್ತಿರುವ ಅಂದುಗೆಗಳಿರುವ ಪಾದಗಳನ್ನುಳ್ಳದ್ದು ಆದ ಶರೀರದಿಂದ ಒಪ್ಪುವ ;

ಗೀತತಾಳಲಯ ಚಾರಾಚರೀ ಚತುರತೆಯನ್ನು ಹೊಂದಿರುವ ಕಾಮಶಾಸ್ತ್ರ ಬಂಧಗಳಲ್ಲಿ ಪರಿಣತಿ ಹೊಂದಿರುವ, ತಾವರೆಯ ದಂಟಿನ ಹಾಗೆ ಕೋಮಲ ಬಾಹುಗಳನ್ನು ಹೊಂದಿರುವ, ಕಾಮುಕರೆಂಬ ಅನೇಕ ಜಿಂಕೆಗಳನ್ನು ತಿವಿದ ಈಟಿಯಂತಹ;

ಕಪೋಲಗಳ ಮೇಲೆ ವಿಲಾಸದಿಂದ ತೂಗಿ ತೊನೆಯುವ ಕುಂಡಲಗಳನ್ನೇ ಹೊಂದಿರುವ, ಅಶೋಕ ವೃಕ್ಷದ ಚಿಗುರಿನಂತಹ ಕೈಗಳನ್ನೆ ಹೊಂದಿರುವ ಉತ್ತಮವಾದ ಶಂಖದಂತಹ ಕಂಠವನ್ನೆ ಹೊಂದಿರುವ, ರತಿ ಕ್ರೀಡೆಯಲ್ಲಿ ರಂಜನೆಯನ್ನು ನೀಡು ವಂತಹವಳು, ರಮಣೀಯ ಹಾವಭಾವಗಳನ್ನು ಹೊಂದಿರುವ ಸುಂದರಿಯೂ ಸಹಾ ನಿನ್ನ ಪವಿತ್ರವಾದ ಲಕ್ಷ್ಯವನ್ನು ಹಾಳುಮಾಡಲಾರಳು.

ಸಞ್ಚಾರಿ ಕಿನ್ನರ ಗಣಾರವ ವೇಣುವೀಣಾ
ಸನ್ಧಾನಖಿನ್ನ ಕಲಗೇಯ ರವಾಭಿ ರಾಮಾ
ಅಕಾಲ ಭಾವಿ ಕುಗುರೂಹ ಕುದೀ ಕುದೇವ
ಸಂಬದ್ಧ ಬುದ್ಧ (ದ್ಧಿ?) ಹರಣೀ ತವದೇವ ವಾಣೀ||೧೦||

ದೇವಾ ! ನಿನ್ನ ವಾಣಿ(ಮಾತು) ಸಂಚರಿಸುತ್ತಿರುವ ಕಿನ್ನರರ ಪಲುಕುಗಳು. ವೇಣು, ವೀಣಾರವಗಳು ಜಿರೆತ ಗೇಯ ಧ್ವನಿಯ ಹಾಗೆ ರಮ್ಯವಾದುದು. ಕಾಲ ಪರ್ಯಂತ

ಉಂಟಾಗುವ ಕೆಟ್ಟ ಊಹೆಗಳು, ಕೆಟ್ಟ ಬುದ್ಧಿಗಳೆಂಬ, ಕೆಟ್ಟ ದೇವತೆಗಳ ಮೇಲೆ ಮಗ್ನವಾದ ಬುದ್ಧಿಯನ್ನು ಕಳೆಯುವಂತಹುದು. ಕಾಲ ಎಂದರೆ ಕಾಲಪುರುಷ, ಮೃತ್ಯು. ಮೃತ್ಯು ಪರ್ಯಂತರವೂ ಕೆಟ್ಟ ಕೆಟ್ಟ ಆಲೋಚನೆಗಳು ಬುದ್ಧಿಗಳು ಹುಟ್ಟುತ್ತಲೇ ಇರುತ್ತವೆ. ಮನಸ್ಸು ಚಂಚಲವಾದುದು ಆದ್ದರಿಂದ ಕಾಲಪರ್ಯಂತರವೂ ಅಕಾಲವೇ?

ಸನ್ದೇಹದಾವ ಜಲವಾಹ ಮಜೀವ ಜೀವ
ಭಾವಾವಭಾಸ ತರಣಿಂ ಭವಸಿಂಧು ನಾವಮ್
ಆಗಾಮಿ ಕೇವಲರಮಾ ತರುಣೀವಿವಾಹಾ
ದೇವಾಗಮಂತವ ನರಾವಿಮಲಾಮಹನ್ತಿ||೧೧||

ದೇವಾ! ನಿನ್ನ ಆಗಮ (ಉಪದೇಶ) ಸಂದೇಹಗಳೆಂಬ ದಾವಾನಲವನ್ನು ತಂಪು ಮಾಡುವ ಮೇಘದಂತಹುದು. ಚೇತನಾ ಚೇತನಗಳ ಅಂತಃಕರಣಗಳನ್ನು ಪ್ರಕಾಶಗೊಳಿಸುವ ಸೂರ್ಯನಂತಹುದು. ಅದನ್ನು ಭಾವೀ ಕೈವಲ್ಯ ಲಕ್ಷ್ಮಿಯನ್ನು ವಿರಾಹವಾಗಿಯೇ ಪವಿತ್ರರಾದ ನರರು ಪೂಜಿಸುತ್ತಿದ್ದಾರೆ. ಮಹಾ ಪೂಜಯಾಮ್ - ಧಾತು.

ದೇವಾ ಮಹಾ ಪರಿಮಲಂ ತರಲಾಲಿ ಜಾಲ
ಝುಙ್ಕಾರ ಹರೀತವವೀರ ಸಭಾನುಭೂರಿ
ಫುಲ್ಲಾರವಿನ್ದ ನಟಸುನ್ದರ ಸಿನ್ಧುವಾರ
ಮನ್ದಾರ ಕುನ್ದ ಕಬರಂ ಕುಸುಮಂ ಕಿರನ್ತಿ ||೧೨||

ಓ, ಮಹಾವೀರಾ! ದೇವತೆಗಳು, ನಿನ್ನ ಸಭೆಗಳಲ್ಲಿ ಮಹಾ ಪರಿಮಳ ಭರಿತಗಾಳಿ ಹಾರಾಡುತ್ತಿರುವ ದುಂಬಿಗಳ ಝೇಂಕಾರಗಳಿಂದ ಹೃದಯವನ್ನುಸೆಳೆಯುವಂತಹ ಬಿರಿದ ಹೂಗಳನ್ನು ಆಗತಾನೇ ಅರಳಿದ ಸಿಂಧುವಾರ, ಮಂದಾರದ ಹೂಗಳು ಮೊದಲಾದ ರಂಗು ರಂಗಿನ ಹೂಗಳನ್ನು ಬೆರಸಿ ಎರಚುತ್ತಿದ್ದಾರೆ.

ನಿಃಸೀಮ ಭೀಮ ಭವಸಂಭವ ರೂಢಗೂಢ
ಸಂಮೋಹ ಭೂವಲಯ ದಾರಣ ಸಾರಸೀರಮ್
ವೀರಂ ಕುವಾಸ ಮಲಹಾರಿ ಸುವಾರಿ ಪೂರ
ಮುತ್ತುಙ್ಗ ಮಾರಕರಿ ಕೇಸರಿಣಂ ನಮಾಮಿ ||೧೩||

ಕೊನೆಯೂ ಇಲ್ಲದ, ಭಯಂಕರವಾದ ಸಂಸಾರದಲ್ಲಿ ಹುಟ್ಟಿ ಹೆಪ್ಪುಗಟ್ಟಿರುವ, ಕಾಣಲಾಗದ ಮೋಹವೆಂಬ ಮೃತ್ ಆವರಣವನ್ನು ಭೇದಿಸಬಲ್ಲ ಗಟ್ಟಿಯಾದ ನೇಗಿಲಂತಹವನು,

ದುಷ್ಟವಾದ ಸಂಸಾರ ನಿವಾಸದಲ್ಲಿ ಅಂಟಿಕೊಂಡಿರುವ ಮಲವನ್ನು ಕಳೆಯಬಲ್ಲ ಪವಿತ್ರ ಜಲಪ್ರವಾಹದಂತಹವನು, ಮಾರನಂತಹ ಮಹಾಮತಂಗ ಗಜಕ್ಕೆ ಸಿಂಹದಂತಹವನೂ ಆದ ಮಹಾವೀರನಿಗೆ ನಮಸ್ಕರಿಸುತ್ತಿದ್ದೇನೆ.

ಭಿನ್ನನ್ನ ಮನ್ತರಣ ಕಾರಾಣ ಮಾನ್ತರಾಯಂ
ಸಂರುದ್ಧ ರೋಗ ಸಮವಾಯ ಮಲೋಭಮಾಯಮ್
ವಿಚ್ಛಿನ್ನ ಮೋಹತಿಮಿರಾವರಣಾವಸಾಯಂ
ವೀರಂ ನಮಾಮಿ ನವಹೇಮ ಸಮಿದ್ಧ ಕಾಯಮ್||೧೪||

ಅಂತರಂಗದ ಸಂಘರ್ಷಗಳಿಗೆ ಕಾರಣವಾದ ವಿಘ್ನಗಳನ್ನು ಛೇದಿಸುವವನೂ ರೋಗ ಸಮುದಾಯವನ್ನು ನಿರೋಧಿಸುವವನೂ, ಲೋಭ, ಕಪಟಗಳಿಲ್ಲದವನೂ ಮೋಹಾಂಧಕಾರವೆಂಬ ಆವರಣಗಳನ್ನೆ ಬೀಳಿಸಬಲ್ಲವನೂ, ಬಂಗಾರದ ಹಾಗೆ ಮೆರೆಯುವ ದೇಹವನ್ನುಳ್ಳವನೂ ಆದ ವೀರನಿಗೆ ನಮಸ್ಕರಿಸುತ್ತಿದ್ದೇನೆ.
– ಇದರಲ್ಲಿ 'ಹೇಮಾ' ಎಂಬುದರಲ್ಲಿ ಶ್ಲೇಷೆಯ ಧ್ವನಿ ಇದೆಯಾಗಲೀ, ಸ್ಪಷ್ಟವಾಗಿಲ್ಲದ ಕಾರಣ ಅದನ್ನು ವಿವರಿಸಿಲ್ಲ.

ವನ್ದಾರು ವಾಸವ ಸುರಾಸುರ ಭಾಸುರಾಲ –
ಙ್ಕಾರಮಲಚ್ಛವಿ ಪರಾಗ ಸಮುದ್ಧುರಾಣಿ
ಸೇವಾಮಿತೇ ಚರಣವಾರಿರುಹಾಣಿ ಭೂರಿ
ಸನ್ದೇಹ ರೇಣು ಹರಣೋರು ಸಮೀರ ವೀರ||೧೫||

ಓ ವೀರಾ, ನೀನು ಅನೇಕ ಮಹಾ ಸಂದೇಹಗಳೆಂಬ ಧೂಳನ್ನು ನಾಶ ಮಾಡುವ ಝಂಝಾವಾತದಂತಹವನು. ಇಂದ್ರಾದಿದೇವತೆಗಳು, ಅಸುರರೂ ನಿನ್ನ ಪಾದಗಳಿಗೆ ನಮಸ್ಕರಿಸುತ್ತಿರುವಾಗ, ಅವರ ಅಲಂಕೃತ ಕಾಂತಿಗಳು ನಿನ್ನ ಪಾದಗಳ ಮೇಲೆ ಓಡಾಡಿ, ಅವು ಎತ್ತರವಾಗಿಯೂ, ಉನ್ನತವಾಗಿಯೂ ಕಾಣಿಸುತ್ತವೆ. ಅಂತಹ ಪಾದಕಮಲಗಳನ್ನು ಸೇವಿಸುತ್ತಿದ್ದೇನೆ. – ಕವಿ 'ಸೇವಾಮಿ' ಎಂದು ಸೇವ ಧಾತುವನ್ನು ಲಡೇಕ ವಚನವನ್ನು ಪರಸ್ಮೈ ಪದವಾಗಿ ಬಳಸಿದ್ದಾನೆ. ಇದು ಆತ್ಮನೇ ಪದ. ಇದು ಅಪರೂಪಕ್ಕೆ ಪರಸ್ಮೈ ಪದವಾಗಿಯೂ ಇದೆಯೆಂದು ಮೋನಿಯರ್ ವಿಲಿಯಮ್ಸ್ ಸಂಸ್ಕೃತಾಂಗ್ಲ ಕೋಶವು ಹೇಳುತ್ತದೆ.

ಅಙ್ಕಾಮಿತೇ ಚರಣತಾಮರ ಸಾಲಿಲೀಲಾ
ಸನ್ದಾಯ ಪಞ್ಚಮ ಮಹಾಗಣ ಧಾರಿವಾಣಿ

ಸಂಬದ್ಧ ಬುದ್ಧಿ ಕರುಣಾಲಯ ಲಿಙ್ಗಸಿದ್ಧ
ಸಙ್ಘಾವಳೀಮಿಗಣಂ ಚರಣಂ ಚರನ್ತಮ್||೧೬||

ನಿನ್ನ ಚರಣಗಳು (ಧರ್ಮ ಪ್ರಚಾರಕ್ಕಾಗಿ) ಯಾವಾಗಲೂ ಸಂಚರಿಸುತ್ತಾ ಇರುತ್ತವೆ. ಕಮಲಗಳಲ್ಲಿ ಭೃಂಗಗಳು ತಿರುಗಾಡುತ್ತಾ ಝೇಂಕಾರ ಮಾಡುತ್ತಿರುವಂತೆ ನಿನ್ನ ಚರಣಾರವಿಂದಗಳಲ್ಲಿ ತುಂಬಿಗಳ ಹಾಗೆ ಮಹಾಗಣಗಳು ಪಂಚಮ ಸ್ವರದಿಂದ ನಿನ್ನ ಗುಣಗಾನವನ್ನು ಮಾಡುತ್ತಿರುತ್ತವೆ. ಹಾಗೆಯೇ ಸಂಸಾರದಲ್ಲಿ ಸಿಕ್ಕಿಕೊಂಡ, ಬುದ್ಧಿವಂತರ ಬಗ್ಗೆ ಕರುಣಾಪೂರ್ಣವಾದ ಮನಸ್ಸುಳ್ಳ ಸಿದ್ಧರ ಸಂಘಗಳು, ಮುನಿಗಣಗಳೂ ಎಷ್ಟೋ ನಿನ್ನ ಚರಣಗಳ ಸುತ್ತಲು ಮುತ್ತಿರುತ್ತವೆ. ಅಂತಹ ನಿನ್ನ ಚರಣಗಳನ್ನು ಪೂಜಿಸುತ್ತೇನೆ. ಲಿಂಗ = ಮನಸ್ಸು, ಶಬ್ದಕಲ್ಪತರ. ಈ ಶ್ಲೋಕವನ್ನು ಸರಿಯಾಗಿ ಅನ್ವಯ ಮಾಡಲಾರದೆ ತಾತ್ಪರ್ಯವನ್ನು ಮಾತ್ರ ಬರೆದಿದ್ದೇನೆ.

ಯುಗ್ಮಮ್:-

ಉಚ್ಚಣ್ಡಧಾರ ಕರವಾಲ ಕರಾರಿವಾರ
ವಿಚ್ಛಿನ್ನ ಕುಮ್ಭಗಲ ನಾಲ ಕರಾಲನಾಗೇ,
ಕುನ್ತಾಪಿ ತೋಮರ ವಿಭಿನ್ನ ಪರಾಸು ದೇಹೇ
ಕಙ್ಕಾಲ ಸಙ್ಕುಲ ಭಯಾವಹ ಭೂಮಿಭಾಗೇ ||೧೭||

ಸಾವೇಗ ಹುಙ್ಕರಣ ಡಾಮರ ಮುಣ್ಡರುಣ್ಡ
ಕೀಲಾಲಲಾಲಸ ವಿಹಙ್ಗಕುಲಾವರುದ್ಧೇ,
ಆಬುದ್ಧ ಬಾಣವಿಸರೇ ಸಹಸಾ ಮವನ್ತೋ
ವೀರಂ ನರಾ ರಣಭೇರೇ ರಿಬಲಂಜಯನ್ತಿ||೧೮||

ಯುದ್ಧಗಳು ನಡೆಯುತ್ತಿವೆ. ಅವುಗಳಲ್ಲಿ ಶತ್ರುಗಳು ಹರಿತವಾದ ಮೊನೆಯುಳ್ಳ ಖಡ್ಗಗಳಿಂದ ಆನೆಗಳ ಕುಂಭಸ್ಥಲಗಳನ್ನು ಕತ್ತರಿಸಿ ಹಾಕುತ್ತಿದ್ದಾರೆ. ಆ ರೀತಿ ಕತ್ತರಿಸಿದ ಕುಂಭ ಸ್ಥಲಗಳಿಂದ ರಕ್ತನಾಳಗಳು ಹೊರಬಂದು ಭಯವನ್ನುಂಟು ಮಾಡುತ್ತವೆ. ಕುಂತ, ಖಡ್ಗ, ತೋಮರ ಮೊದಲಾದ ಆಯುಧಗಳಿಂದ ಶತ್ರುಗಳ ದೇಹಗಳು ಕತ್ತರಿಸಿ ತುಂಡಾಗಿ ಬೀಳುತ್ತಿವೆ. ಎತ್ತ ನೋಡಿದರೂ ರಣಭೂಮಿ ಭಯಂಕರವಾಗಿದೆ.

ವೇಗವಾಗಿ ಹೂಂಕರಿಸುತ್ತಿರುವ ಭಟರು ಹೋರಾಡುವ ಆ ಭಯಂಕರವಾದ

ಹೋರಾಟದಲ್ಲಿ ತಲೆಪರಿದ, ಮುಂಡಗಳಿಂದ ಚಿಮ್ಮುತ್ತಿರುವ ರಕ್ತವನ್ನು ಕುಡಿಯುವುದಕ್ಕೆ ಹಾರುತ್ತಿರುವ ಪಕ್ಷಿಗಳ ಗಲಾಟೆಯಲ್ಲಿ, ಬಾಣಗಳ ಸಮೂಹಗಳು ಬೀಸುವಿಕೆಯ ಮಹಾ ಭಯಾನಕವಾಗಿರುವ ರಣ ಬೂಮಿಯಲ್ಲಿ ಮಹಾವೀರನನ್ನು ಸ್ತುತಿಸುವ ಯೋಧರು ಎಂತಹ ಶತ್ರು ಸೈನ್ಯವಾದರೂ ಜಯಿಸಬಲ್ಲವರಾಗುತ್ತಿದ್ದಾರೆ.

ಆಸನ್ನಸಿದ್ಧಿ ಕಮಲಾ ಪರಿರಮ್ಭಲಿಮ್ಬ (ಮ್ಬಂ)
ದಮೋಘಿ ಪಾಣಿಮಿವ ಮೋಹಗಿರಿಂ ಕಿರಸ್ತಮ್
ಸಂಪತ್ತಿ ಕಾರಣ ಮಮಙ್ಗಳ ಮಾಲಕೀಲಂ
ಸೇವನ್ತಿಕೇನ ಭಗವನ್ತ ಮಘಂ ಹರನ್ತಮ್ ||೧೯||

ಮೋಕ್ಷಲಕ್ಷ್ಮಿಯನ್ನು ಸಮೀಪಕ್ಕೆ ಬರಿಸಿ ಗಾಢಾಲಿಂಗನ ಪ್ರಾಪ್ತಿಯಾಗುವ ಹಾಗೆ ಮಾಡುವವನು. ಮೋಹಪರ್ವತವನ್ನು ವಜ್ರಪಾಣಿಯ ಹಾಗೆ ನುಚ್ಚುನೂರು ಮಾಡುವವನು. ಸಂಪತ್ತಿಗೆ ಕಾರಣನಾದವನು, ಅಮಂಗಳವನ್ನು ಸಮೂಲವಾಗಿ ನಾಶಮಾಡುವ, ದಾವಾನಲದಂತಹವನು, ಪಾಪಗಳನ್ನು ಕಳೆಯುವವನೂ ಆದ ಮಹಾವೀರ ಭಗವಾನನನ್ನು ಯಾರು ತಾನೆ ಸೇವಿಸುವುದಿಲ್ಲ? - ಕವಿ ಶ್ಲೋಕದಲ್ಲಿಯೂ ಸೇವ್ ಧಾತುವನ್ನು ಪರಸ್ಮೈಪದದಲ್ಲಿ ಪ್ರಯೋಗಿಸಿದ್ದಾನೆ.

ವಸಂತತಿಲಕ :
ಆಯಾಸಭಙ್ಗ ಡಮರಾಮಯ ಸಂಪರಾಯ
ಚೋರಾರಿಮಾರಿ ವಿರಹೇಣ ಚಿರಾಯದೇವ,
ಭೂಮಂಡಲೇ ಸುನಗರಾ ನಿಗಮಾ ವಿಹಾರ
ಚಾರೇಣ ತೇ ಪರಮ ಮುದ್ಧತ ಮಾಮನನ್ತಿ ||೨೦||

ಓ ದೇವ, ಈ ಭೂಮಂಡಲದಲ್ಲಿ ನೀನು ವಿಹರಿಸುವುದರಿಂದ ಬಾಧೆ, ಪರಾಜಯ ಉತ್ಪಾತಗಳು, ವ್ಯಾಧಿಗಳು, ಯುದ್ಧಗಳು, ಚೋರಭಯ, ಶತ್ರುಭಯ, ಜನಕ್ಷಯ ಎಂಬುವಿಲ್ಲದೆ ದೊಡ್ಡ ನಗರಗಳೂ, ನಿಗಮಗಳು (ವರ್ತಕ ಸಂಘಗಳು) ದೊಡ್ಡ ಉನ್ನತಿಯನ್ನು ಹೊಂದುತ್ತವೆ. - ಮಾರಿ =ಜನಕ್ಷಯ, ಉದ್ಧತ =ಉನ್ನತಿ. ಶಬ್ದಾರ್ಥ ಕಲ್ಪತರು. ಇಲ್ಲಿ 'ನಗರ ' ಶಬ್ದವನ್ನು ಪುಲ್ಲಿಂಗವಾಗಿ ಪ್ರಯೋಗಿಸಿದ್ದನೆ. ನಗರಾಃ ಎಂದು ದೊಡ್ಡ ನಗರಗಳನ್ನು ಹೊಂದಿರುವ ವಣಿಕ್ಯ ಸಂಘಗಳು ಎಂಬುದಾಗಿ ಬಹುವ್ರೀಹಿ ಸಮಾಸ ಮಾಡಿಕೊಂಡರೆ ಈ ದೋಷವು ಹೋಗುತ್ತದೆ. ಆದರೆ ನಗರಗಳು ಮುಖ್ಯವೋ, ನಿಗಮಗಳು ಮುಖ್ಯವೋ ಎಂಬ ಸಂದೇಹವುಂಟಾಗುತ್ತದೆ.

ನಿಸ್ಸಙ್ಗ ನಿಸ್ಸಮರ ನಿಸ್ಸಮ ನಿಸ್ಸಹಾಯ
ನೀರಾಗ ನೀರಮಣ ನೀರಸ ನೀರ ರಂಸ,
ಹೇ ವೀರ! ಧೀರಿಮನಿವಾಸ ನಿರುದ್ಧ ಘೋರ
ಸಂಸಾರದಾರ ಜಯ ಜೀವಸಮೂಹ ಬನ್ಧೋ||೨೧||

ಓ ಜೀವಲೋಕಬಂಧುವೇ! ನೀನು ಸಂಗರಹಿತನು; ಯಾರೊಂದಿಗೂ ದ್ವೇಷ ಕಲಹಗಳಿಲ್ಲದವನು : ಸಾಟಿಯಿಲ್ಲದವನು : ಅಸಹಾಯ ಶೂರನು; ರಾಗರಹಿತನು: ಯಾವುದರ ಬಗ್ಗೆಯೂ ಪ್ರತ್ಯೇಕವಾದ ಮಮಕಾರವಿಲ್ಲದವನು : ಕಾಮೇಚ್ಛೆಯಿಲ್ಲದವನು: ಲಾಲಸೆಯಿಲ್ಲದವನು: ಧೀರತನಕ್ಕೆ ಮೂಲ ನೆಲೆಯಾಗಿರುವವನು, ನಿಬಿಡವೂ, ಘೋರವೂ ಆಗಿರುವ ಈ ಸಂಸಾರದಲ್ಲಿ ಸಂಚರಿಸುತ್ತಾ ಜೀವರನ್ನು ಉದ್ಧರಿಸುತ್ತಿದ್ದೀಯೆ. ನಿನಗೆ ಜಯವಾಗಲಿ - ಧೀರಿಮ ಎಂಬ ವಿಚಿತ್ರ ಪ್ರಯೋಗವನ್ನು ಮಾಡಿದ್ದಾನೆ.

ಉಲ್ಲಾಸಿ ತಾರ ತರಲಾಮಲ ಹಾರಿ ಹಾರ
ನಾರೀಗಣಾ ಬಹು ವಿಲಾಸ ರಸಾಲಸಾ ಮೇ
ಸಂಸಾರ ಸಂಸರಣ ಸಂಭವ ಭೀ ನಿಮಿತ್ತಂ
ಚಿತ್ತಂ ಹರನ್ತಿ ಭಣ ಕಿಂಕರವಾಣಿ ದೇವ! ||೨೨||

ಓ ದೇವಾ! ಉಲ್ಲಾಸವನ್ನುಂಟು ಮಾಡುತ್ತಾ, ಹೊಳೆಯುತ್ತಿರುವ ಸ್ವಚ್ಛವಾದ ಮುತ್ತಿನ ಹಾರಗಳನ್ನು ಧರಿಸಿ, ಬಹುವಿಲಾಸದಿಂದ ಮತ್ತಾಗಿ ನಡೆದಾಡುವ ನಾರೀಗಣಗಳು ಮತ್ತೆ ಈ ಸಂಸಾರದಲ್ಲಿ ಜನನ ಮರಣಗಳ ಭಯಕ್ಕಾಗಿ (ಜನನ ಮರಣಗಳಿಗೆ ಭಯ ಪಡುತ್ತಿರುವವನನ್ನು) ಮನಸ್ಸನ್ನು ಎಳೆಯುತ್ತಿವೆ. ಏನು ಮಾಡುತ್ತಿರುವೆ ಹೇಳು.

ಇಚ್ಛಾ ಮಹಾ ಸಲಿಲ ಕಾಮ ಗುಣಾಲವಾಲಂ
ಚಿನ್ತಾದಲಂ ಸಮಲಚಿತ್ತ ಮಹೀ ಸಮುತ್ಥಮ್
ಸಂಭೋಗಪುಲ್ಲಮಿವ ಮೋಹತರುಂ ಲಸನ್ತಂ
ಹೇ ವೀರ ಸಿನ್ಧುರ ಸಮುದ್ಧರ ಮೇ ಸಮುಲಮ್ ||೨೩||

ಓ ವೀರ ಮಹಾಗಜವೇ! ಮಲಿನವಾದ ಚಿತ್ತವೆಂಬ ಭೂಮಿಯಲ್ಲಿ, ಕಾಮಗುಣವೆಂಬ ಪಾತಿಯಲ್ಲಿ, ಇಚ್ಛೆ ಎಂಬ ನೀರಿನಿಂದ ಬೆಳೆದು, ಚಿಂತೆ ಎಂಬ ಎಲೆಗಳನ್ನು ಬಿಟ್ಟು, ಸಂಭೋಗವೆಂಬ ಹೂ ಬಿಟ್ಟು, ಮೆರೆಯುತ್ತಿರವ ನನ್ನ ಮೋಹವೆಂಬ ಮರವನ್ನು ತಾಯಿಬೇರಿನೊಂದಿಗೆ ಕಿತ್ತು ಹಾಕು.

ಸನ್ನದ ಸಿದ್ಧಿ ಪುರ ಸಙ್ಗಮ ಮಙ್ಗಲಾಯ
ಮಯೋರುವಾರಿ ರುಹಿಣೀ ವರಕುಞ್ಜರಾಯ
ವೀರಾಯತೇ ಚಿರಮ ಕೇವಲ ಪುಙ್ಗವಾಯ
ಕಾಮಂ ನಮೋ ಸಮದಯಾ ದಮಸತ್ತಮಾಯ||೨೪||

ಸಿದ್ಧಿಸಿದ ಮೋಕ್ಷಪುರ ಸಂಬಂಧವೆಂಬ ಮಂಗಳವನ್ನು (ಶುಭವನ್ನು) ಹೊಂದುವನು. ಮಾಯೆ ಎಂಬ ತಾವರೆಯ ಬಳ್ಳಿಗೆ ಮಹಾಗಜದಂತಹವನು (ಮಾಯೆಯನ್ನು ತಾವರೆಯ ಬಳ್ಳಿಯನ್ನು ಆನೆಯು ಮಸೂಲವಾಗಿ ಕಿತ್ತೆಸೆಯುವಂತೆ ಕೀಳುವವನು) ತುತ್ತ ತುದಿಯ ಕೈವಲ್ಯವನ್ನು ಪೊಂದಿದ ಪುರುಷ ಶ್ರೇಷ್ಠನೂ, ಸಾಟಿಯಿಲ್ಲದ ದಯಾ ದಮಾದಿ ಗುಣಗಳನ್ನುಳ್ಳ ಉತ್ತಮನಾದ ನಿನಗೆ ಮತ್ತೆ ಮತ್ತೆ ನಮಸ್ಕಾರ. ಮೂರನೆಯ ಚರಣದಲ್ಲಿ 'ಚರಮ ಕೇವಲಿ ಪುಙ್ಗವಾಯ' ಎಂಬುದಕ್ಕೆ ಬದಲಾಗಿ 'ಚರಮ ಕೇವಲಿ ಪುದ್ಗಲಾಯ' ಎಂಬುದಾಗಿರಬೇಕಿತ್ತು. ಇದೇ ಮೂಲ ಪಾಠವಿದ್ದಿರಬೇಕು ಎಂದು ನನ್ನ ಅಭಿಪ್ರಾಯ. ಜೈನ ಮತದಲ್ಲಿ ಕೇವಲ ಜ್ಞಾನಿ, ಪುದ್ಗಲ ಶಬ್ದವನ್ನು ಬೌದ್ಧ ಜೈನರಿಗೆ ಪ್ರಯೋಗಿಸುತ್ತಾರೆ. ಆಗ ತುತ್ತ ತುದಿಯ ಕೇವಲ ಜ್ಞಾನವನ್ನು ಪಡೆದವನು ಪುದ್ಗಲ (ಶ್ರೇಷ್ಠನು) ಎಂಬ ಅರ್ಥ ಸಮಂಜಸವಾಗಿರುತ್ತದೆ ಎಂದು ಭಾವಿಸುತ್ತಿದ್ದೇನೆ.

ವಸಂತತಿಲಕ :
ಹೇ ದೇವ ಕಿಙ್ಕರ ಮಿಮಂ ಪರಿಭಾವಯೇಹ
ಮಜ್ಜನ್ತ ಮಧುರ ಜಲೇ ಭವಸಿಂಧು ಪೂರೇ
ಉತ್ತಾರಣಾಯ ಕುರುವೀರ ಕರಾವಲಮ್ಬಂ
ಭೂಯೋsಸಮಞ್ಜಸ ನಿರಸ್ತರ ಚಾರಿಣೋsಮೇ ||೨೫||

ಓ ದೇವಾ! ನಾನು ಈಗ ಮಹಾ ವೇಗದಿಂದ ಹರಿಯುವ ಸಂಸಾರ ನದೀ ಪ್ರವಾಹದಲ್ಲಿ ಮುಳುಗಿ ಹೋಗುತ್ತಿದ್ದೇನೆ. ಅಸಮಂಜಸವಾದ ಕೆಲಸಗಳನ್ನು ನಿರಂತರವೂ ಮಾಡುತ್ತಿದ್ದೇನೆ. ಅಂತಹ ನಿನ್ನ ಕಿಂಕರನನ್ನು ಓ ವೀರಾ ! ಉದ್ಧರಿಸುವುದಕ್ಕೆ ನಿನ್ನ ಕೈಯನ್ನು ಆಸರೆಯಾಗಿ ನೀಡು.

ಮಾಲಿನೀ :
ಕುಸಮಯ ರುತಮಾಲಾ ಭಙ್ಗಸಂಹಾರವಾಯೋ
ಕುನಯ ಕುವಲಯಾಲೀ ಚೂರಣೇ (ಚೂರ್ಣನೇ) ಮತ್ತನಾಗ
ತವಗುಣಕಣಗುಮ್ಭೇ ಮೇ ಪರಿಣಾಮ ಮಿತ್ಥಂ
ವಿಮಲ ಮಪರಿಹೀಣಂ ಹೇಮಹಾವೀರ ಪಾಹೀ ||೨೬||

ಓ ಮಹಾವೀರ! ನೀನು ದುಷ್ಟ ಸಿದ್ಧಾಂತ ವಾಕ್ಯಗಳೆಂಬ ಕಟ್ಟಿದ ಮಾಲೆಗಳನ್ನು ಧ್ವಂಸಮಾಡುವ ವಾಯು ; ದುಷ್ಟ ಶಾಸ್ತ್ರಗಳೆಂಬ ಕಮಲ ಬಳ್ಳಿಗಳನ್ನು ತುಳಿದು ಹಾಕುವ ಆನೆ. ನಿನ್ನ ಗುಣಗಳ ಕಣಗಳ ಸಂಯೋಗದಿಂದ ನಾನು ಮೂಡಿದ ನನ್ನನ್ನು ನಿರ್ಮಲ ನನ್ನಾಗಿ, ಹೀನನಾಗದಂತೆ ಕಾಪಾಡು - ಕವಿ 'ಚೂರಣ' ಎಂಬ ಪ್ರಾಕೃತ ಪದವನ್ನು ಬಳಸಿದ್ದಾನೆ. ಇದನ್ನು ಚೂರ್ಣ ಎಂಬುದಾಗಿ ತಿದ್ದಬಹುದು. ಆದರೆ ಕವಿಯ ಪ್ರಯೋಗವನ್ನು ತಿದ್ದುವುದು ಸಾಹಸವೇ.

ಪೃಥ್ವಿ :

ಅನಯ ನಿಬಿಡೇ ಪೀಡಾಗಾರೇ ಭಯಾವಹ ದುಸ್ಸಹೇ
ವಿರಹ ವಿರಸೇ ಲಜ್ಜಾ ಪುಞ್ಜೇ ರಮೇಭವಪಞ್ಜರೇ
ನಿರಯ ಕುಹರಂಗಾಮಿ ಹೋಹಂ ನಸಿದ್ಧಿ ಮಹಾಪುರೀ
ಸರಲ ಸರಣಿಂ ಸೇವೇ ಮೂಢೇ ಗಿರಂ ತವವೀರಹೇ ||೨೭||

ಈ ಸಂಸಾರ ಪಂಜರವು ಅನಯದಿಂದ ತುಂಬಿ ನಿಬಿಡವಾದತಂಹುದು. ತಳಾತಳದವರೆಗೂ ಬಾಧೆಗಳಿಗೆ ನಿಲಯು, ವಿಯೋಗಗಳಿಂದ ವಿರಸವಾದಂತಹುದು. ನಾಚಿಕೆ ಗೆಟ್ಟ ಕೆಲಸಗಳ ಉಂಡೆ. ಯಾವಾಗಲೂ ಭಯದಿಂದ ದುಸ್ಸಾಹವಾದಂತಹುದು. ಇದರಲ್ಲಿ ನಾನು ಒದ್ದಾಡುತ್ತಿದ್ದೇನೆ. ಹೀಗೆ ನರಕ ಕುಹಾರ (ಮಹಾಬಿಲ) ದತ್ತ ಹೋಗುತ್ತಿರುವ ನಾನು, ಅಯ್ಯೋ! ಎಂತಹ ಮೂರ್ಖ. ಮೋಕ್ಷ ಮಹಾನಗರಕ್ಕೆ ಸರಳಮಾರ್ಗವಾದ ನಿನ್ನ ವಾಣಿಯನ್ನು, ಉಪದೇಶವನ್ನು ಸೇವಿಸದೆ ಇದ್ದೇನೆ.

ಶಿಖರಿಣಿ :

ನಿರೀಹಂಗನ್ನರಂ ಪರಮಭುವ ಮನ್ನಾರಮಖಿಲಂ
ನಿಪನ್ನಾರಂ ಹೇಲಾ ಕಲಿ ಕಲಹ (ಸನ್ದೋಹಮನಿಶಮ್)
ಭವನ್ತಂ ಮನ್ನಾರೋ ನಹಿ ಖಲು ನಿಮಜ್ಜನ್ತಿಭವಭೀ
ಮಹಾ ಪಾರಾವಾರೇ ಮರಣಭಯ ಕಲ್ಲೋಲ ಕಲಿತೇ ||೨೮||

ನೀನು, ಯಾವುದೇ ರೀತಿಯ ಆಸೆಗಳು ಇಲ್ಲದವನು. ಪರಮ ಭೂಮಿಯಲ್ಲಿ (ಮೋಕ್ಷಸಿದ್ಧಿಯಿರುವ ದಿವ್ಯ ಲೋಕದಲ್ಲಿ) ಸಂಚರಿಸುತ್ತಿರುವವನು. ಎಲ್ಲವನ್ನೂ ಅರಿತವನು. ಲೀಲಾಜಾಲವಾಗಿ ಕಲಿಯುಗದ ಜಂಜಡವನ್ನು ನಾಶಮಾಡುವಂತಹವನು. ಇಂತಹ ನಿನ್ನನ್ನು ನಮಸ್ಕರಿಸುವವರು ಮರಣಭಯ ಕಲ್ಲೋಲ ಕಲಿತವಾದ ಭವಭಯ ಮಹಾ ಸಾಗರದಲ್ಲಿ ಮುಳುಗಿ ಹೋಗುವುದಿಲ್ಲ.

ಏವಂ ಸೇವಾ ಪರಿಪರಹಯಾ(?) ಲೋಲ ಚೂಲ ಮಣೀದ್ಧ
ಚ್ಛಾಯಾಲೀಢಂ ಏರಕಿರಣ ಭಾಭಿನ್ನಮವ್ಯೋರುಹಂ ವಾ,
ಚಿತ್ತಾಗಾರೇ ಚರಣ ಕಮಲಂ ತೇ ಚಿರಂ ಧಾರಿಣೋ ಮೇ
ಸಿದ್ಧಾವಾಸಂ ಬಹುಭವ ಭಯಾರಮ್ಭರೀಣಾಯದೇಹೀ ||೨೯||

ನಮಸ್ಕರಿಸುತ್ತಿರುವ ಇಂದ್ರನ ಚೂಡಾಮಣಿಯ ಕಾಂತಿಯು ಆವರಿಸಿದಂತಿದೆ. ಸೂರ್ಯಕಿರಣ ಕಾಂತಿಗಳಿಂದ ಆಗತಾನೇ ವಿಕಸನಗೊಂಡಿರುವಂತಹುದಾದ ನಿನ್ನ ಚರಣ ಕಮಲವನ್ನು ಈ ವಿಧವಾಗಿ ನನ್ನ ಮನೋಮಂದಿರದಲ್ಲಿ ಚಿರಕಾಲದಿಂದ ಬಚ್ಚಿಟ್ಟು ಕೊಂಡಿರುವ ನನಗೆ ಅನೇಕ ಜನನಭಯಾರಂಭವನ್ನು ನಾಶಗೊಳಿಸುವುದಕ್ಕಾಗಿ ಸಿದ್ಧವಾಸವನ್ನೂ - ಮೋಕ್ಷ ಲೋಕನಿವಾಸವನ್ನು ಅನುಗ್ರಹಿಸು - ಮೊದಲನೆಯ ಪಾದ ದಲ್ಲಿನ 'ಸೇವಾ ಪರಿಪಾರಹಯಾ' ಎಂಬುದನ್ನು 'ಸೇವಾ ಪರಹರಿಹಾಯಲೋಲ' ಎಂಬುದಾಗಿ ಬದಲಾಯಿಸಿದ್ದೇನೆ. ಹರಿಹಯನು ಇಂದ್ರ - ಮೋನಿಯರ್ ವಿಲಿಯಮ್ಸ್.

ಶಾರ್ದೂಲ ವಿಕ್ರೀಡಿತ :

ಇತ್ಥಂತೇ ಸಮಸಂಸ್ಕೃತ ಸ್ತವ ಮಹಂ ಪ್ರಸ್ತಾವಯಾಮಾಸಿ (ಸ?) ವಾ
ನಾಶಂಸೇಜಿನವೀರ ನೇನ್ದ್ರ ಪದವೀಂ ನ ವ್ರಾಜ್ಯ ರಾಜ್ಯ ಶ್ರೀಯಮ್
ಲೀಲಾ ಭಾಙ್ನ ವಲ್ಲಭ ಪ್ರಣಯಿನೀ ಬೃನ್ದಾನಿ ಕಿನ್ತ್ವರ್ಥಯೇ
ನಾಥೇದಂ ಪ್ರಥಯ ಪ್ರಸಾದ ವಿಶದಾಂ ದೃಷ್ಟಿಂದಯಾಲೋಮಯಿ ||೩೦||

ಓ ಜಿನವೀರಾ ! ನಾನು ಈ ವಿಧವಾಗಿ ಸಮಸಂಸ್ಕೃತ ಸ್ತೋತ್ರವನ್ನು (ನಿನ್ನ ಸನ್ನಿಧಿಯಲ್ಲಿ) ಪ್ರಸ್ತಾಪಿಸಿದೆ. ಆದರೆ ಓ ನಾಥಾ! ನಾನು ಇಂದ್ರ ಪದವಿಯನ್ನಾಗಲಿ ವಿಶಾಲ ರಾಜ್ಯಲಕ್ಷ್ಮಿಯನ್ನಾಗಲೀ, ವಿಲಾಸವತಿಯರಾದ ಪ್ರಿಯ ಪ್ರಣಯಿನಿಯರ ಗುಂಪನ್ನಾಗಲೀ ಕೋರುತ್ತಿಲ್ಲ. ಓ ದಯಾಳುವೇ! ಅನುಗ್ರಹೋಜ್ವಲವಾದ ನಿನ್ನ ನೋಟವನ್ನು ನನ್ನ ಮೇಲೆ ಪ್ರಸಾರ ಮಾಡು ಎಂದು ಮಾತ್ರವೇ ಪ್ರಾರ್ಥಿಸುತ್ತಿದ್ದೇನೆ.

ಜೈನ ಸಂಪ್ರದಾಯ ಅಷ್ಟು ಚೆನ್ನಾಗಿ ನನಗೆ ತಿಳಿಯದಿರುವ ಕಾರಣದಿಂದಾಗಿ ಸ್ತೋತ್ರ ಶ್ಲೋಕಗಳ ಅನುವಾದದಲ್ಲಿ ಲೋಪಗಳಿವೆ ಎಂಬುದನ್ನು ನಾನು ಬಲ್ಲೆ. ಆದರೆ, ತೆಲುಗು, ಕನ್ನಡಪಂಡಿತ, ಸಂಶೋಧಕರಿಗೆ ಒಬ್ಬ ಮಹಾಕವಿಯ ಸೋದರನನ್ನು ಒಬ್ಬ ಆಚಾರ್ಯನ ರಚನೆಯನ್ನು ತಿಳಿಸಬೇಕು, ಪರಿಚಯಿಸಬೇಕೆಂಬ ಹಂಬಲ ನನ್ನ ಈ ಲೇಖನ ರಚನೆಗೆ ಕಾರಣ.

ಮಹಿಳಾ ಸಾಹಿತ್ಯದ ಇತ್ತೀಚಿನ ಒಲವುಗಳು

- ಡಾ. ವಿಜಯಶ್ರೀ ಸಬರದ

೧೯೨೦ರಿಂದ ಇಂದಿನವರೆಗೂ ಹೊಸಗನ್ನಡ ಸಾಹಿತ್ಯ ತನ್ನ ಯುಗಧರ್ಮಕ್ಕೆ ತಕ್ಕಂತೆ ಸಾಹಿತ್ಯಕ - ಸಾಮಾಜಿಕ ಬದಲಾವಣೆಗಳಿಗೆ ಸ್ಪಂದಿಸುತ್ತ ಹಂತ ಹಂತವಾಗಿ ಬೆಳೆದಿದೆ. ೭ ದಶಕದ ಸುದೀರ್ಘ ಸಾಹಿತ್ಯ ಪರಂಪರೆಯನ್ನು ಹೊಂದಿದ 'ಹೊಸಗನ್ನಡ ಸಾಹಿತ್ಯ ಚರಿತ್ರೆ'ಯ ಕುರಿತು ಅನೇಕ ಕೃತಿಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಎಲ್.ಎಸ್. ಶೇಷಗಿರಿರಾವ ಅವರ 'ಹೊಸಗನ್ನಡ ಸಾಹಿತ್ಯ', ಕೀರ್ತಿನಾಥ ಕುರ್ತಕೋಟಿ ಅವರ 'ಯುಗಧರ್ಮ ಮತ್ತು ಸಾಹಿತ್ಯ', ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿದ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಆರನೇ ಸಂಪುಟ ಡಾ. ಹರಿಕೃಷ್ಣ ಭರಣಿ ಅವರ 'ಹೊಸಗನ್ನಡ ಸಾಹಿತ್ಯ ವಿಕಾಸ' - ಈ ಮೊದಲಾದ ಕೃತಿಗಳು ಪ್ರಕಟವಾಗಿವೆ.

ವಿಮರ್ಶಕರು ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯ ಕುರಿತು ವಿವೇಚಿಸಿದ್ದಾರೆ. ತಮ್ಮ ದೃಷ್ಟಿಯ ಅಂಚಿನ ಅಳತೆಗೋಲಿನಿಂದ ಇದರ ಆಳ - ಅಗಲಗಳನ್ನು ಅಳೆದು ನೋಡಿದ್ದಾರೆ. ಇದರ ಜೊತೆಯಲ್ಲಿ ಮಹಿಳಾ ಸಾಹಿತ್ಯದ ರೂಪರೇಷೆಗಳು ಹಾಗೂ ಇತಿ - ಮಿತಿಗಳನ್ನು ಚರ್ಚಿಸಿದ್ದಾರೆ. ಕೆಲವರು ಮಹಿಳಾ ಸಾಹಿತ್ಯ ನಾಲ್ಕು ಗೋಡೆಗಳ ಮಧ್ಯದ ಅನುಭವವನ್ನು ಮಾತ್ರ ಪ್ರತಿಪಾದಿಸುತ್ತದೇ ಹೊರತು ಬಾಹ್ಯ ಪ್ರಪಂಚದ ಅನುಭವಗಳನ್ನು ಕಟ್ಟಿಕೊಡುವುದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಕೆಲವರು ಶತಮಾನದಿಂದಲೂ ಮಹಿಳೆ ಅಸ್ಪೃಶ್ಯಳಾಗಿ ಎರಡನೇ ದರ್ಜೆಯ ಪ್ರಜೆಯಾಗಿ, ಪುರುಷ ಪ್ರಧಾನ ಸಮಾಜದ ಸಂಸ್ಕೃತಿಯ ಸಂಕೋಲೆಯೊಳಗೆ ಬಂಧಿತಳಾಗಿದ್ದು, ಬಸವ ಯುಗದಲ್ಲಿ ಮಾತ್ರ ಮೈಚಳಿಬಿಟ್ಟು ಮಾತನಾಡಿದ್ದು. ಆನಂತರ ಗಾಂಧೀಯುಗದಿಂದ ಇಂದಿನವರೆಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದು ತಮ್ಮ ಅನೇಕ ಮಿತಿಗಳ ನಡುವೆಯೂ ಸಾಹಿತ್ಯ ರಚನೆಗೆ ತೊಡಗಿದ್ದು ಗಮನಾರ್ಹವಾಗಿದೆಯೆಂಬ ಸಮಾಧಾನಕರವಾದ ಮಾತುಗಳನ್ನು ಆಡಿದ್ದಾರೆ.

ಇಂದು ಮಹಿಳಾ ಸಾಹಿತ್ಯಕ್ಕೆ ಪುರುಷ ದೃಷ್ಟಿಯ ವಿಮರ್ಶೆಯ ಕೃಪೆಯಾಗಲೀ ಅಥವಾ ಸ್ತ್ರೀವಾದಿ ವಿಮರ್ಶಾ ದೃಷ್ಟಿಯ ರಿಯಾಯಿತಿಯಾಗಲೀ ಬೇಕಾಗಿಲ್ಲ, ಇಂದು ಮಹಿಳಾ ಸಾಹಿತ್ಯವನ್ನು ವಸ್ತುನಿಷ್ಠವಾಗಿ ವಿಮರ್ಶಿಸಬೇಕಾಗಿದೆ. ಮಹಿಳಾ ಸಾಹಿತ್ಯದ

ಒಲವು- ನಿಲುವುಗಳನ್ನು ಅವಳು ಬದುಕಿದ ಸಾಮಾಜಿಕ ಪರಿಸರ ಮತ್ತು ಎದುರಿಸಿದ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನ ಮಾಡಬೇಕಾಗಿದೆ. ಆಗ ಮಾತ್ರ ಮಹಿಳಾ ಸಾಹಿತ್ಯದ ಸಾಧ್ಯತೆ - ಮಿತಿಗಳನ್ನು ಅಧಿಕೃತವಾಗಿ ಗುರುತಿಸಲು ಸಾಧ್ಯವಾಗುತ್ತದೆ.

ಮಹಿಳೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದದ್ದು, ತನ್ನನ್ನು ಕುರಿತು ಹಾಗೂ ಸಾಮಾಜಿಕ ಸಂಬಂಧಗಳನ್ನು ಕುರಿತು ಮಾತನಾಡಿದ್ದು ಮೊದಲು ೧೨ನೇ ಶತಮಾನದಲ್ಲಿ, ಅನಂತರ ೧೯ನೇ ಶ. ದ ಮಧ್ಯ ಅವಧಿಯಲ್ಲಿ ಎಂಬುದು ಐತಿಹಾಸಿಕ ದೃಷ್ಟಿಯಿಂದ ತುಂಬಾ ಮುಖ್ಯವಾದ ಸಂಗತಿಯಾಗಿದೆ.

ಹೊಸಗನ್ನಡ ಸಾಹಿತ್ಯದ ರಚನೆಗೆ ಸಾಮಾಜಿಕ ಸ್ಥಿತ್ಯಂತರ, ಚಾರಿತ್ರಿಕ ಒತ್ತಡ ಮತ್ತು ಆಂತರಿಕ ಅಗತ್ಯ ಕಾರಣವಾದಂತೆ ಮಹಿಳಾ ಸಾಹಿತ್ಯದ ರಚನೆಗೆ ಬದಲಾದ ಸಾಮಾಜಿಕ ಮೌಲ್ಯಗಳು, ಸ್ತ್ರೀ ಶಿಕ್ಷಣ, ಸ್ವಾತಂತ್ರ್ಯ- ಸಮಾನತೆಯ ಅವಕಾಶಗಳು ಕಾರಣವಾಗಿವೆ. ಆದುದರಿಂದಲೇ ಯಾವ ಕಾಲದ ಸಾಹಿತ್ಯದಲ್ಲಿಯೂ ಕಾಣಿಸದಷ್ಟು ವಸ್ತು ವೈವಿಧ್ಯತೆ - ಪ್ರಯೋಗಶೀಲತೆಯನ್ನು ಹೊಸಗನ್ನಡ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಅಕ್ಕಮಹಾದೇವಿ ಮತ್ತು ಸಂಚಿಹೊನ್ನಮ್ಮ ಇವರಿಬ್ಬರೂ ಮಹಿಳೆಯರಿಗೆ ಸಂಬಂಧಿಸಿದ ಎರಡು ಮಾದರಿಗಳನ್ನು ಪ್ರತಿನಿಧಿಸುತ್ತಾರೆ ಎಂದು ಮಹಿಳಾ ಸಾಹಿತ್ಯದ ಕುರಿತು ಜಿ.ಎಸ್. ಶಿವರುದ್ರಪ್ಪ ಅವರು ಹೇಳುವುದರಲ್ಲಿ ಮಹಿಳಾ ಸಾಹಿತ್ಯದ ಒಲವನ್ನು ಗುರುತಿಸಬಹುದಾಗಿದೆ.

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ರಚನೆಗೊಂಡ ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ ಮೂರು ರೀತಿಯ ಸಾಹಿತ್ಯಕ ಒಲವುಗಳನ್ನು ಕಾಣಬಹುದಾಗಿದೆ. ಒಂದು ನವೋದಯ ಕಾಲದಿಂದ ನವ್ಯದ ಕಾಲದವರೆಗೆ, ಮತ್ತೊಂದು ನವ್ಯದಿಂದ - ದಲಿತ ಬಂಡಾಯದವರೆಗೆ. ಇನ್ನೊಂದನ್ನು ದಲಿತ - ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಗುರುತಿಸಬಹುದಾಗಿದೆ. ಸಂಚಿಹೊನ್ನಮ್ಮಳ ಸ್ತ್ರೀಪರವಾದ ದ್ವಂದ್ವ ನಿಲುವು ಮೊದಲನೆಯ ಮಾದರಿಯ ಮಹಿಳಾ ಸಾಹಿತ್ಯದಲ್ಲಿ ಕಂಡು ಬಂದರೆ ಎರಡನೆಯ ಮಾದರಿಯ ಮಹಿಳಾ ಸಾಹಿತ್ಯದಲ್ಲಿ ಪ್ರಯೋಗಶೀಲತೆಯನ್ನು ಕಾಣಬಹುದಾಗಿದೆ. ಮೂರನೆಯ ಮಾದರಿಯ ಮಹಿಳಾ ಸಾಹಿತ್ಯದಲ್ಲಿ ಅಕ್ಕಮಹಾದೇವಿಯ ಸ್ತ್ರೀಪರ ಸಂವೇದನೆಯನ್ನು ಹಾಗೂ ಸಾಮಾಜಿಕ ನಿಲುವನ್ನು ಕಾಣಬಹುದಾಗಿದೆ ಮೊದಲನೆಯ

ಹಂತದ ಲೇಖಕಿಯರ ಬರವಣಿಗೆ ಗದ್ಯಕ್ಕೆ ಮೀಸಲಾದರೆ ಎರಡನೆಯ ಮತ್ತು ಮೂರನೆಯ ಹಂತದ ಲೇಖಕಿಯರ ಬರವಣಿಗೆ ಗದ್ಯ - ಪದ್ಯಗಳೆರಡಕ್ಕೂ ವಿಸ್ತರಿಸಿದೆ. ಮೊದಲನೆಯ ಹಂತದ ಮಹಿಳಾ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಏಕತಾನತೆಯಿದ್ದರೆ ಎರಡನೆಯ ಹಂತದ ಮಹಿಳಾ ಸಾಹಿತ್ಯ ಮುಕ್ತ ಆಲೋಚನೆಯಿಂದ ಕೂಡಿದೆ. ಮೂರನೆಯ ಹಂತದ ಮಹಿಳಾ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ವೈವಿಧ್ಯತೆಯನ್ನು ಕಾಣಬಹುದಾಗಿದೆ.

ನವೋದಯ ಲೇಖಕರ ಸಾಹಿತ್ಯ ರಚನೆಗೆ ಪಾಶ್ಚಾತ್ಯ ಸಾಹಿತ್ಯ - ಸಂಸ್ಕೃತಿ ಹಾಗೂ ಭಾರತೀಯ ಸಾಮಾಜಿಕ - ರಾಜಕೀಯ ಸ್ಥಿತ್ಯಂತರಗಳು ಪ್ರೇರಣೆಯಾದರೆ, ನವೋದಯ ಸಂದರ್ಭದ ಲೇಖಕಿಯರ ಸಾಹಿತ್ಯ ರಚನೆಗೆ ನವೋದಯ ಪೂರ್ವ ಮತ್ತು ನವೋದಯ ಲೇಖಕರ ಸಾಹಿತ್ಯ, ದೇಶಿ ಚಳುವಳಿಗಳು, ಪಾಶ್ಚಾತ್ಯ ಶಿಕ್ಷಣ ನೀತಿ, ಹಾಗೂ ಸ್ವಾತಂತ್ರ್ಯ - ಸಮಾನತೆಯಂತಹ ವಿಚಾರಗಳು ಪ್ರೇರಣೆಯಾಗಿವೆ. ಪ್ರೀತಿ, ಪ್ರೇಮ, ತ್ಯಾಗ, ಸ್ನೇಹ, ಸೌಹಾರ್ದತೆ , ಆದರ್ಶದಂತಹ ಮೌಲ್ಯಗಳ ಹಿನ್ನೆಲೆಯಲ್ಲಿ ಬದುಕಿನ ಅನುಭವಗಳನ್ನು ಚಿತ್ರಿಸುವುದು; ಪ್ರಕೃತಿ - ದೇವರು - ಧರ್ಮ - ಆಧ್ಯಾತ್ಮದ ಕುರಿತು ಒಲವನ್ನು ಮೂಡಿಸುವುದು; ಸಾಮಾಜಿಕ ಸುಧಾರಣೆ, ರಾಷ್ಟ್ರೀಯ ಪ್ರಜ್ಞೆಯಂತಹ ಕಾಳಜಿಗಳನ್ನು ಅಭಿವ್ಯಕ್ತಿಸುವುದು - ಈ ಮೊದಲಾದ ಆಶಯಗಳನ್ನು ಪ್ರತಿಪಾದಿಸುವುದೇ ನವೋದಯ ಲೇಖಕರ ಸಾಹಿತ್ಯದ ಒಲವಾಗಿದ್ದರೆ, ಸಾಂಪ್ರದಾಯಿಕ ಅನಿಷ್ಟ ಪದ್ಧತಿಗಳನ್ನು ಖಂಡಿಸುವುದು; ಗಂಡು - ಹೆಣ್ಣಿನ ಸಂಬಂಧದ ಕುರಿತು ವಿವೇಚಿಸುವುದು; ಸಾಮಾಜಿಕ ಅಸಮಾನತೆಯ ಕುರಿತು ಪ್ರಶ್ನಿಸುವುದು; ಸ್ತ್ರೀಶಿಕ್ಷಣ ಅಗತ್ಯದ ಅರಿವು ಮೂಡಿಸುವುದು;ವ್ಯಕ್ತಿ ಸ್ವಾತಂತ್ರ್ಯತೆಯನ್ನು ಬಯಸುವುದು - ಈ ಮೊದಲಾದ ವೈಯಕ್ತಿಕ ಮತ್ತು ಸಾಮಾಜಿಕ ಕಾಳಜಿಗಳನ್ನು ಚಿತ್ರಿಸುವುದೇ ನವೋದಯ ಲೇಖಕಿಯರ ಸಾಹಿತ್ಯದ ಒಲವಾಗಿತ್ತು. ಈ ನವೋದಯ ಸಂದರ್ಭದ ಲೇಖಕ - ಲೇಖಕಿಯರ ಸಾಹಿತ್ಯದ ಒಲವು - ನಿಲುವುಗಳು ಏನಿದ್ದರೂ ಅವು ಸುಧಾರಣಾವಾದದ ಮತ್ತು ವಾಸ್ತವತಾ ವಾದದ ನೆಲೆಯಲ್ಲಿ ಅರಳಿ ನಿಂತಿವೆ.

ಭಾರತೀಯ ಸಾಹಿತ್ಯ ತನ್ನ ಸಮಕಾಲೀನ ಸಾಹಿತ್ಯಕ - ಸಾಮಾಜಿಕ ಚಳುವಳಿಯ ಸಿದ್ಧಾಂತಗಳಿಗೆ ಬದ್ಧವಾಗಿ, ದೇಶೀಯ ಹಾಗೂ ಅನ್ಯದೇಶೀಯ ಸಾಹಿತ್ಯಕ - ಸಾಮಾಜಿಕ ವಾದಗಳ ಪ್ರೇರಣೆ - ಪ್ರಭಾವಕ್ಕೊಳಗಾಗಿ ಸಾಹಿತ್ಯ ರಚನೆಗೊಂಡಿದೆ. ಈ ವಿಚಾರ

ಹೊಸಗನ್ನಡ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಆದರೆ ಹೊಸಗನ್ನಡ ಮಹಿಳಾ ಸಾಹಿತ್ಯಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ ಮಹಿಳಾ ಸಾಹಿತ್ಯ ಯಾವುದೇ ಕಾಲದ ಸಾಹಿತ್ಯಕ - ಸಾಮಾಜಿಕ ಚಳುವಳಿಯ ಸಿದ್ಧಾಂತಗಳಿಗೆ ಬದ್ಧವಾಗದೇ, ಆಯಾ ಕಾಲದ ಸಾಹಿತ್ಯಕ - ಸಾಮಾಜಿಕ ಚಳುವಳಿಯ ತಾತ್ವಿಕ ವಿಚಾರಗಳಿಂದ ಪ್ರಭಾವಿತವಾಗಿದೆ. ಬಂಡಾಯದ ಸಂದರ್ಭವನ್ನು ಹೊರತುಪಡಿಸಿದರೆ ಲೇಖಕಿಯರು ಯಾವುದೇ ಚಳುವಳಿ - ಸಂಘಟನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸಾಹಿತ್ಯ ರಚನೆಗೆ ತೊಡಗದೆ, ಚಳುವಳಿಯ ಹೊರಗಿದ್ದು ಕೊಂಡು ಚಳುವಳಿಯ ಆಶಯಗಳನ್ನು ಅಭಿವ್ಯಕ್ತಿಸಿದ್ದಾರೆ. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ.

ನವೋದಯ ಸಂದರ್ಭದ ತಿರುಮಲಾಂಬಾ, ಕಲ್ಯಾಣಮ್ಮ, ಗೌರಮ್ಮ, ಶ್ಯಾಮಲಾದೇವಿ, ಜಾಣಕಮ್ಮ ಮೊದಲಾದ ಲೇಖಕಿಯರು ತಮ್ಮ ಕೃತಿಗಳಲ್ಲಿ ಸ್ತ್ರೀಯ ಸ್ಥಾನಮಾನಗಳ, ಮಾನಾಪಮಾನಗಳ, ನೋವು - ನಲಿವುಗಳ ಕುರಿತು; ವಿವಾಹ ಪೂರ್ವ- ವಿವಾಹ ನಂತರದ ಲೈಂಗಿಕ ಸಂಬಂಧಗಳಿಂದ ಉಂಟಾದ ಸಮಸ್ಯೆಗಳ ಕುರಿತು ಬಾಲ್ಯ ವಿವಾಹ - ವಿಧವಾ ವಿವಾಹ, ವರದಕ್ಷಿಣೆಯಂತಹ ಸಮಸ್ಯೆಗಳ ಕುರಿತು ಹಾಗೂ ಸ್ತ್ರೀ ಶಿಕ್ಷಣದ ಅಗತ್ಯದ ಕುರಿತು ವಿವೇಚಿಸಿರುವ ರೀತಿ ಪ್ರಗತಿಪರವಾಗಿದೆ. ಆದರೆ ಸ್ತ್ರೀಯ ಸ್ಥಾನಮಾನಗಳ ಕುರಿತಂತೆ ಲೇಖಕಿಯರ ಬದಲಾದ ದೃಷ್ಟಿ ಸುಧಾರಣಾ ಮನೋಧರ್ಮದ ಪರಧಿಯಾಚೆ ಬೆಳೆಯಲಿಲ್ಲ. ಆದರೂ ಶೈಕ್ಷಣಿಕ ಸೌಲಭ್ಯ - ಸಾಮಾಜಿಕ ಸ್ವಾತಂತ್ರ್ಯ ಇಲ್ಲದ ಇಂದಿನ ಸಂದರ್ಭದಲ್ಲಿ ಲೇಖಕಿಯರು ಸ್ತ್ರೀ ಜಗತ್ತಿನ ಸಮಸ್ಯೆಗಳನ್ನು ವಸ್ತು ನಿಷ್ಟವಾಗಿ ಮತ್ತು ಅನುಭವಾತ್ಮಕವಾಗಿ ಸರಳವಾದ ಶೈಲಿಯಲ್ಲಿ ಆತ್ಮೀಯವಾಗಿ ಚಿತ್ರಿಸಿದ್ದು ಆಶಾದಾಯಕವಾಗಿದೆ.

ಪ್ರಗತಿಶೀಲ ಚಳುವಳಿಯ ನಂತರದ ಲೇಖಕಿಯರು ಯಾವುದೇ ಸೈದ್ಧಾಂತಿಕ ಬದ್ಧತೆಗೆ ಒಳಗಾಗದೆ ತಮ್ಮ ಬದುಕಿನ ಅನುಭವಗಳಿಗೆ ಮಾತ್ರ ಬದ್ಧರಾದದ್ದು ಗಮನಿಸಬೇಕಾದ ಸಂಗತಿ. ಅಂತೆಯೇ ಪ್ರಗಿತಶೀಲ ಲೇಖಕರಲ್ಲಿ ಕಾಣುವ ವರ್ಗ ಹೋರಾಟದ ಕಪ್ಪು - ಬಿಳುಪಿನ ಚಿತ್ರಣ ಇಲ್ಲಿ ಬರದೇ ಇರುವುದು ಮುಖ್ಯವಾದ ವಿಚಾರವಾಗುತ್ತದೆ. ಅನುಪಮಾ ನಿರಂಜನರ ಇತ್ತೀಚಿನ ಕಾದಂಬರಿಗಳು ಸ್ತ್ರೀಪಾತ್ರ ಗಳು ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವಂತೆ, ಪ್ರಶ್ನಿಸುವಂತೆ ಹಾಗೂ ಸಮಾನತೆಗಾಗಿ ಹೋರಾಡುವಂತೆ ವಾಣಿ, ಎಂ.ಕೆ. ಇಂದಿರಾ, ತ್ರಿವೇಣಿಯವರ ಕಾದಂಬರಿಗಳ ಸ್ತ್ರೀ

ಪಾತ್ರಗಳು ಪ್ರಶ್ನಿಸುವುದಿಲ್ಲ, ಪ್ರತಿಭಟಿಸುವುದಿಲ್ಲ. ತ್ರಿವೇಣಿಯವರು ಸ್ತ್ರೀ ಸಂವೇದನೆಗಳನ್ನು ಮನಃಶಾಸ್ತ್ರದ ನೆಲೆಯಲ್ಲಿ ಚಿತ್ರಿಸಿದರೆ, ಅನುಪಮಾ ಅವರು ಸ್ತ್ರೀ ಕೇಂದ್ರಿತ ಪಾತ್ರಗಳನ್ನು ವೈಚಾರಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ. ವರ್ಗ ಸಂಘರ್ಷ, ಕಾರ್ಮಿಕರ ಸಮಸ್ಯೆ ಹಾಗೂ ಸಂಘಟನೆಯ ಅಗತ್ಯದ ಕುರಿತು ಸೈದ್ಧಾಂತಿಕವಾಗಿ ವಿವೇಚಿಸಿದ್ದಾರೆ. ಸ್ತ್ರೀ ಸ್ವಾತಂತ್ರ್ಯ - ಆರ್ಥಿಕ ಸಮಾನತೆಯಂತಹ ಆಶಯಗಳನ್ನು ತಮ್ಮ ಕಾದಂಬರಿಗಳಲ್ಲಿ ಪ್ರತಿಪಾದಿಸಿದ್ದಾರೆ. ಎಂ.ಕೆ. ಇಂದಿರಾ ಅವರು ಹೆಣ್ಣು - ಗಂಡಿನ ಸಂಬಂಧಗಳನ್ನು ಹಾಗೂ ಸ್ತ್ರೀ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ಚರ್ಚಿಸಿದ್ದಾರೆ. ಇವರು ಪುರುಷ ಪ್ರಧಾನ ವ್ಯವಸ್ಥೆಯ ರೀತಿ - ನೀತಿಗಳನ್ನು ಸೈದ್ಧಾಂತಿಕವಾಗಿ ಆಲೋಚಿಸಿದ್ದಾರೆ. ಮಹಿಳಾ ಶೋಷಣೆಯ ಒಳನೋಟಗಳನ್ನು ತಮ್ಮ ಕೃತಿಗಳಲ್ಲಿ ಬಿಚ್ಚಿಟ್ಟಿದ್ದಾರೆ.

ನವೋದಯ ಮತ್ತು ಪ್ರಗತಿಶೀಲ ಕಾಲದ ನಂತರದ ಮಹಿಳಾ ಸಾಹಿತ್ಯ ಗದ್ಯದಿಂದಲೇ ಪ್ರಾರಂಭವಾಗಿದ್ದರೂ ಅಪರೂಪಕ್ಕೆ ಅಲ್ಲಲ್ಲಿ ಪದ್ಯರೂಪದ ಅಭಿವ್ಯಕ್ತಿಯನ್ನು ಕಾಣುತ್ತೇವೆ. ನವೋದಯದ ಜಾನಕಮ್ಮ 'ಚಂಡಶಾಸನ'ದಂತಹ ಕವನಗಳನ್ನು ರಚಿಸಿದ, ಅನುಪಮಾ ನಿರಂಜನ ಅವರು 'ಎಮಿಲಿ' ಯಂತಹ ಕವನಗಳನ್ನು ರಚಿಸಿದ್ದಾರೆ. ಈ ಎರಡು ಸಾಹಿತ್ಯಕ ಸಂದರ್ಭದ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸ್ವತಂತ್ರತೆ - ಸಮಾನತೆ,ಸಾಂಪ್ರದಾಯಿಕ ಮೌಲ್ಯಗಳ ಸ್ವೀಕರಣ - ನಿರಾಕರಣೆಯ ಆಶಯಗಳು ಹಾಗೂ ಸಾಮಾಜಿಕ ಕಾಳಜಿಯನ್ನು ಕಾಣುತ್ತೇವೆ. ಬದುಕಿನ ಸಾಮರಸ್ಯದ ಹಂಬಲ, ಜೀವನ ಪ್ರೀತಿ, ಮಾನವೀಯತೆ ಇವರ ಕೃತಿಗಳ ಆಶಯವಾಗಿದೆ.

ನವ್ಯ ಲೇಖಕರಿಗೆ ಕಮೂ, ಕಾಫ್ಕಾ, ಫ್ರಾಯ್ಡ್‌ರಂತಹ ಚಿಂತಕರ ಹಾಗೂ ಸಾರ್ತ್ರ್‌ರಂತಹ ತತ್ವಜ್ಞಾನಿಗಳ ವಿಚಾರಗಳು ಪ್ರೇರಣೆಯಾದರೆ ನವ್ಯ ಸಂದರ್ಭದ ಲೇಖಕಿಯರಿಗೆ ನವ್ಯ ಲೇಖಕರ ಆಲೋಚನಾಕ್ರಮ ಪ್ರೇರಣೆಯಾಗಿದೆ. ನವ್ಯ ಲೇಖಕರ ಸಾಹಿತ್ಯದಿಂದ ಪ್ರಭಾವಿತರಾದ ವೀಣಾಶಾಂತೇಶ್ವರ, ರಾಜಲಕ್ಷ್ಮಿಯವರು ಸ್ತ್ರೀ ಪಾತ್ರ ಚಿತ್ರಣವನ್ನು ನವ್ಯ ಲೇಖಕರಿಗಿಂತಲೂ ಭಿನ್ನವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ನವ್ಯ ಲೇಖಕರ ಸ್ತ್ರೀ ಪಾತ್ರಗಳು ಸ್ವಚ್ಛಂದ ಪ್ರವೃತ್ತಿಯಲ್ಲಿ ಚಿತ್ರಿತಗೊಂಡರೆ, ನವ್ಯ ಲೇಖಕಿಯರ ಸ್ತ್ರೀ ಪಾತ್ರಗಳು ಆಧುನಿಕ ಮನೋಧರ್ಮದ ರೀತಿಯಲ್ಲಿ ಚಿತ್ರಿತಗೊಂಡಿವೆ. ನವ್ಯ ಸಂದರ್ಭದ ಲೇಖಕಿಯರು ಚಿತ್ರಿಸಿದ ಸ್ತ್ರೀ ಪಾತ್ರಗಳು ಮಾನಸಿಕ ದುರ್ಬಲತೆ, ದ್ವಂದ್ವತೆ, ಸಿನಿಕತನ, ಅಂತರ್ಮುಖತೆಗೆ ಒಳಗಾಗದೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು

ಸ್ವತಂತ್ರವಾಗಿ ಬದುಕಲು ಇಚ್ಛಿಸುತ್ತವೆ. ನವ್ಯದ ಲೇಖಕ - ಲೇಖಕರಿಯರಿಗೆ ಸಾಮಾಜಿಕ ಸಮಸ್ಯೆಗಳಿಗಿಂತಲೂ ವೈಯಕ್ತಿಕ ಸಮಸ್ಯೆಗಳೇ ಪ್ರಧಾನವಾಗಿ ಕಾಡಿದವು. ಇವರ ಕೃತಿಗಳಲ್ಲಿ ಮನಃಶಾಸ್ತ್ರಕ್ಕೆ ಮತ್ತು ಅಸ್ತಿತ್ವವಾದಕ್ಕೆ ಸಂಬಂಧಿಸಿದಂತಹ ಚಿತ್ರಣಗಳನ್ನು ಕಾಣಬಹುದಾಗಿದೆ. ನವೋದಯ ಸಂದರ್ಭದ ಹಾಗೂ ಪ್ರಗತಿಶೀಲ ಚಳುವಳಿ ನಂತರದ ಲೇಖಕಿಯರು ಸ್ತ್ರೀ ಶೋಷಣೆಯನ್ನು ಸಾಮಾಜಿಕ ನೆಲೆಯಲ್ಲಿ ಚಿತ್ರಿಸಿದರೆ ನವ್ಯದ ಲೇಖಕಿಯರು ಲೈಂಗಿಕ ಸಂಬಂಧಗಳ ನೆಲೆಯಲ್ಲಿ ಚಿತ್ರಿಸಿದ್ದಾರೆ. ಸಂಚಿಹೊನ್ನಮ್ಮನ ಹದಿಬದೆಯ ಧರ್ಮದ ಮುಂದುವರೆಯುವಿಕೆ ನವೋದಯ ಸಂದರ್ಭದ ಹಾಗೂ ಪ್ರಗತಿಶೀಲ ನಂತರದ ಮಹಿಳಾ ಸಾಹಿತ್ಯದಲ್ಲಿ ಕಂಡುಬಂದರೆ, ಮುಕ್ತ ಬರವಣಿಗೆ ನವ್ಯದ ಲೇಖಕಿಯರ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಸ್ತ್ರೀ ಸ್ವಾತಂತ್ರ್ಯತೆ ಸಮಾನತೆಯ ಕಾಳಜಿಯೊಂದಿಗೆ ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳುವ ಪ್ರಯತ್ನ, ಮಾನಸಿಕ ತೊಳಲಾಟ ಅಸಹಾಯಕತೆಯ ವಸ್ತುಸ್ಥಿತಿಯನ್ನು ಚಿತ್ರಿಸುವುದೇ ನವ್ಯ ಲೇಖಕಿಯರ ಸಾಹಿತ್ಯದ ಒಲವಾಗಿತ್ತು.

ನವೋದಯ ಸಂದರ್ಭದಲ್ಲಿದ್ದ ಸ್ತ್ರೀ ಪರ - ಸಾಮಾಜಿಕ ಕಾಳಜಿ, ಪ್ರಗತಿಶೀಲ ದಲ್ಲಿದ್ದ ಪ್ರಗತಿಪರತೆ, ನವ್ಯ ಸಂದರ್ಭದ ಮುಕ್ತ ಆಲೋಚನಾ ಅಭಿವ್ಯಕ್ತಿ, ದಲಿತ - ಬಂಡಾಯದ ಮಹಿಳಾ ಸಾಹಿತ್ಯದಲ್ಲಿ ಮೇಳೈಸಿರುವುದನ್ನು ಕಾಣಬಹುದಾಗಿದೆ. ಹೀಗೆ ನವೋದಯ, ಪ್ರಗತಿಶೀಲ ಮತ್ತು ನವ್ಯ ಘಟ್ಟಗಳ ಸಾಹಿತ್ಯದ ಆಶಯಗಳನ್ನು ಮೈಗೂಡಿಸಿ ಕೊಂಡು ಇಂದಿನ ದಲಿತ - ಬಂಡಾಯದ ಮಹಿಳಾ ಸಾಹಿತ್ಯ ಬೆಳೆಯುತ್ತಿರುವುದು ಚಾರಿತ್ರಿಕ ದೃಷ್ಟಿಯಿಂದ ತುಂಬಾ ಮುಖ್ಯವಾಗಿದೆ.

ನವೋದಯ - ಪ್ರಗತಿಶೀಲ - ನವ್ಯ ಸಂದರ್ಭದ ಮಹಿಳಾ ಸಾಹಿತ್ಯಕ್ಕಿಂತಲೂ ದಲಿತ - ಬಂಡಾಯದ ಮಹಿಳಾ ಸಾಹಿತ್ಯವು ಸಂಖ್ಯೆ ಮತ್ತು ಗುಣದ ದೃಷ್ಟಿಯಿಂದ ಗಮನಾರ್ಹವಾಗಿದೆ. ಈ ಸಂದರ್ಭದ ಮಹಿಳಾ ಸಾಹಿತ್ಯ ಪುರುಷ ಪ್ರಧಾನ ವ್ಯವಸ್ಥೆ ಯೊಂದಿಗೆ ರಾಜಿಯಾಗದೆ, ಸ್ಥಾಪಿತ ಮೌಲ್ಯಗಳನ್ನು ಸುಧಾರಣಾಪರ ದೃಷ್ಟಿಯಿಂದ ಪರಿಗಣಿಸದೆ, ಸಂಪೂರ್ಣ ಬದಲಾವಣೆಯನ್ನು ಬಯಸುತ್ತದೆ. ಸ್ತ್ರೀ ಶೋಷಣೆಗೆ ಕಾರಣವಾದ ವ್ಯವಸ್ಥೆಯನ್ನೇ ಪ್ರತಿಭಟಿಸುವುದು; ತನ್ನಂತೆ ಶೋಷಣೆಗೊಳಗಾದ ಹಾಗೂ ಶೋಷಣೆಗೊಳಗಾಗುತ್ತಿರುವುದರ ಕುರಿತು ಆಲೋಚಿಸುವುದು ; ಸಾಂಪ್ರದಾಯಿಕ ಮೌಲ್ಯಗಳ ಬದಲಾಗಿ ಹೊಸ ಮೌಲ್ಯಗಳ ನಿರ್ಮಾಣಕ್ಕಾಗಿ ಸೈದ್ಧಾಂತಿಕವಾಗಿ

ಹೋರಾಡುವುದು ; ಸಾಮಾಜಿಕ - ರಾಜಕೀಯ ಅಸಮಾನತೆ, ಭ್ರಷ್ಟತೆಯನ್ನು ಚಿತ್ರಿಸುವುದು; ಶ್ರೀಮಂತರ ದಬ್ಬಾಳಿಕೆ, ಬಡವರ ಗೋಳು, ದಾಂಪತ್ಯದ ವಿಫಲತೆ, ಪ್ರೀತಿ- ಪ್ರಣಯ-ವಿರಹ, ವರದಕ್ಷಿಣೆ - ಜಾತಿ ಸಮಸ್ಯೆ, ದುಡಿಯುವ ವರ್ಗದ ಹಾಗೂ ದಲಿತ ವರ್ಗದ ಶೋಷಣೆ, ಭಿನ್ನ ಸಂಸ್ಕೃತಿಯ ಸಂವೇದನೆಗಳು - ಈ ಮೊದಲಾದ ವಿಷಯವನ್ನು ಪ್ರತಿ ಪಾದಿಸುವುದು; ರಾಷ್ಟ್ರೀಯ- ಅಂತರ್ ರಾಷ್ಟ್ರೀಯ ಆಗುಹೋಗುಗಳಿಗೆ ಸ್ಪಂದಿಸುವುದೇ ಇಂದಿನ ಮಹಿಳಾ ಸಾಹಿತ್ಯದ ಪ್ರಮುಖ ಆಶಯಗಳಾಗಿವೆ. ಈ ದಶಕದ ಸಾಹಿತ್ಯದಲ್ಲಿ ಸ್ತ್ರೀವಾದಿ ದೃಷ್ಟಿಕೋನ ತೀವ್ರವಾಗಿ ಬೆಳೆಯುತ್ತಿರುವುದನ್ನೂ ಇಲ್ಲಿ ಗಮನಿಸಬಹುದಾಗಿದೆ.

ದಲಿತ ಬಂಡಾಯ ಸಾಹಿತ್ಯದ ಮನೋಧರ್ಮವೇ ಇಂದಿನ ಮಹಿಳಾ ಸಾಹಿತ್ಯದ ಮನೋಧರ್ಮವಾಗಿದ್ದರೂ, ಸ್ತ್ರೀವಾದಿ ನೆಲೆಯೇ ಪ್ರಧಾನವೆನಿಸುತ್ತದೆ. ದಲಿತ - ಬಂಡಾಯ ಚಳುವಳಿಯ ಹೊರಗಿದ್ದುಕೊಂಡೇ ಅನೇಕ ಲೇಖಕಿಯರು ಕಥೆ - ಕಾದಂಬರಿ - ಕಾವ್ಯ -ನಾಟಕಗಳನ್ನು ಬರೆಯುತ್ತಿರುವುದು ಗಮನಾರ್ಹವಾಗಿದೆ. ಇವರ ಸಾಹಿತ್ಯ ಸ್ತ್ರೀ ಸಂವೇದನೆಗಳ ಜೊತೆಗೆ ಬದುಕಿನ ಹಲವು ಮಗ್ಗುಲಗಳನ್ನು ಚಿತ್ರಿಸುತ್ತದೆ. ವ್ಯಕ್ತಿಯ ಸರ್ವತೋಮುಖದ ಬೆಳವಣಿಗೆಯನ್ನು ಬಯಸುತ್ತದೆ.

ಶೈಕ್ಷಣಿಕವಾಗಿ - ಸಾಮಾಜಿಕವಾಗಿ ಇಂದು ಮಹಿಳೆ ಅನೇಕ ಸೌಲಭ್ಯಗಳನ್ನು ಪಡೆಯುತ್ತಿರುವುದರಿಂದ ಸ್ತ್ರೀ ಸ್ವಂತತ್ರತೆ - ಸಮಾನತೆ - ಅಸ್ತಿತ್ವದ ಕುರಿತು ಆಲೋಚಿಸುವಂತಾಯಿತು. ಆತ್ಮಾವಲೋಕನಕ್ಕೆ ಒಳಗಾದ ಲೇಖಕಿಯರ ಮನಸ್ಸು ಸಾಂಪ್ರದಾಯಿಕ ಸಂಕೋಲೆಗಳನ್ನು ಕಳಚಿಕೊಂಡು ವೈಚಾರಿಕವಾಗಿ ಬೆಳೆಯುವಂತಾಯಿತು. ನವೋದಯದವರ ರಮ್ಯಭಾವ, ಪ್ರಯೋಗಶೀಲತೆ; ಪ್ರಗತಿ ಶೀಲರ ಆರ್ಥಿಕ ಸಮಾನತೆ; ನವ್ಯದವರ ವ್ಯಕ್ತಿನಿಷ್ಠತೆ, ಪ್ರತಿಮಾ ವಿಧಾನ, ದಲಿತ - ಬಂಡಾಯದವರ ಬಂಡಾಯ ಮನೋಧರ್ಮ - ಸಾಮಾಜಿಕ ಕಾಳಜಿ; ಪ್ರಗತಿಪರ ಮಹಿಳಾ ಸಂಘಟನೆಗಳ ಹೋರಾಟ; ಸ್ತ್ರೀವಾದಿ ನಿಲುವುಗಳು; ವಚನಕಾರ್ತಿಯರ ವೈಚಾರಿಕತೆ ಈ ಮೊದಲಾದ ಆಶಯಗಳ ಪ್ರೇರಣೆ - ಪ್ರಭಾವಕ್ಕೆ ಒಳಗಾದ ಇಂದಿನ ಮಹಿಳಾ ಸಾಹಿತ್ಯ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನೇಕ ಸಮಸ್ಯೆಗಳಿಗೆ ಸ್ಪಂದಿಸುವಂತಾಗಿದೆ.

ನವೋದಯ - ಪ್ರಗತಿಶೀಲ- ನವ್ಯ ಸಂದರ್ಭದ ಲೇಖಕಿಯರು ಮಧ್ಯಮವರ್ಗದ ಅನುಭವಗಳನ್ನು ತಮ್ಮ ಕಥೆ ಕಾದಂಬರಿಗಳಲ್ಲಿ ಚಿತ್ರಿಸಿದರೆ ದಲಿತ - ಬಂಡಾಯ

ಸಂದರ್ಭದ ಲೇಖಕಿಯರು ಮಧ್ಯಮ ವರ್ಗದ ಅನುಭವಗಳೊಂದಿಗೆ ಕೆಳವರ್ಗದ ಶೋಷಿತರ ಸಂವೇದನೆಗಳನ್ನು ಬಿಚ್ಚಿಟ್ಟಿದ್ದಾರೆ. ಮುಸ್ಲಿಂ ಸಂಸ್ಕೃತಿಯ ಸಂವೇದನೆ ಗಳನ್ನು ಸಾರಾಅಬುಬಕರ್ ಹಾಗೂ ಬಾನುಮಷ್ತಾಕ ಅವರು ತಮ್ಮ ಕಥೆ - ಕಾದಂಬರಿ ಗಳಲ್ಲಿ ಚಿತ್ರಿಸಿದ್ದಾರೆ . ಬಿ.ಟಿ. ಲಲಿತಾ ನಾಯಕ್ ಅವರು ಲಂಬಾಣಿ ಸಂಸ್ಕೃತಿಯ ಸಂವೇದನೆಗಳನ್ನು ಚಿತ್ರಿಸಿದ್ದಾರೆ. ಗೀತಾನಾಗಭೂಷಣ ಅವರು ಪ್ರಾದೇಶಿಕ ಭಾಷೆಯ ಸೊಗಡಿನಿಂದ ದಲಿತ ಸಂಸ್ಕೃತಿಯ ಸಂವೇದನೆಗಳನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿ ದ್ದಾರೆ. ಮಧ್ಯಮ ವರ್ಗದ ಕೌಟುಂಬಿಕ ಸಂಬಂಧಗಳನ್ನು ಮತ್ತು ಸ್ತ್ರೀ ಮನಸ್ಸಿನ ಸೂಕ್ಷ್ಮ ಭಾವನೆಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಕಲಾತ್ಮಕವಾಗಿ ನಿರೂಪಿಸುವ ವೈದೇಹಿಯವರ ಕಥೆಗಳು ಗಮನ ಸೆಳೆಯುತ್ತವೆ.

ನವೋದಯ, ಪ್ರಗತಿಶೀಲ, ನವ್ಯ ಸಂದರ್ಭದ ಲೇಖಕಿಯರ ಕಥೆ - ಕಾದಂಬರಿ ಗಳಲ್ಲಿ ಕಾಣದೆ ಇರುವ ಪ್ರತಿ ಸಂಸ್ಕೃತಿಯ ಸಂವೇದನೆಗಳು, ಚಾರಿತ್ರಿಕ ಪ್ರಜ್ಞೆ, ಸ್ತ್ರೀ ವಾದಿ ಚಿಂತನೆ, ಪ್ರಾದೇಶಿಕತೆ ಇಂದಿನ ಲೇಖಕಿಯರ ಕಥೆ - ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಆದರೆ ಕುವೆಂಪು, ಕಾರಂತ, ರಾವಬಹದ್ದೂರರಂತೆ ಗ್ರಾಮೀಣ ಸಂವೇದನೆಗಳ ಅಥವಾ ಬದುಕಿನ ಸಮಗ್ರತೆಯ ಚಿತ್ರಣ ಲೇಖಕಿ ಯರ ಕಾದಂಬರಿಗಳಲ್ಲಿ ಕಾಣುವುದಿಲ್ಲ.

ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಮಹಿಳೆಯರು ಕಥೆ - ಕಾದಂಬರಿ - ನಾಟಕ ಗಳಿಗಿಂತಲೂ ಕಾವ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿದ್ದಾರೆ. ೭೦-೮೦ರ ದಶಕದ ಮಹಿಳಾ ಕಾವ್ಯದಲ್ಲಿ ವ್ಯವಸ್ಥೆಯ ಕುರಿತು ಸಿಟ್ಟು, ಆವೇಶ, ಆಕ್ರೋಶದ ತೀವ್ರತೆ ಕಂಡು ಬಂದರೆ ೮೦-೯೦ರ ದಶಕದಲ್ಲಿ ರಚನೆಗೊಂಡ ಮಹಿಳಾ ಕಾವ್ಯದಲ್ಲಿ ವಸ್ತುವಿನ ವೈವಿಧ್ಯತೆ ಮತ್ತು ಕಲಾತ್ಮಕ ಅಭಿವ್ಯಕ್ತಿಯನ್ನು ಕಾಣುತ್ತೇವೆ.

ಒಂದು ಸಂದರ್ಭದಲ್ಲಿ ಮಹಿಳಾ ಕಾವ್ಯ ಎಂದರೆ ಪುರುಷರನ್ನು ಬಯ್ಯುವ ಕಾವ್ಯ ಹಾಗೂ ಕೇವಲ ಪ್ರೀತಿ - ಪ್ರೇಮ - ವಿರಹ ಭಾವನೆಗಳನ್ನು ತಿಳಿಸುವ ಕಾವ್ಯವೆಂಬ ಆಕ್ಷೇಪಣೆಗೆ ಗುರಿಯಾಗಿತ್ತು. ಆದರೆ ಇತ್ತೀಚಿನ ಮಹಿಳಾಕಾವ್ಯ ಸಾಮಾಜಿಕ ಕಾಳಜಿ ಯೊಂದಿಗೆ ಕಾವ್ಯಾತ್ಮಕ ಕಾಳಜಿಯೂ ಹೊಂದಿದೆ. ಸಮಕಾಲೀನ ಸಾಮಾಜಿಕ ಬದುಕಿಗೆ ಸ್ಪಂದಿಸುತ್ತಿರುವಂತೆ ಜಗತ್ತಿನ ಆಗುಹೋಗುಗಳಿಗೂ ಸ್ಪಂದಿಸುತ್ತಿರುವುದು ಗಮನಾರ್ಹ ವಾಗಿದೆ. ಹೊಸಗನ್ನಡ ಸಾಹಿತ್ಯದಲ್ಲಿ ಇಂದಿನ ಮಹಿಳಾ ಕಾವ್ಯ ತನ್ನ ದಿಟ್ಟ

ಹೆಜ್ಜೆಗಳನ್ನಿಡುತ್ತಿರುವುದು ಪ್ರಶಂಸನೀಯವಾಗಿದೆ.

ಸ್ತ್ರೀ ಸಂವೇದನೆಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸುವುದರೊಂದಿಗೆ ಪುರಾಣ-ಇತಿಹಾಸದ ವ್ಯಕ್ತಿಗಳ ಮತ್ತು ದೇಶ - ವಿದೇಶ ಹೋರಾಟಗಾರರ ಜೀವನವನ್ನು ಸ್ಮರಿಸುವ, ನಾಡು - ಸೀಮೆಗಳ ಪ್ರಾದೇಶಿಕ ಮಹತ್ವ ಮತ್ತು ದುರಂತವನ್ನು ತಿಳಿಸುವ, ಸಾಂಪ್ರದಾಯಿಕ ಆಚರಣೆ ಪದ್ಧತಿಗಳು ಮತ್ತು ಹಬ್ಬಾದಿಗಳನ್ನು ವಿವೇಚಿಸುವ ಇತ್ತೀಚಿನ ಮಹಿಳಾಕಾವ್ಯ ಸಾಂಸ್ಕೃತಿಕ ದೃಷ್ಟಿಯಿಂದ ಗಮನಾರ್ಹವಾಗಿದೆ.

ದಲಿತ - ಬಂಡಾಯದ ಸಂದರ್ಭದಲ್ಲಿ ಅನೇಕ ಮಹಿಳೆಯರು ಕವನಗಳನ್ನು ರಚಿಸಿದ್ದಾರೆ. ಇವರಲ್ಲಿ ಪ್ರಮುಖರಾದ ಆಯಾ ಭಾಗದ ಕವಯಿತ್ರಿಯರ ಕಾವ್ಯವನ್ನು ಅವಲೋಕಿಸಿದಾಗ ಅವರ ಕಾವ್ಯದ ಒಲವುಗಳನ್ನು ಗುರುತಿಸಬಹುದು.

ಹೈದ್ರಾಬಾದ ಕರ್ನಾಟಕದ ಹಿರಿಯ ಕವಯಿತ್ರಿ ಶೈಲಜಾ - ಉಡಚಣ ಅವರ ಕಾವ್ಯ ನವೋದಯದ ಭಾವಗೀತಾತ್ಮಕತೆ, ನವ್ಯದ ಸಾಂಕೇತಿಕತೆ, ದಲಿತ - ಬಂಡಾಯದ ಬಂಡಾಯ ಮನೋಧರ್ಮ, ಸ್ತ್ರೀಸಂವೇದನೆಯ ಸೂಕ್ಷ್ಮತೆ ಹಾಗೂ ಸಾಮಾಜಿಕ ಕಾಳಜಿಯನ್ನು ಒಳಗೊಂಡಿದೆ. ಬದುಕಿನ ಸಂಕೀರ್ಣತೆಯನ್ನು ಗ್ರಹಿಸುವ ಭಾವ ಇವರ ವಚನಗಳಲ್ಲಿ ಕಾಣಬಹುದು.

ರಾಯಚೂರಿನ ಎಚ್.ಎಸ್. ಮುಕ್ತಾಯಕ್ಕ ಗಂಡು - ಹೆಣ್ಣಿನ ಲೈಂಗಿಕ ಸಂಬಂಧಗಳ ಕುರಿತಂತೆ, ಪ್ರೀತಿ-ಪ್ರೇಮ-ಪ್ರಣಯ - ವಿರಹಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಮಡಿವಂತಿಕೆಯನ್ನು ಮೀರಿ ಮುಕ್ತವಾಗಿ ದಿಟ್ಟತನದಿಂದ ಅಭಿವ್ಯಕ್ತಿಸಿದ ರೀತಿ ವಿಶಿಷ್ಟವಾಗಿದೆ. ಇವರ ಕಾವ್ಯ ಮಾದರಿಯ ಗಜಲ್ ರೂಪಗಳು ಗಮನಾರ್ಹವಾಗಿವೆ. ಪುರುಷ ಪ್ರಧಾನ ವ್ಯವಸ್ಥೆಯ ಅಸಮಾನತೆಯ ನಿಲುವನ್ನು ಪ್ರಶ್ನಿಸುವ ಇವರ ಕಾವ್ಯ ಸ್ತ್ರೀವಾದದ ಆಶಯದಿಂದ ಕೂಡಿದೆ.

ಬಿ.ಟಿ. ಲಲಿತಾನಾಯಕ ಕಾವ್ಯದ ಪ್ರಧಾನ ಕಾಳಜಿ ಬಂಡಾಯ ಮನೋಧರ್ಮವಾಗಿದೆ. ವ್ಯವಸ್ಥೆಯನ್ನು ವಿರೋಧಿಸುತ್ತಲೇ ಶೋಷಿತರ ಮನಸ್ಸನ್ನು ಬಡಿದೆಬ್ಬಿಸುವ ಕಾವಿನೊಂದಿಗೆ ಮಾನವೀಯತೆಯನ್ನು ಮಿಡಿಯುವ ಸ್ತ್ರೀ ಸಮಾನತೆಯನ್ನು ಬಯಸುವ ಇವರ ಕಾವ್ಯ ಸಾಮಾಜಿಕ ಕಾಳಜಿಯಿಂದ ಕೂಡಿದೆ.

ಬದುಕಿನ ನೋವು - ನಲಿವುಗಳನ್ನು ವಸ್ತುನಿಷ್ಠವಾಗಿ ಅಭಿವ್ಯಕ್ತಿಸುವ ಕವಯಿತ್ರಿ ಬೀದರಿನ ಪ್ರಮಿಳಾ ಸಿರ್ಸೆ. ಬದುಕು ಒಂದು ಮಹಾಭಾರತವೆಂದು ಪರಿಗಣಿಸಿದ ಇವರ

ಕಾವ್ಯ ವಸ್ತುನಿಷ್ಠವಾಗಿದೆ.

ಸರಸ್ವತಿ ಚಿಮ್ಮಲಗಿಯವರ ಕಾವ್ಯದಲ್ಲಿ ಶೋಷಕರ ದಬ್ಬಾಳಿಕೆ, ಅನ್ಯಾಯವನ್ನು ಪ್ರತಿಭಟಿಸುವ ಮನೋಭಾವವಿದೆ. ಆರೋಗ್ಯಕರ ಸಮಾಜದ ರಚನೆಗೆ ಕರೆಕೊಡುವ ಇವರ ಹೆಚ್ಚಿನ ಕವನಗಳು ಶ್ಲೇಷಾರ್ಥ, ಧ್ವನ್ಯಾರ್ಥಕ್ಕಿಂತಲೂ ವಾಚ್ಯಾರ್ಥದ ಕಡೆಗೆ ವಾಲಿರುವುದನ್ನು ಕಾಣಬಹುದಾಗಿದೆ. ಸಾಮಾಜಿಕ ಭ್ರಷ್ಟತೆಯನ್ನು ಮೊನಚಾದ ನುಡಿಗಳಿಂದ ಅಲ್ಲಗಳೆಯುವ ರೀತಿ ಮನಮುಟ್ಟುವಂತಿದೆ. ಸಾಮಾಜಿಕ ವಿಡಂಬನೆ ಇವರ ವಚನಗಳಲ್ಲಿ ಕಾಣಬಹುದು. ನನ್ನ ಕಾವ್ಯದ ಕುರಿತು ನಾನೇ ಪ್ರಸ್ತಾಪಿಸುವುದು ಉಚಿತವಲ್ಲವೆಂದೆನಿಸಿ ಚಂಪಾ ಅವರ ಅಭಿಪ್ರಾಯವನ್ನಿಲ್ಲಿ ಕೊಡತ್ತಿದ್ದೇನೆ. "೧೯೭೯ರಲ್ಲಿ 'ಜ್ವಲಂತ' ಕವನ ಸಂಕಲನ ಹೊರ ತಂದ ಡಾ. ವಿಜಯಶ್ರೀ ಸಬರದ ಅವರು ಜ್ವಲಂತವಾಗಿಯೇ ಬೆಳೆಯುತ್ತ ಒಂದು ದಶಕದ ನಂತರ 'ಲಕ್ಷ್ಮಣರೇಖೆ ದಾಟಿದವರು' ಸಂಕಲನ ಹೊರತಂದಿದ್ದಾರೆ. ವಾಸ್ತವದ ಕ್ರೌರ್ಯವನ್ನು ಬಿಡುಗಣ್ಣಿನಿಂದ ದಾಖಲಿಸುತ್ತಲೇ ಅದರ ವಿರುದ್ಧ ಬಂಡೇಳುವ ಈ ಕಾವ್ಯ ಕೇವಲ ಬಹಿರಂಗದ ಸಾಮಾಜಿಕ ನೆಲೆಯಲ್ಲಿ ಕೆಲಸ ಮಾಡದೆ ತೀರ ಆತ್ಮೀಯವಾದ ವೈಯಕ್ತಿಕ ಸಂಬಂಧಗಳಲ್ಲಿಯೂ ಸೂಕ್ಷ್ಮವಾದ, ದಟ್ಟವಾದ ವಿಷಾದದ ಎಳೆಗಳನ್ನು ಚಿತ್ರಿಸುತ್ತದೆ" (ಜ್ವಲಂತ ಕವನ ಸಂಕಲನದ ಬೆನ್ನುಡಿಯಿಂದ). ಕೆ. ನೀಲಾ ಅವರ ಕಾವ್ಯ ಸಮಾಜವಾದದ ಹಿನ್ನೆಲೆಯಲ್ಲಿ ಸ್ತ್ರೀ ಕೇಂದ್ರಿತ ಅನುಭವಗಳನ್ನು ಕಟ್ಟಿಕೊಡುತ್ತದೆ.

ಮುಂಬಯಿ ಕರ್ನಾಟಕದ ಕವಯಿತ್ರಿಯರಲ್ಲಿ ಪ್ರಮುಖರಾದ ಮಾಲತಿ ಪಟ್ಟಣಶೆಟ್ಟಿ, ಸುಕನ್ಯಾ ಮಾರುತಿ, ಕಮಲಾಹೆಮ್ಮಿಗೆ, ಹೇಮಾಪಟ್ಟಣಶೆಟ್ಟಿ, ಆಶಾ ಕಡಪಟ್ಟಿ ಈ ಮೊದಲಾದ ಕವಯಿತ್ರಿಯರ ಕಾವ್ಯದಲ್ಲಿ ಸ್ತ್ರೀ ಸಂವೇದನೆಗಳ ತೀವ್ರತೆಯನ್ನು ಕಾಣಬಹುದಾಗಿದೆ. ಮಾಲತಿ ಪಟ್ಟಣಶೆಟ್ಟಿಯವರ ಕಾವ್ಯ, ಅನುಭವದ ಪಾತಳಿಯಿಂದ ಪುಟಿದೆದ್ದು ತನ್ನ ಎಲ್ಲಾ ಲಕ್ಷಣಗಳಿಂದ ಪಕ್ವಗೊಂಡು ಸ್ಪಂದಿಸಿದೆ.

ದಕ್ಷಿಣ ಕರ್ನಾಟಕದ ಚ. ಸರ್ವಮಂಗಳಾ, ಪ್ರತಿಭಾನಂದ ಕುಮಾರ, ಎಂ.ಆರ್. ಕಮಲಾ, ಬಾ.ಹ. ರಾಮಕುಮಾರಿ, ವಿಜಯಾ ಸುಬ್ಬರಾಜ್, ಶಶಿಕಲಾ ವೀರಯ್ಯ ಸ್ವಾಮಿ, ಎಚ್. ಎಲ್. ಪುಷ್ಪ, ಸ. ಉಷಾ, ಸವಿತಾನಾಗಭೂಷಣ, ಲತಾರಾಜಶೇಖರ್, ಪದ್ಮಾಶೇಖರ್, ಗುಡಿಬಂಡೆ ಪೂರ್ಣಿಮಾ, ಉತ್ತನೂರು ರಾಜಲಕ್ಷ್ಮಿ – ಈ ಮೊದಲಾದ ಕವಯಿತ್ರಿಯರ ಕಾವ್ಯ ಗಮನಾರ್ಹವಾಗಿದೆ. ಇವರೆಲ್ಲರ ಕಾವ್ಯ ರಚನಾ ವಿಶಿಷ್ಟತೆಯಿಂದ

ಹಾಗೂ ವಸ್ತು - ಭಾವ ನಿಷ್ಪತೆಯಿಂದ ಕಾವ್ಯ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಪಡೆದು ಕೊಂಡಿದೆ.

ಕಪ್ಪುನಾಡಿನ ಕವಿತೆಗಳ ಅನುವಾದದ ಮೂಲಕ ವಿಮರ್ಶಕರ ಗಮನಸೆಳೆದ ಎಂ.ಆರ್. ಕಮಲ ಅವರ ಕಾವ್ಯ ಶಕ್ತಿ ಅದ್ಭುತವಾಗಿದೆ. ಪುರುಷರಿಂದ ಕಡೆಗಣಿಸಿದ ಮಹಿಳೆಯ ಬದುಕಿನ ದುರಂತವನ್ನು ಪ್ರತಿಮೆ, ದೃಷ್ಟಾಂತಗಳಿಂದ ತಿಳಿಸುವ ವೈದೇಹಿಯವರ ಕಾವ್ಯ, ಮಹಿಳೆಯ ಸ್ವಾತಂತ್ರತೆ -ಸಮಾನತೆಯ ಆಶಯವನ್ನು ವ್ಯಕ್ತಪಡಿಸುತ್ತದೆ. ಪ್ರತಿಭಾ ನಂದಕುಮಾರ ಮತ್ತು ವೈದೇಹಿಯವರು ಮಧ್ಯಮ ವರ್ಗದ ಸಾಮಾಜಿಕ ಬದುಕಿನ ಅನುಭವಗಳನ್ನು ನವ್ಯ ಮಾದರಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಸವಿತಾನಾಗಭೂಷಣ ಅವರು ತಮ್ಮ ಅನುಭವವನ್ನೇ ಕಾವ್ಯವನ್ನಾಗಿಸುವ ಇವರ ಅಭಿವ್ಯಕ್ತಿ ರೀತಿ ವಿಶಿಷ್ಟ ವಾಗಿದೆ. ಎಚ್. ಎಲ್. ಪುಷ್ಪ ಅವರು ತಮ್ಮ ಅನುಭವವನ್ನು ಸ್ವಗತ ಶೈಲಿಯಲ್ಲಿ ಹೇಳುವುದರಿಂದ ಉಳಿದ ಕವಿಯಿತ್ರಿಯರಿಗಿಂತಲೂ ಭಿನ್ನವಾಗಿ ನಿಲ್ಲುತ್ತಾರೆ. ಚ. ಸರ್ವಮಂಗಳಾ ತಮ್ಮ ಸಮಕಾಲೀನ ಕವಿಯಿತ್ರಿಯರಲ್ಲೇ ಗಮನ ಸೆಳೆಯುವ ಕವನಗಳನ್ನು ರಚಿಸಿ ವಿಮರ್ಶಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ತನ್ನ ತಾಯಿ, ಅಜ್ಜಿಯ ಪರಂಪರಾಗತ ಸ್ಥಾಪಿತ ಮೌಲ್ಯಗಳಿಗೆ ಜೋತು ಬೀಳದೆ ಹೊಸ ಮೌಲ್ಯಗಳ ಹುಡುಕಾಟದ ಸ್ತ್ರೀ ಸಂವೇದನೆಗಳು ಸ. ಉಷಾ ಅವರ ಕಾವ್ಯದಲ್ಲಿ ಕಾಣಬಹುದಾಗಿದೆ. ಸ್ತ್ರೀಯ ಸ್ಥಾನ - ಮಾನಗಳಲ್ಲಿ ಬದಲಾವಣೆಯನ್ನು ಬಯಸುವ ವಿಜಯಾದಬ್ಬೆಯವರ ಕಾವ್ಯ ಮನೋ ಧರ್ಮ ಗಮನಾರ್ಹವಾಗಿದೆ. ಶಶಿಕಲಾ ವೀರಯ್ಯಸ್ವಾಮಿ ಅವರು ತಮ್ಮ ಕಾವ್ಯದಲ್ಲಿ ಸಮಾಜ ಹೆಣ್ಣನ್ನು ಪರಿಗಣಿಸಿದ ರೀತಿಯನ್ನು ಮುಚ್ಚುಮರೆಯಿಲ್ಲದೆ ಸಹಜವಾದ ಮಾತಿನಲ್ಲಿ ಹೇಳಿದ್ದಾರೆ. ಪ್ರೀತಿ, ಸ್ನೇಹದಂತಹ ಮಾನವೀಯ ಮೌಲ್ಯಗಳ ಪ್ರತಿಪಾದನೆ ಲತಾ ರಾಜಶೇಖರ್ ಅವರ ಕಾವ್ಯದಲ್ಲಿ ಕಾಣಬಹುದಾಗಿದೆ. ನವಿರಾದ ಪ್ರೇಮ ಭಾವನೆ ಗಳನ್ನು ತುಂಬಾ ಆತ್ಮೀಯವಾಗಿ, ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸಿದ್ದಾರೆ.

ಹೀಗೆ ದಲಿತ ಬಂಡಾಯ ಸಂದರ್ಭದ ಕವಯತ್ರಿಯರು ಯಾವ ಸಂಕೋಚವಿಲ್ಲದೆ ನಿರ್ದಾಕ್ಷಿಣ್ಯವಾಗಿ ತಮ್ಮ ಅನುಭವಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣಿನ ಆಳವಾದ ನೋವಿನ ಅನುಭವಗಳನ್ನು ವಸ್ತುನಿಷ್ಠವಾಗಿ ವ್ಯಕ್ತಪಡಿಸಿದ್ದಾರೆ. ಕೆಲವೊಮ್ಮೆ ತಮ್ಮ ಅನುಭವಕ್ಕೆ ಮೀರಿದ ಸಂಗತಿಗಳನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಪುರಾಣ ವ್ಯಕ್ತಿಗಳಾದ ಅಹಲ್ಯ, ಸೀತೆ, ಸಾವಿತ್ರಿ, ದ್ರೌಪತಿಯ ಕುರಿತು, ಇತಿಹಾಸ ವ್ಯಕ್ತಿ

ಗಳಾದ ಅಕ್ಕಮಹಾದೇವಿ, ದಕ್ಷಿಣ ಆಫ್ರಿಕಾದ ವಿನ್ನಿಯ ಕುರಿತು, ದೇಶದ ಹೋರಾಟಗಾರರಾದ ಗಾಂಧೀ, ಅಂಬೇಡ್ಕರ್, ಮಂಡೇಲಾ ಅವರ ಕುರಿತು ಅನೇಕ ಕವಯತ್ರಿಯರು ಕವಿತೆಗಳನ್ನು ಬರೆದಿದ್ದಾರೆ. ಇದರಿಂದ ಕವಯತ್ರಿಯರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ವ್ಯಕ್ತವಾಗುವುದು. ಒಟ್ಟಿನಲ್ಲಿ ಮಹಿಳಾ ಕಾವ್ಯದಲ್ಲಿ ಭಾವ ನಿಷ್ಠತೆ, ವ್ಯಕ್ತಿ ನಿಷ್ಠತೆ, ವಸ್ತುನಿಷ್ಠತೆ ಮತ್ತು ಸಮಾಜ ನಿಷ್ಠತೆ ಕಂಡುಬಂದಷ್ಟುಕಾವ್ಯ ನಿಷ್ಠತೆ ಕಂಡುಬರುವುದಿಲ್ಲ. ಈ ದೃಷ್ಟಿಯಿದ ಮಹಿಳಾ ಕಾವ್ಯ ಇನ್ನೂ ಗಟ್ಟಿಗೊಳ್ಳಬೇಕಾಗಿದೆ.

ನಾಟಕ ಕ್ಷೇತ್ರದಲ್ಲಿ ಒಬ್ಬಿಬ್ಬರು ಲೇಖಕಿಯರನ್ನು ಮಾತ್ರ ಕಾಣಬಹುದಾಗಿದೆ. ವಿಜಯಾ ಅವರು ನಾಟಕಕಾರರಾಗಿ ಗುರುತಿಸಲ್ಪಟ್ಟಿದ್ದಾರೆ. ವಿಜಯಾದಬ್ಬೆ, ಸುಮಿತ್ರಾಬಾಯಿ ಅವರು ವಿಮರ್ಶಕಿಯರೆಂದು ಗುರುತಿಸಲ್ಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಮಹಿಳಾ ಸಾಹಿತ್ಯ ಇನ್ನೂ ಮುಂದುವರೆಯಬೇಕಾಗಿದೆ. ಕಮಲಾಹಂಪನಾ, ಎನ್. ಗಾಯತ್ರಿ, ಚೆನ್ನಕ್ಕ ಪಾವಟೆ, ಶಾಲಿನಿ ರಘುನಾಥ, ಹನುಮಾಕ್ಷಿಗೋಗಿ, ಗಂಗಮ್ಮ ಸತ್ಯಂಪೇಟೆ, ಎಚ್.ಎಸ್. ಸುಜಾತ - ಈ ಮೊದಲಾದ ಲೇಖಕಿಯರು ವಿಮರ್ಶಾ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಆದರೂ ಇನ್ನಷ್ಟು ಭರವಸೆ ಯನ್ನು ಮೂಡಿಸುವಂತಹ ಕೃತಿಗಳು ಬರಬೇಕಾಗಿದೆ. ೮೦-೯೦ರ ದಶಕಗಳು ಲೇಖಕಿಯರ ಬೆಳವಣಿಗೆಯ ದೃಷ್ಟಿಯಿಂದ ಗಮನಿಸುವಂತಹದಾಗಿದೆ.

***

ದಿಕ್ಕುಗೆಟ್ಟ ಸಮಾಜದ ದಿಕ್ಸೂಚಕ - ಶ್ರೀ ಬಸವೇಶ್ವರರು

-ಕೆ.ವಿ. ಜುಕ್ತಿಮಠ

ಮಾನವ ಕುಲದ ಏಕತೆಯನ್ನು ಸಾರುವಲ್ಲಿ ಧರ್ಮದ ಪಾತ್ರ ಹಿರಿದು. ಈ ಮಾತಿಗೆ ಪುಷ್ಟಿ ಎನ್ನುವಂತೆ, ಜಗತ್ತಿನ ವಿವಿಧ ಧರ್ಮಗಳ ಪ್ರವಾದಿಗಳು ಸಾರಿದ ಸಂದೇಶಗಳೇ ಸಾಕ್ಷಿ. ಶ್ರೀ ಜ. ಆದಿರೇಣುಕರ ಪರಂಪರಾಗತ ಪೀಠಾಚಾರ್ಯರಾದ, ಲಿಂ. ರಂಭಾಪುರೀಶ್ವರರಾದ ಜ. ವೀರಗಂಗಾಧರ ಶಿವಾಚಾರ್ಯರು ಸಾರಿದ ಸಂದೇಶ ಮನೆಮಾತಾಗಿರುವುದು, ಗೊತ್ತಿರಲಿಕ್ಕೇಬೇಕು.

"ಮಾನವ ಧರ್ಮಕ್ಕೆ ಜಯವಾಗಲಿ
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ"

ಎನ್ನುವ ನುಡಿಮುತ್ತುಗಳು, ವೇದವಾಕ್ಯಕ್ಕೆ ಸಮಾನವಾಗಿವೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಎರಡು ವಾಕ್ಯದಲ್ಲಿ ಮನುಷ್ಯನ ಅಂತರಂಗದ ಮತ್ತು ಬಹಿರಂಗದ ಚಿತ್ರಣ ಬಿಂಬಿತವಾಗಿದೆ. ಏಕೆಂದರೆ ಈ ನುಡಿಗಳು ಯಾವುದೋ ಒಂದು ಧರ್ಮಕ್ಕೆ ಸೀಮಿತವಾದ ವಾಕ್ಯಗಳಲ್ಲ. 'ಮಾನವ ಧರ್ಮ ಒಂದೇ ' ಎನ್ನುವ ಅರ್ಥ ಸುವಿಧಿತ. ಹೀಗೆ ನೋಡಲಿಕ್ಕೆ ಚಿಕ್ಕ ವಾಕ್ಯವಾದರೂ ಬಹು ಅರ್ಥಗರ್ಭಿತವಾದ ನುಡಿಗಳು.

ಸುಮಾರು ೮೭೫ ವರ್ಷಗಳ ಹಿಂದೆಯೇ ಅಂದರೆ, ೧೨ನೇ ಶತಮಾನದಲ್ಲಿ ಈ ದಿಶೆಯಲ್ಲಿ ಆಧ್ಯಾತ್ಮಿಕ ತಳಹದಿಯ ಮೇಲೆ ಸರ್ವಸಮಾನತೆಯ ಸಮಾಜವನ್ನು ಕಟ್ಟಲು ಪರಿಶ್ರಮಿಸಿದ ಬಸವಣ್ಣನವರು ಆಚರಿಸಿ ತೋರಿದ ಮೌಲ್ಯಗಳು ವೈಶಿಷ್ಟ್ಯಪೂರ್ಣ. ಬಸವಣ್ಣನವರಲ್ಲಿದ್ದ ಬಹುಮುಖ ಪ್ರತಿಭೆಯನ್ನು ಕಂಡೇ 'ಕಾಯಕ ಯೋಗಿ', 'ಯುಗ ಪುರುಷ', 'ಭಕ್ತಿ ಭಂಡಾರಿ' ಇತ್ಯಾದಿ ರೀತಿಯಲ್ಲಿ ಸಂಬೋಧಿಸುವುದು ಅರ್ಥಪೂರ್ಣ.

ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ, ಆದರೆ ಸಾಧಿಸುವ ಛಲ ಮನುಷ್ಯನಲ್ಲಿರಬೇಕು. ಎನ್ನುವ ಹಿರಿಯರ ಮಾತಿನಂತೆ ಪರಿಪೂರ್ಣತೆಯನ್ನು ಒಗ್ಗೂಡಿಸಿದ ಧೀಮಂತ, ಸ್ವಪ್ರಯತ್ನ ಮತ್ತು ದೇವರ ಅನುಗ್ರಹದಿಂದ ಮನುಷ್ಯ ಉನ್ನತ ಗುರಿಯನ್ನು ತಲುಪಬಲ್ಲ ಎನ್ನುವುದಕ್ಕೆ ಅವರ ಜೀವನ ಸಾಧನೆಯೇ ನಿದರ್ಶನ. ಬಸವಣ್ಣನವರ ಬದುಕಿನ ವೈಚಾರಿಕತೆಯನ್ನು ಕುರಿತು ಚಿಂತಿಸುವಾಗ, ನಾವು ಗಮನಿಸಬೇಕಾದ

ಅಂಶವೆಂದರೆ ಅವರು ತಮ್ಮ ದೈನಂದಿನ ಬದುಕನ್ನು ಕಂಡ ರೀತಿ. ಅವರ ದೃಷ್ಟಿಯಲ್ಲಿ ಈ ಜಗತ್ತು ಮಾಯೆಯಲ್ಲ. ಇದಕ್ಕಿಂತ ಎಷ್ಟೋ ವರ್ಷಗಳ ಪೂರ್ವದಲ್ಲಿ ವೀರಶೈವ ಸಿದ್ಧಾಂತ ವನ್ನು ಬೆಳಗಿಸಿದ ಆಚಾರ್ಯವರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ಇದೇ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಬಲ್ಲವನೇ ಬಲ್ಲ ಬೆಲ್ಲದ ರುಚಿ ಎನ್ನುವಂತೆ ಬಸವಣ್ಣನವರು ಬೆಲ್ಲ ಯಾವುದು ? ಅದರ ವೈಶಿಷ್ಟ್ಯವೇನು? ಅದರ ಗುಣಧರ್ಮವೇನು? ಅದರ ರುಚಿ ಹೇಗಿರಬೇಕೆನ್ನುವುದನ್ನು ಹುಡುಕಿ, ಜನತೆಗೆ ತೋರಿಸಿಕೊಟ್ಟವರು ಜಗತ್ತು ಮಾಯೆ ಎಂದು ಸ್ವೀಕರಿಸಿದರೆ, ನಮ್ಮ ಬದುಕಿಗೆ ಬೆಲೆಯೇ ಇಲ್ಲದಂತೆ, ಜೀವನ ನಿರಾಕರಿಸಿ ದಂತೆಯೇ. ಹೀಗೆ ನಿರಾಕರಿಸಿದರೆ ವ್ಯಕ್ತಿಯ ಅಸ್ತಿತ್ವಕ್ಕೆ ಬೆಲೆ ಏನು ಬಂತು? ಸಾಮಾನ್ಯವಾಗಿ ಹಿಂದೂ ಧರ್ಮದಲ್ಲಿ ಬಹು ಮಟ್ಟಿಗೆ ನಿರಾಕರಣೆಯ ಕಡೆ ಹೆಚ್ಚು ಪ್ರಯತ್ನ ನಡೆದಿದೆ. ಆಲ್ಬರ್ಟ್ ಸ್ವೈಟಜರ್ ಎಂಬ ಪಾಶ್ಚಿಮಾತ್ಯ ಚಿಂತಕನ ಈ ಮಾತಿನಿಂದ ತಿಳಿಯುವುದು. Instead of life affirmation the effort has been towards life negation.

ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ, ಶಕ್ತಿಯುತವಾಗಿರುವ ಪರಶಿವನ, ಶಕ್ತಿಯ ಅವಿಷ್ಕಾರವೇ, ಈ ವಿಶ್ವದ ರೂಪವನ್ನು ಪಡೆದುಕೊಂಡಿದೆ. ಆದುದರಿಂದ "ಸರ್ವಂ ಶಿವಮಯಂ ಜಗತ್" ಎಂದು ನುಡಿಯುವ ಶಿವಾಗಮ ವಾಣಿಯು, ಪರಶಿವನೇ ವಿಶ್ವವ್ಯಾಪಿಯಾಗಿದ್ದು, ಅಣು, ತೃಣ, ಕಾಷ್ಟ ದಲ್ಲಿಯೂ ಅವನ ಅಸ್ತಿತ್ವ, ಸಕಲ ಚರಾಚರ ವಸ್ತುಗಳಲ್ಲಿಯೂ ಅವನು ರೂಹನ್ನು ಪಡೆದಿದ್ದಾನೆ ಎಂದು ಹೇಳುವುದು. 'ಶಿವಶಕ್ತಿ ಸಮುತ್ಪನ್ನೇ ಪ್ರಪಂಚೇ.. ಸ್ಮಿನ್ ವಿಕಲ್ಪತೇ..' (ಈ ಪ್ರಪಂಚ ಶಿವ-ಶಕ್ತಿಯರ ಸಂಪುಟ ಬಾಹ್ಯ ಇಂದ್ರಿಗಳ ಮೂಲಕ ಕಾಣುವುದು ಶಕ್ತಿಯ ರೂಪ. ಅದರೊಳಗಿರುವ ರೂಪ ಇಂದ್ರಿಯಾತೀತವಾದ ಪದಾರ್ಥ ಅದುವೇ ಶಿವ) ಎಂದು ಜ. ರೇಣುಕಾಚಾರ್ಯರು ಪಿಂಡಸ್ಥಲದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಅದನ್ನೇ ಶರಣರ ".. ನಿಮ್ಮ ನೆನಹೇ ನಿಮಗೆ ಶಕ್ತಿಯಾಯಿತಲ್ಲ; ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ ನಾಮ ಸೂಚನೆಯಾಯಿತಲ್ಲ ..." ಎನ್ನುವ ಮಾತಿನಿಂದ ತಿಳಿಯುವುದು. ಶಿವ ಮತ್ತು ಶಕ್ತಿ ಯರ ಸಂಬಂಧ ಅವಿನಾಭಾವ ಸಂಬಂಧ ಎಂದು ಹೇಳುವರು. ಸಾಧಕನಿಗೆ (ನಟನಿಗೆ) ಸಾಧನ ಮಂದಿರ (ನಾಟ್ಯ ಮಂದಿರ)ವೆಂದರೆ ಈ ಜಗತ್ತು, ಸೃಷ್ಟಿಕರ್ತನ ಟಂಕಸಾಲೆ ಇದ್ದಂತೆ, ಈ ಜಗತ್ತಿನ (ನಾಟ್ಯ ಮಂದಿರದ)ಲ್ಲಿ ಸರಿಯಾದ ರೀತಿಯಲ್ಲಿ ಚಲಾವಣೆಯೂ

ದರೆ ಮಾತ್ರ ಅದು ಪರಶಿವನಲ್ಲಿಯೂ ಚಲಾವಣೆಯಲ್ಲಾದಂತೆ. ಸರಿಯಾದ ರೀತಿಯಲ್ಲಿ ಚಲಾವಣೆಯಲ್ಲಿ ಬರಬೇಕಾದರೆ ಸರಿಯಾದ ರೀತಿಯಲ್ಲಿ ಆಚರಣೆಯನ್ನು ಪಾಲಿಸಬೇಕಾಗುತ್ತದೆ. ಅದಕ್ಕೆ ಬಸವಣ್ಣನವರ ಈ ವಚನಗಳನ್ನು ಗಮನಿಸೋಣ.

"ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ

ಮತ್ತು

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ

ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ...."

ಈ ಮಾತುಗಳನ್ನು ಗಮನಿಸಿದಾಗ ಜಗತ್ತಿನಿಂದ ವಿಮುಖನಾಗಬೇಕೆಂಬುದನ್ನು ಬೋಧಿಸಲಿಲ್ಲ. ಬದುಕಿನ ಸಾರ್ಥಕತೆಯನ್ನು ತೋರಿಸಿದ್ದಾರೆ. ಈ ಲೋಕದಲ್ಲಿಯೇ ಬಸವಣ್ಣನವರಿಗೆ ವಿಶ್ವಾಸವಿದೆ.

ಸಾಮಾನ್ಯವಾಗಿ ಧರ್ಮ ಎರಡು ಅಂಶಗಳನ್ನು ಒಳಗೊಂಡಿರುವುದು.

೧. ಸಾಂಪ್ರದಾಯಿಕ ಅಂಶಗಳು

೨. ನೈತಿಕ ಮೌಲ್ಯದ ಅಂಶಗಳು

ಧರ್ಮದ ಸಾಂಪ್ರದಾಯಿಕ ಅಂಶಗಳಲ್ಲಿ ಕಟ್ಟುನಿಟ್ಟಾದ ಧರ್ಮಾಚರಣೆಯ ನಿಯಮಗಳು ಒಳಗೊಂಡಿರುತ್ತವೆ. ಇದರ ಪ್ರಕಾರ ಕೆಲವಾರು ಧರ್ಮಗಳ ಅಂಶಗಳನ್ನು ಉದಾಹರಣೆಗೆ ಗಮನಿಸೋಣ. ವೀರಶೈವರು ಇಷ್ಟಲಿಂಗಾರ್ಚನೆ ತಪ್ಪದೇ ಮಾಡಬೇಕು. ಮುಸ್ಲಿಮರು ಮಸೀದಿಗೆ ಪ್ರಾರ್ಥನೆಗೆ ಹೋಗಬೇಕು, ಹಿಂದೂಗಳು ದೇವಾಲಯಗಳಿಗೆ ಭಜನೆಗೆ ಸಾಗಬೇಕು; ಕ್ರೈಸ್ತರು ಚರ್ಚಿಗೆ ಪ್ರಾರ್ಥನೆಗೆ ಬರಬೇಕು. ಇದಲ್ಲದೇ ತಮ್ಮ ತಮ್ಮದೇ ಆದ ಸಾಂಪ್ರದಾಯಕ ಆಚರಣೆಗಳು ಅವರವರ ಧರ್ಮಗಳಲ್ಲಿ ಭಿನ್ನವೆಂಬಂತೆ ಇವೆ. ಧರ್ಮಾಚರಣೆಯ ಮಾರ್ಗದಿಂದ ವ್ಯಕ್ತಿ ಪರಿಶುದ್ಧನಾಗಲಿಕ್ಕೆ ಸಾಧ್ಯವಿದೆ. ಇದು ಮೊದಲು ವ್ಯಕ್ತಿಯನ್ನು ಶುದ್ಧೀಕರಿಸುವ ಕೇಂದ್ರ ಇದ್ದ ಹಾಗೆ. (ಹಾಗೆ ಕರೆದರೂ ತಪ್ಪಾಗಲಿಕ್ಕಿಲ್ಲ).

ಧರ್ಮದ ಇನ್ನೊಂದು ಅಂಶ ಬಹಳ ಮಹತ್ವಪೂರ್ಣವು ಹೌದು. ಇದರಲ್ಲಿ ಮಾನವೀಯ ಮೌಲ್ಯಗಳೇ ಅಡಗಿರುತ್ತವೆ. ದಯೆ, ಕರುಣೆ, ಅನುಕಂಪ, ಸತ್ಯ, ಅಹಿಂಸೆ, ಸಹಿಷ್ಣುತಾ ಭಾವನೆ, ಭ್ರಾತೃತ್ವ ಅಂಶ, ಮುಂತಾದವುಗಳ ಸಂಗಮ. ಇವು ಎಲ್ಲ ಧರ್ಮಗಳಲ್ಲಿ ಸಾಮಾನ್ಯವಾಗಿ ಇದ್ದೇ ಇವೆ. ಆದ್ದರಿಂದಲೇ ಎಲ್ಲ ಧರ್ಮದ ಹರಿಕಾರರು

ಮತ್ತು ಮತಾವಲಂಬಿಗಳು ದೊಡ್ಡ ಹೆಸರು ಗಳಿಸಿದ್ದು. ಉದಾ. ಬುದ್ಧ, ಏಸು, ಪೈಗಂಬರ, ಶ್ರೀ ರೇಣುಕಾಚಾರ್ಯರು, ಬಸವ, ಗಾಂಧಿ ಹೀಗೆ ಇದರ ಪಟ್ಟಿ ಬೆಳೆಯುತ್ತಾ ಸಾಗುವುದು. ಈ ಎಲ್ಲ ಅಂಶಗಳು 'ಮಾನವ ಕುಲ ಒಂದು' ಎಂದು ತೋರಿಸಿ ಕೊಡುವಲ್ಲಿ ಹೆಚ್ಚು ಸಹಕಾರಿಯಾಗಿವೆ. ಮೊದಲನೆಯ ಅಂಶ ಸಮಷ್ಠಿ ಜೀವನಕ್ಕೆ ಸಂಬಂಧಿಸಿದರೆ ಅನಂತರದ್ದು, ಸಮಷ್ಠಿ ಜೀವನಕ್ಕೆ ಮಹತ್ವತೆಯನ್ನು ಕೊಡುವುದು. ನಮ್ಮ ದೇಶದ ಸಾಮಾಜಿಕ ವ್ಯವಸ್ಥೆ ಬಹು ಸಂಕೀರ್ಣತೆಯಿಂದ ಕೂಡಿದೆ. ಇದೊಂದು ದೊಡ್ಡ ಮ್ಯೂಜಿಯಂ. ಇಲ್ಲಿ ಹಲವು ಧರ್ಮವನ್ನು ಪಾಲಿಸುವ, ಹಲವು ಭಾಷೆಯನ್ನು ನುಡಿಯುವ, ಅನೇಕ ಸಂಪ್ರದಾಯಗಳನ್ನು ಪಾಲಿಸುವ ಜನರನ್ನು ಕಾಣುತ್ತೇವೆ. ಪ್ರಪಂಚ ದಲ್ಲಿಯೇ ಈ ರೀತಿಯ ವೈಶಿಷ್ಟ್ಯಪೂರ್ಣದಿಂದ ಕೂಡಿದ ಮತ್ತೊಂದು ದೇಶವನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ಯಾವಾಗ ನಾವುಗಳು ಎರಡನೆಯ ಮಾರ್ಗದ ಅಂಶಗಳನ್ನು ಮರೆಯುವೆವೋ ಆಗ ಧರ್ಮದ ಹೆಸರಿನಲ್ಲಿ ನಡೆಯಬಾರದ ಕ್ರಿಯೆಯೆಲ್ಲವೂ ನಡೆಯುತ್ತವೆ. ಅದಕ್ಕೆ ಬಸವಣ್ಣನವರು ಯಾರನ್ನೂ ಬೇರೆ ಎಂದು ಕರೆಯದೆ ಅವರೆಲ್ಲರು ನಮ್ಮವರೆ ಎಂಬ ಭಾವವನ್ನು ಬೆಳಸುವಲ್ಲಿ ಮುಂದಾದರು. ಈ ಮಾತನ್ನು ಕೆಳಗಿನ ವಚನದಿಂದ ತಿಳಿದುಕೊಳ್ಳಬಹುದು.

"ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ..
ನಿಮ್ಮ ಮನೆಯ ಮಗನೆನಿಸಯ್ಯ..."

ಎನ್ನುವ ಮಾತಿನಲ್ಲಿ ದೇಶದಲ್ಲಿ ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ನಡೆಯಬಾರದ ಅಹಿತಕರ ಘಟನೆಗಳಿಗೆ ಇತಿಶ್ರೀ ಹಾಡಿದ್ದಾರೆ . ಆ ಕಾರಣವೇ ' ದಿ ಲ್ಯಾಂಡ್ ಆಫ್ ಲಿಂಗಂ' ಎಂಬ ಪುಸ್ತಕದಲ್ಲಿ ಶ್ರೇಷ್ಠ ಬ್ರಿಟಿಷ್ ವಿಚಾರವಾದಿ ಆರ್ಥರ್ ಮಾಯಿಲ್ "ದಂತಕಥೆಗಳು ಬಸವಣ್ಣನವರ ಬಗ್ಗೆ ಏನೇ ಹೇಳಲಿ, ಅವರೋರ್ವ ಭಾರತೀಯ ಮೊಟ್ಟ ಮೊದಲನೆಯ ಸ್ವತಂತ್ರ ವಿಚಾರವಾದಿ" ಎಂದು ಹೇಳಿದುದು ಸ್ತುತ್ಯಾರ್ಹ.

ವೀರಾಗಮ ದಲ್ಲಿ ಸಿಕ್ಕುವ ಅಂಶದಂತೆ "ಅಸ್ಪೃಶ್ಯರ (ಶೂದ್ರರ) ಉದ್ಧಾರಕ್ಕಾಗಿ ಶ್ರೀ ಆದಿ ರೇಣುಕರ ಅವತಾರ, ವರ್ಣ ಬೇಡ, ಆಶ್ರಮ ಬೇಡ, ಅತ್ಯಾಶ್ರಮವನ್ನು ಸಾರುವ ವೀರಶೈವ ಮಾಧ್ಯಮದಲ್ಲಿ ಮಹತ್ತರ ಕ್ರಾಂತಿಯನ್ನು ಮಾಡಿದರು". ಈ ನಿಟ್ಟಿ ನಲ್ಲಿ ತಮ್ಮ ಹೆಜ್ಜೆಯನ್ನು ಸಾಗಿಸಿದ ಬಸವಣ್ಣನವರು, ಮಾನವತಾವಾದಿಗಳಾಗಿ ಮೆರೆದರು. ಇದನ್ನೇ ರಾಷ್ಟ್ರಕವಿ ಕುವೆಂಪುರವರ ಶ್ರೀ ಬಸವೇಶ್ವರರಿಗೆ ಎಂಬ ಕವನದಲ್ಲಿ ಕಾಣುತ್ತೇವೆ.

"ಜಾತಿ ಪದ್ಧತಿಯ ಹೋಮಕೂಪಕ್ಕೆ
ಬಿದ್ದು ವೈದಿಕರ ಯಜ್ಞ ತಾಪಕ್ಕೆ
ಬಲಿಹೋದ ದಲಿತ ಜೀವರನೆತ್ತಿ ಮತಿ ವಿಚಾರಕ್ಕೆ
ಕಾಯಕದ ದಿವ್ಯ ತತ್ತ್ವದಾ ಸುಕ್ಷೇಮ ಧರ್ಮನಾಶಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ"

ಪುರಾತನ ಕಾಲದಿಂದಲೂ ಸಾಗಿಕೊಂಡು ಬಂದಿದ್ದ 'ಇಷ್ಟಲಿಂಗ' ಪೂಜೆಯ ಮಹತ್ವವನ್ನು ಸಮಾಜಕ್ಕೆ ಅರುಹಿದರು. ಅದರಲ್ಲಡಗಿರುವ ವೈಚಾರಿಕತೆಯನ್ನು ಗಮನಿಸಿ, ಮಹತ್ವ ಕೊಟ್ಟರು. ಇಷ್ಟಲಿಂಗ ಪೂಜೆಯಿಂದ ದೊರೆಯುವ ಮೊದಲ ಪ್ರಯೋಜನವೆಂದರೆ, ವ್ಯಕ್ತಿಗೆ ದೊರೆಯುವ ಧಾರ್ಮಿಕ ಸ್ವಾವಲಂಬನೆ. ಅಲ್ಲದೆ, ಅದು ಪರಶಿವನ ಚುಳುಕು.

" ಜಗದಗಲ ಮುಗಿಲಗಲ ...
ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ "

ಈ ವಚನದಿಂದ ಅತ್ಯುನ್ನತ, ಎಲ್ಲದಕ್ಕೂ ಕಾರಣನಾದ ಪರಶಿವನ ಚುಳುಕು ಇಷ್ಟಲಿಂಗ, ಭಕ್ತನ ಕರಸ್ಥಲದಲ್ಲಿ ನೆಲೆಗೊಂಡ ರೂಪ, ಎಲ್ಲ ಕೇಂದ್ರವನ್ನು ತನ್ನಲ್ಲಿಯೇ ಕೂಡಿಸಿಕೊಂಡಿರುವ ವಿಶ್ವದ ಪ್ರತಿರೂಪದಂತಿರುವ ಈ ಲಿಂಗವು, ಭಕ್ತನ ರಕ್ಷಾಕವಚ, ಅದನ್ನೇ ಭಕ್ತಿಯಿಂದ ಮನಸಾರೆ ಪೂಜಿಸಬೇಕೆನ್ನುವುದನ್ನು ಬಸವಣ್ಣನವರ ಇಚ್ಛೆ. ಇಷ್ಟಲಿಂಗ ಪೂಜೆ ಮತ್ತು ಧಾರಣೆಯಲ್ಲಿ ಮತ್ತೊಂದು ಅತ್ಯಂತ ಮಹತ್ವದ ನೈತಿಕ ಮೌಲ್ಯವನ್ನು ಬಿಂಬಿಸಬಹುದು. ಓರ್ವ ತತ್ವಜ್ಞಾನಿ ಹೀಗೆ ವರ್ಣಿಸಿದ್ದಾನೆ: ಸಮಾಜದಲ್ಲಿನ ಏರುಪೇರುಗಳನ್ನು (ಜಾತಿಪದ್ಧತಿಗಳನ್ನು) ಸಮಾನಗೊಳಿಸುವ ತತ್ವವೇ ಇಷ್ಟಲಿಂಗ ಎಂದು. (Istalinga is the Leveller of ups and downs in the society)ಪ್ರತಿಯೊಬ್ಬರ ಅಂತರಂಗದ ಚೈತನ್ಯದ ಕುರುಹಾದ ಇಷ್ಟಲಿಂಗ ಜಾತ್ಯಾತೀತತೆ, ಸಮಾನತೆ, ಐಕ್ಯತೆಯ ಕುರುಹು.

".....ಅಂಗದ ಮೇಲೆ ಲಿಂಗವಿದ್ದವರನ್ನು ಸಂಗಮನಾಥನೆಂಬೆ " ಎನ್ನುವ ಬಸವಣ್ಣನವರ ಉಕ್ತಿಯಲ್ಲಿ ಮೇಲಿನ ಅರ್ಥವನ್ನು ಉಗ್ಗಡಿಸಿದ್ದಾರೆ. ಇಷ್ಟಲಿಂಗವಿಲ್ಲದವರು ವೀರಶೈವರೇ ಅಲ್ಲ. ಇದು ಸತ್ಯ. ಇಷ್ಟಲಿಂಗದ ಮೇಲಿನ ಭಕ್ತಿ - ಕಾಯಕ - ದಾಸೋಹ - ಪ್ರಸಾದ ಈ ಮೌಲ್ಯಗಳನ್ನು ಬೆಳಗಿಸಿ, ಆಧ್ಯಾತ್ಮಿಕ ತಳಹದಿಯ ಮೇಲೆ ವ್ಯಕ್ತಿಗಳನ್ನು ನಿರ್ಮಿಸಿ ಇಂತಹ ಒಟ್ಟು ವ್ಯಕ್ತಿಗಳ ಮೊತ್ತದ ಕಲ್ಯಾಣ ರಾಜ್ಯವನ್ನು ಕಟ್ಟಿದವರು ಶ್ರೀ ಬಸವಣ್ಣನವರು. ಕಲ್ಯಾಣ, ಶಬ್ದಕ್ಕೆ ತಕ್ಕಂತೆ ಕಲ್ಯಾಣವೇ ಆಗಿತ್ತು.

ಕಾಯಕ :

ಕಾಯಕ ಯೋಗಿ ಎನಿಸಿರುವ ಬಸವಣ್ಣನವರು, ಕಾಯಕಕ್ಕೆ ಬಹು ಪ್ರಾಧಾನ್ಯತೆಯನ್ನು ಕೊಟ್ಟವರು. ದುಡಿಯುವುದೇ ಶಿವಾರ್ಚನೆ. ಇದು ಸ್ವತಃ ಅವರ ಜೀವನದೃಷ್ಟಿಯಿಂದ ಮೂಡಿಬಂದ ಸಂದೇಶ. ಕಾಯಕ ಸಮಾಜದ ಸರ್ವಾಂಗೀಣ ಬೆಳವಣಿಗೆಗೆ ಬೇಕಾಗಿರುವ ಭದ್ರ ಬುನಾದಿಯಾಗಿದೆ. ದೇಹವನ್ನು ದಂಡಿಸಿ ಅಥವಾ ಕೆಲಸ ಮಾಡಿ, ದುಡಿದು ಬದುಕಬೇಕು. ದುಡಿಯದೇ ಉಣ್ಣುವುದು ಅನ್ಯಾಯ. ಅಷ್ಟೆಯಲ್ಲ ಅಧರ್ಮ. ಅನ್ಯರನ್ನು ಕೈಯೊಡ್ಡಿ ಕಾಡಿ, ಬೇಡಿ ಬದುಕುವುದು ಹೀನವಾದ ಕಾರ್ಯ. ಅದಕ್ಕೆ ಬಸವಣ್ಣನವರು "ಬೇಡುವರಿಲ್ಲದೇ ಬಡವನಾದೆ..." ಎಂದು ನುಡಿದದ್ದು. ಕಲ್ಯಾಣ ಪಟ್ಟಣದಲ್ಲಿ ಯಾರೊಬ್ಬರು ಕಾಯಕರಹಿತರಿರಲಿಲ್ಲ. ಬಸವಣ್ಣನವರ ಭಿಕ್ಷುಕರಿಲ್ಲದ ಸಮಾಜದ ಕನಸು ಅಂದಿನ ಕಲ್ಯಾಣ ಪಟ್ಟಣದಲ್ಲಿ ನನಸಾಗಿದ್ದಿತು. ಗುರುವಾಗಲಿ, ಜಂಗಮನಾಗಲಿ, ಗೌಡನಾಗಲಿ, ಕ್ಷತ್ರಿಯನಾಗಲಿ ಯಾರೇ ಆದರೂ ಕಾಯಕ ಸಹಿತನಾಗಿರಬೇಕು. ಬಸವಣ್ಣನವರು ಸ್ವತಃ ಕರಣಿಕರಾದದ್ದು, ಪ್ರಧಾನಮಮಂತ್ರಿಯಾದದ್ದು, ಅವರು ಕಾಯಕಕ್ಕೆ ತೋರಿದ ನಿಷ್ಠೆಯ ಪ್ರತೀಕ.

ಕಾಯಕದಿಂದ ಕಾರೆಸೊಪ್ಪದರೂ ಅದು ಲಿಂಗಾರ್ಪಿತ. ಕಾಯಕದಲ್ಲಿ ನಿರತನಾಗಿರುವ ವ್ಯಕ್ತಿ ಗುರುಲಿಂಗ ಜಂಗಮನನ್ನಾದರೂ ಮರೆಯಬೇಕು. ಅಂದರೆ, ನಾವು ಕೆಲಸ ಮಾಡುತ್ತಿದ್ದಾಗ ಜಂಗಮನು ಅಥವಾ ಗುರು ಬಂದನೆಂದು ನಮ್ಮ ಕಾಯಕ ಮೊಟಕುಗೊಳಿಸಬೇಕಾಗಿಲ್ಲ. ಅಂದರೆ ಕಾಯಕಕ್ಕೆ ಅಷ್ಟೊಂದು ಪ್ರಾಧಾನ್ಯತೆಯನ್ನು ಕೊಟ್ಟರು. 'ಅನುಭವ ಮಂಟಪ 'ಎಂಬ ಧಾರ್ಮಿಕ, ದಾರ್ಶನಿಕ ವಿಷಯಗಳ ನೇರವಾದ ಚರ್ಚಾ ಮಂಟಪವನ್ನು ಪ್ರಾರಂಭಿಸಿ ಮುಕ್ತವಾದ ಚರ್ಚೆಯಲ್ಲಿ ಶರಣ - ಶರಣೆಯರು ನಿರತರಾಗುತ್ತಿದ್ದರು ಎಂಬ ವಿಷಯವನ್ನು 'ಶೂನ್ಯ ಸಂಪಾದನೆ' ಕೃತಿಯಲ್ಲಿ ಕಾಣುತ್ತೇವೆ. ಈ ಅನುಭವ ಮಂಟಪದ ಸದಸ್ಯನಾಗಬೇಕಾದರೆ, ವೀರಶೈವನೆಂದೆನಿಸಿಕೊಳ್ಳಬೇಕಾದರೆ ಯಾವುದೋ ಒಂದು ಕಾಯಕದಲ್ಲಿ ಅವನು ನಿರತನಾಗಿರಬೇಕು. ಕಾಯಕದಲ್ಲಿ ಹಿರಿದು - ಕಿರಿದು, ಮೇಲುಕೀಳುಗಳಿರಲಿಲ್ಲ. ಯಾವ ಕಾಯಕವಾದರೂ ಸರಿಯೆ. ಅದನ್ನು ನಿಷ್ಠೆಯಿಂದ ಮಾಡಬೇಕು. "Dignity of Labour"ಎಂಬ ಸಿದ್ಧಾಂತವನ್ನು ೮೦೦ ವರ್ಷಗಳ ಹಿಂದೆಯೇ ಜನಪ್ರಿಯ ಗೊಳಿಸಿದರು. ಉದಾ :- ಇಂದಿನ ಜಪಾನ್ ದೇಶದಲ್ಲಿ ಕಾಯಕಕ್ಕೆ ಎಷ್ಟೊ ಪ್ರಾಧಾನ್ಯತೆ ಇದೆ ನೋಡಿ. ಬಸವಣ್ಣನವರು ನುಡಿದ

ಕಾಯಕನಿಷ್ಠೆಯನ್ನು ನಾವು ಪಾಲಿಸಿದರೆ ಜಪಾನ್ ದೇಶದ ಎಷ್ಟೋ ಪಟ್ಟು ಮುಂದೆ ಬರಬಹುದು. ಕಾರಣ ಸಮೃದ್ಧವಾದ ನೈಸರ್ಗಿಕ ಸಂಪತ್ತು ಜಪಾನ್ ದೇಶಕ್ಕಿಂತ ನಮ್ಮ ದೇಶದಲ್ಲಿ ಹೆಚ್ಚಿದೆ ಎಂದು ಭೌಗೋಳಿಕವಾಗಿ ಕಂಡ ಸತ್ಯ.

ಅದಕ್ಕೆ "ಕಾಯಕವೇ ಕೈಲಾಸ"ವೆಂದವರು, ಕೈಲಾಸವೆಂಬುದು ಮತ್ತೊಂದು ಲೋಕವಲ್ಲ. ಕಾಯಕದಲ್ಲಿಯೇ (ದುಡಿಮೆಯಲ್ಲಿಯೇ) ಕೈಲಾಸವನ್ನು ತೋರಿದವರು. ಶ್ರೀ ರೇಣುಕರ "ಕಾಯಕ ಕಳಾ ಚೈತನ್ಯ" ಮತ್ತು ವೃತ್ತಿ "ಚೈತನ್ಯ ರೂಪಿಣಿ" ಎನ್ನುವ ನುಡಿಯನ್ನೇ ಬಸವಣ್ಣನವರು ಕೈಲಾಸವೆಂದು ಕರೆದಿದ್ದು. ಕಾಯಕಗಳ ಫಲ, ಲೋಕದ ಒಳಿತಿಗೆ ಕಲ್ಯಾಣಕ್ಕೆ ತಲುಪಬೇಕು. ವ್ಯಕ್ತಿಯ ಆರ್ಥಿಕ ಬೆಳವಣಿಗೆಯಲ್ಲಿ ಸಮಾಜದ ಸುಖವಿರಬೇಕು. ಸಮಾಜದ ಸುಖದಲ್ಲಿ ವ್ಯಕ್ತಿಯ ಹಿತವಿರಬೇಕು. ಇದು ಬಸವಣ್ಣನವರು ಲೋಕಕ್ಕೆ ಕೊಟ್ಟ ಮಹತ್ತರ ಕೊಡುಗೆ.

ದಾಸೋಹ ಮತ್ತು ಪ್ರಸಾದ :

ನಾವು ನಡೆಸಿಕೊಂಡು ಬಂದ ಕಾಯಕ ಪರಿಪೂರ್ಣವಾಗಬೇಕಾದರೆ ದಾಸೋಹ ಮತ್ತು ಪ್ರಸಾದವನ್ನು ನಡೆಸಬೇಕು. ಮನುಷ್ಯನಲ್ಲಿ ಸ್ವಾರ್ಥ ಪ್ರವೃತ್ತಿ ಹೆಚ್ಚಾದಂತೆಲ್ಲ ಸಂಗ್ರಹ ಮಾಡಬೇಕೆಂಬ ಭಾವನೆ ಬರುವುದು. ಇವತ್ತಿಗೆ, ನಾಳೆಗೆ ನಮ್ಮ ಮಕ್ಕಳಿಗೆ, ನಮ್ಮ ಮೊಮ್ಮಕ್ಕಳಿಗೆ ಹೀಗೆ ಗುಣಾಕಾರ, ಭಾಗಾಕಾರ ಹಾಕಿ ಕೂಡಿಡುವುದು ಲೋಭದ ಗುಣ. ಆದರೆ ದಾಸೋಹವನ್ನುಆಚರಿಸುವುದರಿಂದ ಇದೆಲ್ಲ ಅಡಗುವುದು 'ಸೋಹಂ ಭಾವನೆಯು ಶಿವೋಹಂ' ಎಂಬ ಭಾವನೆಯನ್ನು ಮುಂದೆ ತರುವುದು. ಬಸವಣ್ಣನವರ ಜೀವನ ದೃಷ್ಟಿ ಎಂದರೆ ಮನ- ಬುದ್ಧಿಗಳನ್ನು ಹೃದಯ ಸಂಸ್ಕಾರದ ಬಲದಿಂದ ಹಿಡಿತದಲ್ಲಿಡುವುದು. ಯಾರಿಗೆ ಲೋಭ ಹೆಚ್ಚಾದ ಹಾಗೆಲ್ಲ ಸಂಗ್ರಹ ಕಾರ್ಯ ಹೆಚ್ಚಾಗುತ್ತದೆ. ಸಂಗ್ರಹ ಕಾರ್ಯ ನಡೆದಂತೆಲ್ಲ ಸಮಾಜದ ಸ್ವಾಸ್ಥ ಉಳಿಯಲಾರದು. ಸಮಾಜದಲ್ಲಿ ಏರಿಳಿತ ಸೃಷ್ಟಿಯಾಗುವುದು. ಶ್ರೀಮಂತವರ್ಗ, ಬಡವರ್ಗ ಎನ್ನುವ ಪಂಗಡಗಳು ಉದ್ಭವಿಸುವುವು. ಅಲ್ಲದೇ ಶ್ರಿಮಂತವರ್ಗ ಬಡವರ್ಗವನ್ನು ಶೋಷಣೆಗೆ ಗುರಿಪಡಿಸುವುದು. ಇವೆಲ್ಲ ಸಾಗಿ ಬರುತ್ತವೆ. ಬಸವಣ್ಣನವರ ಪ್ರಕಾರ ಎಲ್ಲರೂ ಸರಿಸಮಾನರಾಗಿ ಬದುಕಬೇಕು. ಬಡವರ್ಗವನ್ನು ಸಮಾಜದಲ್ಲಿ ಶೋಷಣೆ ಮಾಡುತ್ತ ಹೋದಂತೆಲ್ಲ ಸಮಾಜದ ಆರೋಗ್ಯ ಸರಿ ಉಳಿಯಲಾರದು. ಬಡವರ್ಗ ಬದುಕುವುದಕ್ಕಾಗಿ, ಕೆಟ್ಟ ಕೆಲಸವನ್ನು ಮಾಡಲಿಕ್ಕೆ ಮುಂದಾಗುವುದು. (ಕೇವಲ

ಬಡವರಷ್ಟೆ ಕೆಟ್ಟ ಕೆಲಸ ಮಾಡುತ್ತಾರೆಂದು ಭಾವಿಸಬೇಡಿ, ಹಣದ ಅಡಚಣೆ ಇದ್ದವರು, ಅತಿಯಾಗಿ ಹಣಕ್ಕೆ ಬಾಯಿ ತೆಗೆಯುವ ಜನ) ಕೊಲೆ, ಸುಲಿಗೆ, ಡಕಾಯಿತಿ, ದೊಂಬಿ ಇತ್ಯಾದಿ ಜರುಗಲಿಕ್ಕೆ ಕಾರಣರಾಗುತ್ತಾರೆ. ಕೆಲವೇ ಕೆಲವು ಶ್ರೀಮಂತ ವರ್ಗದವರ ಶೋಷಣೆಯಿಂದ ರೊಚ್ಚಿಗೆದ್ದು ಈ ಕೆಲಸ ನಡೆಯುವುದು. ಅಲ್ಲದೆ ಶ್ರೀಮಂತಿಕೆಯ ಮದ ಹೆಚ್ಚಾದಂತೆಲ್ಲ ಶ್ರೀಮಂತ ವರ್ಗದವರ ಮನೆಯಲ್ಲಿಯು ಶಾಂತಿ ಉಳಿಯಲಾರದು. ತಂದೆ-ತಾಯಿಯವರಿಗೆ ಗೌರವ ಕೊಡುವ ಭಾವನೆಯಾಗಲಿ, ಗುರುಹಿರಿಯರಿಗೆ ಗೌರವ ಕೊಡುವ ಭಾವನೆಯಾಗಲಿ, ರಾಶಿ-ರಾಶಿ ರೂಪದಲ್ಲಿ ಬರುವ ಹಣದ ಬೆಂಬಲದಿಂದ ನೂರೆಂಟು ಚಟಾದಿಗಳನ್ನು ಕಲಿತುಕೊಂಡು ಒಳ್ಳೆಯವರಿಗೆ ತೊಂದರೆ ಕೊಡುವುದು, ಹೀಗೆ ಸಮಾಜದ ಸ್ವಾಸ್ಥ ಕೆಡಿಸುವುದರ ಜೊತೆಗೆ ರೋಗರುಜಿನಕ್ಕೆ ಒಳಗಾಗಿ ತಮ್ಮ ಸ್ವಾಸ್ಥವನ್ನು ಕೆಡಿಸಿಕೊಳ್ಳುವರು. ಒಂದು ಕಡೆ ಶ್ರೀಮಂತ ವರ್ಗದವರ ಗೋಳು ಒಂದು ತೆರನಾದರೆ ಬಡವರ್ಗದವರ ಗೋಳು ಮತ್ತೊಂದು ರೀತಿ. ಇದಕ್ಕೆ ಕಾರಣ ಒಂದೇ ಎನ್ನುವುದನ್ನು ಮರೆಯುವಂತಿಲ್ಲ. ಅದುವೇ 'ಹಣ' . ಅದಕ್ಕೆ ಬಸವಣ್ಣನವರಲ್ಲಿ ತಾವು ದುಡಿದ ದುಡಿಮೆಯ ಫಲವನ್ನು ನಾಳಿಗೆ ಎಂದು ಸಂಗ್ರಹಿಸುವ ಪ್ರವೃತ್ತಿ ಇರಲಿಲ್ಲ.

> 'ಹೊನ್ನಿನೊಳಗೊಂದೊರೆಯ, ಸಿರಿಯೊಳಗೊಂದು, ಎಳೆಯ
> ಇಂದಿಂಗೆ, ನಾಳಿಂಗೆ ಬೇಕೆಂದನಾದೊಡೆ ನಿಮ್ಮಾಣೆ
> ಪ್ರಮಥರಾಣೆ , ನಿಮ್ಮ ಶರಣರಿಗಲ್ಲದೇ ಮತ್ತೊಂದಕ್ಕೆ
> ಮಾಡೆನು...'

ಎಂದು ಸ್ಪಷ್ಟಪಡಿಸಿದ್ದು, ೨೧ನೇ ಶತಮಾನಕ್ಕೆ ಕಾಲಿಡುತ್ತಿರುವ ನಾವು ಬದುಕಲಿಕ್ಕೆ ಬೇಕಾದಷ್ಟನ್ನು ಇಟ್ಟರೆ ಸಂತೋಷ; ಆದರೆ ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮೊಮಮಕ್ಕಳು ಕುರಿತು ಉಂಡರು ಸವೆಯದಷ್ಟು ಸಂಗ್ರಹಿಸುವ ಪ್ರವೃತ್ತಿ ನಮ್ಮಲ್ಲಿ ಬೆಳೆಸಿಕೊಂಡಿದ್ದೇವೆ. ಬಸವಣ್ಣನವರು ಇದನ್ನು ಕಟುವಾಗಿ ವಿರೋಧಿಸಿ ಅದನ್ನು ದಾಸೋಹ - ಪ್ರಸಾದವಾಗಿ ಮಾಡಿರುವುದನ್ನು ಸಾರಿದ್ದಾರೆ ನೋಡಿ:

> "ಕಾಗೆಯೊಂದಗಳು ಕಂಡರೆ ಕರೆಯದೇ ತನ್ನ ಬಳಗವೆಲ್ಲವನು
> ಕೋಳಿಯೊಂದು ಗುಟುಕು ಕಂಡರೆ ಕೂಗಿ ಕರೆಯದೇ
> ತನ್ನ ಕುಲವೆಲ್ಲವು...."-

ಈ ವಚನದಿಂದ ನಮಗೆ ತಿಳಿಯುವುದು, ದೊರೆತಿರುವ ಫಲದಲ್ಲಿ, ಸಿಕ್ಕಿರುವ ರೊಟ್ಟಿಯಲ್ಲಿ

ಹಂಚಿಕೊಂಡು ಊಟ ಮಾಡೋಣ. ಹಂಚಿ ಊಟ ಮಾಡುವುದರಲ್ಲಿ ಸುಖ - ಸಂತೋಷ ನೆಮ್ಮದಿ ಇದೆ ; ಎನ್ನುವ ಬಲಿಷ್ಠವಾದ ತತ್ವವನ್ನು ಸಾರಿದರು. ಇದರಲ್ಲಿ ಸಮಾಜದ ಸ್ವಾಸ್ಥ ಇದೆ.

'ಪ್ರಸಾದ' ಎಂಬ ತತ್ವದ ಅಂತಿಮ ಅರ್ಥವನ್ನು ನಾವು ಗಮನಿಸಬೇಕು. ಪರಶಿವನ ಕೃಪಾ ಬಲದಿಂದ ದೇಹವನ್ನು ಧರಿಸಿಕೊಂಡದ್ದು, ಅಲ್ಲದೆ ಆತನ ವರಪ್ರಸಾದದಿಂದಲೇ ಸಕಲ ಚರಾಚರ ವಸ್ತುಗಳ ಉದಯ ಎನ್ನುವುದನ್ನು ಹಲವು ವಚನಗಳಲ್ಲಿ ಕಾಣುತ್ತೇವೆ, ಅಂದ ಮೇಲೆ ಆತನ ಕೃಪೆಯಿಂದ ಹುಟ್ಟಿದ ಈ ಶರೀರವನ್ನು ಆತನಿಗೆ ಅರ್ಪಿಸುವುದರಲ್ಲಿ ಯಾವ ಆತಂಕ ? 'ಪ್ರಸಾದ' ದ ಪರಿಕಲ್ಪನೆ, ಮೊದಲನೆಯ ಹಂತದ ಅರ್ಥದಲ್ಲಿ : ಆತನಿಂದ ಹುಟ್ಟಿದ ದವಸ-ಧಾನ್ಯಗಳನ್ನು ಪ್ರಸಾದ ಮಾಡಿ ಅರ್ಪಿಸುವುದು, ಅಥವಾ ಭೌತ ಪದಾರ್ಥಗಳನ್ನು ಅರ್ಪಿಸುವುದು. ಕೊನೆಯ ಹಂತದ ಅರ್ಥದಲ್ಲಿ : 'ಅಂಗ' ನನ್ನು ಲಿಂಗನಿಗೆ ಅರ್ಪಿಸಿ ಪರಶಿವನಿಗೆ ಶರಣಾಗತರಾಗುವ ಸಿದ್ಧಾಂತ. ಅದುವೆ 'ಲಿಂಗಾಂಗ ಸಾಮರಸ್ಯ' ಅಂಗನು ಕೂಡ ಲಿಂಗದ ಸ್ವರೂಪ ಆಗಬೇಕು. ಆ ಸ್ವರೂಪದಲ್ಲಿ ಬೆಳಗ ಬೇಕಾದರೆ ಈ ಮೇಲೆ ಹೇಳಿದ ವೀರಶೈವದ ಎಲ್ಲ ಆಚಾರಗಳನ್ನು ಪಾಲಿಸಬೇಕೆಂಬುದನ್ನು ಗಮನದಲ್ಲಿಡಬೇಕು. ಈ ಮೇಲಿನ ಆದರ್ಶಗಳನ್ನು ಬೆಳಸಿಕೊಳ್ಳಲಿಕ್ಕೆ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಸಿದ್ಧಾಂತ ಗಳನ್ನು ಬೋಧಿಸಿದ್ದಾರೆ. ಇವೆಲ್ಲವುಗಳಲ್ಲಿ ಸಾಕಷ್ಟು ಕಟ್ಟು ನಿಟ್ಟಿನ ಆಚರಣೆಗಳು ಬರುತ್ತವೆ. ಅವೆಲ್ಲವುಗಳನ್ನು ಆಚರಿಸಿದಾಗಲೇ ಪರಿ ಪೂರ್ಣ ವ್ಯಕ್ತಿತ್ವವನ್ನು ಪಡೆದು ಕೊಳ್ಳಲು ಸಾಧ್ಯ. ಅಂತಹ ಪರಿಪೂರ್ಣ ವ್ಯಕ್ತಿತ್ವವನ್ನು ಪಡೆದುಕೊಂಡ ಶ್ರಿ ಬಸವೇಶ್ವರರು ಸಾಮಾನ್ಯರೇ ಯುಗಪುರುಷರು. ಗೀತೆಯಲ್ಲಿಯ ಶ್ರೀ ಕೃಷ್ಣ ಪರಮಾತ್ಮನ ವಾಣಿಯಲ್ಲಿ ನೋಡುವ.

ಯದಾ ಯತಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ||

ಯಾವ ಸಂದರ್ಭದಲ್ಲಿ ಧರ್ಮ ಅವನತಿಯ ಹಂತಕ್ಕೆ ಸಾಗುವುದೋ ಆಗ 'ನಾನು' ಧರ್ಮಾಧಿಕಾರಿಯ ರೂಪದಲ್ಲಿ ಅವತರಿಸಿ ಬರುತ್ತೇನೆ ಎನ್ನುವ ಅರ್ಥಗರ್ಭಿತ ಮಾತಿನಂತೆ, ಸುಮಾರು ೮೭೫ ವರ್ಷಗಳು ಗತಿಸಿದರೂ ಶ್ರೀ ಬಸವೇಶ್ವರರು ಪ್ರಸಿದ್ಧ ಪಡಿಸಿದ ತತ್ವಗಳು ಸಮಕಾಲೀನ ಜಗತ್ತಿಗೂ ಇಷ್ಟೊಂದು ಸ್ತುತ್ಯಾರ್ಹವಾದುದನ್ನು ನೋಡಿದರೆ,

ಚಿಂತಿಸಿದರೆ ಅವರ ತತ್ವಗಳು ಸಾರ್ವಕಾಲಿಕ ಎನ್ನುವುದರಲ್ಲಿ ಯಾವ ಸಂಶಯವಿಲ್ಲ. ಆದರೆ ಬೇಸರದ ಸಂಗತಿ ಎಂದರೆ, ನಮ್ಮ ಇಂದಿನ ದೇಶದ ಪರಿಸ್ಥಿತಿಯನ್ನು ನೋಡಿದರೆ ಬಸವಣ್ಣನವರ ತತ್ವಾದರ್ಶಗಳನ್ನು ಪಾಲಿಸುತ್ತಿಲ್ಲವೆನಿಸುತ್ತದೆ. ಅದನ್ನೇ ಮಹಾತ್ಮಾ ಗಾಂಧೀಜಿಯ ಮಾತಿನಲ್ಲಿ ಕೇಳಿ : "ಹಿಂದಿನ ಕಾಲದಲ್ಲಿ ೮೦೦ ವರ್ಷಕ್ಕಿಂತ ಮೊದಲು ಬಸವೇಶ್ವರರು ಯಾವ ತತ್ವ ಆಚರಿಸಿ ; ಉಪದೇಶ ಮಾಡಿದ್ದರೋ ಅಷ್ಟೆಲ್ಲ ತತ್ವಗಳನ್ನು ನಾನು ಆಚರಿಸುತ್ತಿದ್ದೇನೆ. ನಾನು ಸಾಧಕ. ಬಸವೇಶ್ವರರ ಹಾಗೆ ಸಿದ್ಧ ಪುರುಷನಲ್ಲ. ಬಸವಣ್ಣನವರು ತಾವು ಹೇಳಿದ ತತ್ವಗಳನ್ನೆಲ್ಲ ಆಚರಣೆಯಲ್ಲಿ ತಂದಿದ್ದರು. ಅವುಗಳಲ್ಲಿ ಅಸ್ಪೃಶ್ಯತೆ ನಿವಾರಣೆ ಮತ್ತು ಕಾಯಕ ತತ್ವಗಳೂ ಇಂದಿಗೂ ಬಹು ಮುಖ್ಯ ವಾದವುಗಳು. ಈ ಕಾಲದಲ್ಲಿ ಅವರಿದ್ದರೆ ಜಗತ್ತಿಗೆ ಪೂಜ್ಯ ವ್ಯಕ್ತಿಗಳಾಗಿ ಕಂಗೊಳಿಸು ತ್ತಿದ್ದರು. ಆ ಧರ್ಮಾನುಯಾಯಿಗಳಾದ ನೀವು ಅವರು ಉಪದೇಶಿಸಿದ ತತ್ವಗಳನ್ನು ಆಚರಣೆಯಲ್ಲಿ ತಂದರೆ ಭಾರತ ಭೂಮಿಯನ್ನಷ್ಟೇ ಅಲ್ಲ, ಜಗತ್ತನ್ನೇ ಉದ್ಧಾರ ಮಾಡಬಲ್ಲಿರಿ"ಎಂದು ಅಖಿಲ ಭಾರತ ಕಾಂಗ್ರೆಸ್ ನ ೨೫ನೇ ವಾರ್ಷಿಕ ಮಹಾಧಿವೇಶನ ಬೆಳಗಾವಿಯಲ್ಲಿ ಜರುಗಿದಾಗ (೧೯೨೪) ಅಧ್ಯಕ್ಷೀಯ ಭಾಷಣದಲ್ಲಿ ಆಡಿದ ಮಾತುಗಳು. ಕಾರಣ ಇಷ್ಟೇ, ನಮ್ಮದನ್ನು ಕಳೆದು ಹುಡುಕುತ್ತಾ ಪರರ ಸಂಸ್ಕೃತಿಯನ್ನು ನಾವು ಸ್ವೀಕರಿಸುತ್ತಿರುವುದು, ಎಷ್ಟು ಅಪಹಾಸ್ಯ ನೋಡಿ. ನಿಜವಾಗಿಯೂ ನಾವು ಶ್ರೀ ಬಸವೇಶ್ವರರಿಗೆ ಗೌರವ ತೋರಿಸುವವರೇ ಆಗಿದ್ದರೆ, (ಅವರ ಜಯಂತಿ ಕಾರ್ಯಕ್ರಮ ವನ್ನು ಮನಸಾರೆ ಆಚರಿಸುವವರೇ ಆಗಿದ್ದರೆ), ಅವರ ತತ್ವಾದರ್ಶಗಳನ್ನು ಪಾಲಿಸೋಣ. ಪಾಲಿಸುವುದರಿಂದ ನಮ್ಮ ದೇಶಕ್ಕೂ, ನಮಗೂ ಸುಭಿಕ್ಷೆ, ಇದಕ್ಕಿಂತ ಸಂತೋಷದ ವಿಷಯ ಮತ್ತೊಂದಿಲ್ಲ.

‡‡

ಕನ್ನಡ ನಿಘಂಟುವಿಜ್ಞಾನ ಮತ್ತು ರಚನೆ*

- ಡಾ. ವಿಲ್ಯಂ ಮಾಡ್ತ

ಕರ್ನಾಟಕ ಸಂಸ್ಕೃತಿಯ ಭೌತಿಕ ಹಾಗೂ ಅಭೌತಿಕ ಆಯಾಮಗಳ ವಿಭಿನ್ನ ಅಧ್ಯಯನಗಳನ್ನು ಒಟ್ಟಾಗಿ ಕರ್ನಾಟಕ ಅಧ್ಯಯನಗಳು ಎಂದು ಕರೆದಾಗ ಕನ್ನಡ ನಿಘಂಟು ವಿಜ್ಞಾನ ಮತ್ತು ರಚನೆ ಎಂಬ ಅಧ್ಯಯನ ಅದರ ಒಂದು ಘಟಕವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖವಾಗಿ ೫ ಭಾಗಗಳಿವೆ. ಭಾಗ ಒಂದರಲ್ಲಿ, ಕನ್ನಡಕ್ಕೆ ಸೀಮಿತವಾದ ನಿಘಂಟು ವಿಜ್ಞಾನ (lexicology)ಭಾಗ ಎರಡರಲ್ಲಿ, ನಿಘಂಟುರಚನೆ (Lexicography) ಬೆಳೆದು ಬಂದಿರುವ ದಾರಿಯ ಸಿಂಹಾವಲೋಕನ ಮಾಡಲಾಗಿದೆ. ಭಾಗ ಮೂರರಲ್ಲಿ ಕನ್ನಡ ನಿಘಂಟುವಿಜ್ಞಾನ ಮತ್ತು ರಚನೆಯ ಅಧ್ಯಯನ ಮಾಡಲಾಗಿದೆ. ನಾಲ್ಕನೆಯ ಭಾಗ ಸಮಾರೋಪವಾದರೆ, ಐದನೆಯದು ಪರಾಮರ್ಶನ ಸಾಹಿತ್ಯಸೂಚಿ.

ಕನ್ನಡ ನಿಘಂಟು ರಚನೆಯಲ್ಲಿ ಪ್ರಮುಖವಾಗಿ ಎರಡು ಪದ್ಧತಿಗಳನ್ನು ಗುರುತಿಸಬಹುದು :

೧. ಪ್ರಾಚೀನ ಶಾಸ್ತ್ರೀಯ ಪದ್ಧತಿ

೨. ಆಧುನಿಕ ವೈಜ್ಞಾನಿಕ ಪದ್ಧತಿ

ಮೊದಲನೆಯದು, ಸಂಸ್ಕೃತ ಪರಂಪರೆಯಿಂದ, ಪಂಡಿತವರ್ಗದಿಂದ, ಪರಂಪರಾಗತವಾಗಿ ಬಂದಿರುವ ವಿಧಿಯಾತ್ಮಕ ಸ್ವರೂಪದ ನಿಗಮನ ಪದ್ಧತಿ. (Deductive Methodology) ಈ ಅಭಿಜಾತ(classical) ಪರಂಪರೆಯಲ್ಲಿ ವೇದಶಬ್ದಗಳ ವಿವರಣೆ ಮೀಸಲಾದವುಗಳನ್ನು ನಿಘಂಟುಗಳೆಂದೂ, ಇತರ ಶಬ್ದಾರ್ಥ ಕುರಿತವುಗಳನ್ನು ಕೋಶ ಗಳೆಂದೂ ವಿಶ್ಲೇಷಿಸುತ್ತಾರೆ. (ಜಿವೆಂ. ೧) ಅಮರಸಿಂಹನ ನಾಮಲಿಂಗಾನು ಶಾಸನ/ಅಮರಕೋಶ, ಹೆಸರೇ ಸೂಚಿಸುವಂತೆ (Secular dictionary)ಕೋಶವೇ ಹೊರತು ನಿಘಂಟು (Canonical Dictionary) ಅಲ್ಲ. ನಿಘಂಟುಗಳ ಅರ್ಥವಿವರಗಳೇ ನಿರುಕ್ತ. ನಿರುಕ್ತ ಕೇವಲ ಅರ್ಥವಿವರವಾಗಿರದೆ ವೇದಕ್ಕೆ ವ್ಯಾಕರಣವೂ ವಿಮರ್ಶೆಯೂ ಆಗಿರುತ್ತದೆ. (ಜಿವೆಂ ೩-೪). ಯಾಸ್ಕನ ನಿರುಕ್ತ (ಕ್ರಿ.ಪೂ. ೭೦೦-೫೦೦) ಇದಕ್ಕೆ ಸಾಕ್ಷಿ.

* ಅಖಿಲ ಭಾರತ ೭೦ನೇಯ ಕನ್ನಡ ಸಾಹಿತ್ಯ ಸಮ್ಮೇಳನ (ಹಾಸನ: ೧೯೯೬ ರಲ್ಲಿ ಮಂಡಿಸಿದ ಪ್ರಬಂಧ

ಎರಡನೆಯದು, ಆಧುನಿಕ ಭಾಷಾವಿಜ್ಞಾನದ ಪ್ರಭಾವದಿಂದ ಬಂದಿರುವ ವಿವರಣಾತ್ಮಕ ಸ್ವರೂಪದ ಅನುಗಮನ ಪದ್ಧತಿ (Inductive Methodology). ಈ ಪದ್ಧತಿಯಲ್ಲಿ ನಿಘಂಟಿಗೆ ಸಂಬಂಧಿಸಿದಂತೆ, ಎರಡು ಮುಖ್ಯ ವಿಭಾಗಗಳನ್ನು ಗುರುತಿಸುತ್ತಾರೆ:

೧. ನಿಘಂಟುವಿಜ್ಞಾನ (Lexicology)

೨. ನಿಘಂಟು ರಚನೆ (Lexicography)

ಭಾಗ : ೧.೦ ನಿಘಂಟು ವಿಜ್ಞಾನ

ನಿಘಂಟಿಮಗಳ ಸ್ವರೂಪ ,ಲಕ್ಷಣ, ಅರ್ಥವಿವೇಚನೆ, ಅರ್ಥವ್ಯಾಪ್ತಿ, ಅರ್ಥದ ಆಯಾಮಗಳು, ರೂಪ ವೈವಿಧ್ಯ ಹಾಗೂ ಸಂಯೋಜನೆಗಳನ್ನು ಒಳಗೊಂಡ ಸೈದ್ಧಾಂತಿಕ ವಿವೇಚನೆಯೇ ನಿಘಂಟುವಿಜ್ಞಾನ. ಒಂದು ನಿಘಂಟಿನಲ್ಲಿ ಸ್ವತಂತ್ರವಾಗಿ ಬರಬಹುದಾದ ಭಾಷಿಕ ರೂಪವೇ ನಿಘಂಟಿಮ. ಶಬ್ದಕ್ಕಿಂತ ಕಿರಿದಾದ 'ಅ' ಎಂಬ ವರ್ಣ ಅಥವಾ – ಗೆ ಎಂಬ ಪ್ರತ್ಯಯ ಅಂತೆಯೇ `A three - and - a - half - year - old - girl' ಎಂಬಿತ್ಯಾದಿ ದೀರ್ಘ ಪದವೂ ಒಂದೇ ನಿಘಂಟಿಮ ಎಂದೆಣಿಸಲಾಗುತ್ತದೆ. ಶಬ್ದಗಳಿಗೆ ನಿರ್ದೇಶಕಾರ್ಥದ ಜೊತೆಗೆ ಸೂಚ್ಯಾರ್ಥಗಳೂ ಇರುತ್ತವೆ. ಪ್ರಾಣತ್ಯಾಗ ಮಾಡು ಮತ್ತು ನೇಣು ಹಾಕು ಎಂಬ ಪದಗಳಿಗೆ 'ಸಾಯು' ಎಂಬ ನಿರ್ದೇಶಕಾರ್ಥವಿದ್ದರೂ ಸೂಚ್ಯಾರ್ಥಗಳು ಭಿನ್ನವಾಗಿರುತ್ತವೆ; ಕಾರಣ, ಅವುಗಳನ್ನು ಪರ್ಯಾಯವಾಗಿ ಬಳಸುವುದು ಅಸಾಧ್ಯ. ಕೆಲವೊಮ್ಮೆ ನಿಘಂಟಿಮಗಳ ಅರ್ಥವ್ಯಾಪ್ತಿ (Semantic range) ಭಿನ್ನವಾಗಿರುತ್ತದೆ. ದಕ್ಷಿಣೆ, ಸಂಬಳ, ಮಜೂರಿ – ಇವುಗಳೆಲ್ಲ ಮಾಡಿದ ಕೆಲಸಕ್ಕೆ ಕೊಡುವ ಹಣವಾದರೂ ಅವುಗಳ ಅರ್ಥವ್ಯಾಪ್ತಿ ಭಿನ್ನವಾಗಿರುತ್ತದೆ. ದಕ್ಷಿಣೆ ಪೂಜಾರಿಗೆ, ಸಂಬಳ ನೌಕರನಿಗೆ, ಮಜೂರಿ ಕೂಲಿಕಾರನಿಗೆ ಮೀಸಲು. ಇವುಗಳಲ್ಲದೆ ಶಬ್ದಗಳಿಗೆ ಅನೇಕಾರ್ಥಕತೆ, (Polysymy)ಸಮರೂಪತೆ, (Homonymy) ಸಮಾನಾರ್ಥಕತೆ (Synonymy)ಗಳೆಂಬ ಆಯಾಮಗಳಿರುತ್ತವೆ. ಪದಗಳನ್ನು ಪದಪುಂಜ ಗಳನ್ನಾಗಿ, ಸಮಾಸಗಳನ್ನಾಗಿ, ನುಡಿಗಟ್ಟುಗಳನ್ನಾಗಿ, ಗಾದೆಗಳನ್ನಾಗಿ ಸಂಯೋಜಿಸಿಕೊಳ್ಳಬಹುದು. ಇವುಗಳೆಲ್ಲದರ ತಾತ್ವಿಕ ವಿವೇಚನೆಯೇ ನಿಘಂಟುವಿಜ್ಞಾನ; ಅದು ನಿಘಂಟುರಚನೆಗೆ ತಾತ್ವಿಕ ಹಾಗೂ ತಳಹದಿ ಸ್ವರೂಪದ್ದಾಗಿರುತ್ತದೆ.

ನಿಘಂಟು ವಿಜ್ಞಾನದ ಅನ್ವಯ (Application/Praxis)ವೇ ನಿಘಂಟು ರಚನೆ. ``ಒಂದು ಭಾಷಾ ಸಮಾಜದ ಭಾಷಾ ಪ್ರಯೋಗಗಳಿಂದ ಆರಿಸಿದ, ಸಮಾಜೀಕರಣಗೊಂಡ ಭಾಷಿಕ ರೂಪಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಿ ಕೊಳ್ಳುವುದೇ ನಿಘಂಟು``-ಎಂದು ಸಿ.ಜೆ. ಬರ್ಗ್ (C.J.BERG) ಅಭಿಪ್ರಾಯಪಡುತ್ತಾರೆ (ZGUSTA,197) .

ಭಾಷಿಕರೂಪಗಳನ್ನು ಅರ್ಥಾತ್ ನಿಘಂಟಿಮಗಳನ್ನು ಸೂಚಿಸುವಾಗ ಅದರ ಪ್ರಧಾನ ರೂಪ, ಅದರ ರೂಪವರ್ಗ (Form class), ಅನಿಯಮಿತ ರೂಪಗಳು, ವ್ಯಾಕರಣ ಮಾಹಿತಿ, ಧ್ವನ್ಯಾತ್ಮಕ ರೂಪ, ವ್ಯುತ್ಪತ್ತಿ, ಉದಾಹರಣೆಗಳು, ಪರ್ಯಾಯ ಪದಗಳು, ಜ್ಞಾತಿ ಪದಗಳು ಇತ್ಯಾದಿಗಳನ್ನು ಆಧುನಿಕರು ಸೇರಿಸುತ್ತಾರೆ.

ಈ ಹಿನ್ನೆಲೆಯಲ್ಲಿ, ಕನ್ನಡ ನಿಘಂಟುಗಳ ವರ್ಗೀಕರಣ ಮತ್ತು ರಚನೆಯನ್ನು ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಭಾಗ : ೩.೦ ಕನ್ನಡ ನಿಘಂಟು : ವಿಜ್ಞಾನ ಮತ್ತು ರಚನೆ

ಕನ್ನಡ ನಿಘಂಟಿಗೆ ಸು. ಒಂದು ಸಾವಿರ ವರ್ಷದ ಚರಿತ್ರೆ ಇದ್ದರೂ ಕನ್ನಡದಲ್ಲಿ ನಿಘಂಟು ವಿಜ್ಞಾನದ ಬಗೆಗೆ ಇತ್ತೀಚೆಗೆ ಮಾತ್ರ, ಅದೂ ಕ್ವಚಿತ್ತಾಗಿ, ಸಾಹಿತ್ಯ ಸಿಗುತ್ತದೆ. ಕರ್ನಾಟಕದಲ್ಲಿ ೧೯೫೦ ರಿಂದ ಈಚೆಗೆ ಭಾಷಾ ವಿಜ್ಞಾನ ತೀನಂಶ್ರೀ, ಆರ್‌ಸಿ, ಹಾಮಾನಾ ಅವರಿಂದ ಆರಂಭಗೊಂಡು ಮೈಸೂರು ಹಾಗೂ ಕರ್ನಾಟಕ ವಿಶ್ವ ವಿದ್ಯಾಲಯಗಳಲ್ಲಿ ಬೆಳೆದುಬಂದರೂ ೧೯೮೮ ರ ವರೆಗೆ, ನಿಘಂಟು ವಿಜ್ಞಾನದ ಬಗೆಗೆ ಯಾವ ಅಧ್ಯಯನದ ಸುಳಿವಾಗಲೀ, ಪ್ರಸ್ತಾಪವಾಗಲೀ ದೊರಕುತ್ತಿಲ್ಲ.

೩.೧ ಕನ್ನಡ ನಿಘಂಟು ವಿಜ್ಞಾನ

೧೯೮೮ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಮಾಳವಾಡ ಸ್ಮಾರಕ ಉಪನ್ಯಾಸ ಮಾಲಿಕೆಯಲ್ಲಿ ವಿಲ್ಯಂ ಮಾಡ್ತ ಅವರು (೧) ನಿಘಂಟು ವಿಜ್ಞಾನ ಮತ್ತು (೨) ನಿಘಂಟು ರಚನಾ ವಿಜ್ಞಾನ ಎಂಬ ಎರಡು ದತ್ತಿ ಉಪನ್ಯಾಸಗಳನ್ನು ನೀಡಿದರು. ಅವು ಮುಂದಿನ ವರ್ಷದಲ್ಲಿ ಅದೇ ವಿಶ್ವವಿದ್ಯಾಲಯದ ಸಂಶೋಧನ ಪತ್ರಿಕೆಯಾದ ಸಾಧನೆ (೧೯೮೯ : ೧೮.೧ -೨, ೩-೪)ಯಲ್ಲಿ ಪ್ರಕಟವಾದವು. ಇದೇ ಕನ್ನಡ ನಿಘಂಟು ವಿಜ್ಞಾನದ ಪ್ರಪ್ರಥಮ ದಾಖಲೆ. ಇದು ೧೬ ಪುಟಗಳ ವ್ಯಾಪ್ತಿಯಲ್ಲಿ

ಬಂದಿದೆ.

೧೯೬೩ ರಲ್ಲಿ ಜಿ. ವೆಂಕಟಸುಬ್ಬಯ್ಯನವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೀಡಿದ ಪ್ರೊ. ಶಿ.ಶಿ. ಬಸವನಾಳ ಮೂಲಭೂತ ವಿಚಾರೋಪನ್ಯಾಸದಲ್ಲಿ ನಿಘಂಟುಶಾಸ್ತ್ರವನ್ನು ಕುರಿತಾಗಿ ಪ್ರಸ್ತಾಪ ಮಾಡಿದ್ದಾರೆ. ಮುಂದೆ ೧೯೭೪ರಲ್ಲಿ ವಿಲ್ಯಂ ಮಾಡ್ತ ಮತ್ತು ಆರ್. ವಾಯ್. ಕುಲಕರ್ಣಿಯವರ ನಿಘಂಟು ರಚನಾ ವಿಜ್ಞಾನ ಬೆಳಕಿಗೆ ಬಂತು. ಇವುಗಳನ್ನು ಬಿಟ್ಟರೆ ನಿಘಂಟು ವಿಜ್ಞಾನವನ್ನು ಕುರಿತು ಬೇರೆ ಯಾವ ಸಾಮಗ್ರಿಯೂ ನನಗೆ ದೊರಕಿಲ್ಲ.

೩.೨ ಕನ್ನಡ ನಿಘಂಟು : ವರ್ಗೀಕರಣ

ಕನ್ನಡ ನಿಘಂಟುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು

೧. ಪ್ರಾಚೀನ ಕನ್ನಡನಿಘಂಟುಗಳು : ಹತ್ತನೆಯ ಶತಮಾನದಿಂದ ಹದಿನೆಂಟನೆಯ ಶತಮಾನದ ವರೆಗೆ

೨. ಅರ್ವಾಚೀನ ನಿಘಂಟುಗಳು : ಹದಿನೆಂಟನೆಯ ಶತಮಾನದಿಂದ ಇಲ್ಲಿಯ ವರೆಗೆ.

ಅರ್ವಾಚೀನ ನಿಘಂಟುಗಳಲ್ಲಿ ಎರಡು ವಿಧ :

(ಅ) ಸಾಂಪ್ರದಾಯಿಕ ನಿಘಂಟುಗಳು ಮತ್ತು

(ಆ) ವೈಜ್ಞಾನಿಕ ನಿಘಂಟುಗಳು.

೩.೩ ಕನ್ನಡ ವೈಜ್ಞಾನಿಕ ನಿಘಂಟು ರಚನೆ:

ಕನ್ನಡ ನಿಘಂಟು ರಚನೆ ರನ್ನನ ಕಾಲದಿಂದಲೂ ಕರ್ನಾಟಕದಲ್ಲಿ ನಡೆದು ಬಂದಿದೆಯಾದರೂ ವೈಜ್ಞಾನಿಕ ರೀತಿಯಲ್ಲಿ ಅದಕ್ಕೆ ನಾಂದಿಯಾದುದು ರೆ. ಎಫ್. ಕಿಟಲ್ ಎಂಬ ಕ್ರೈಸ್ತ ಮಿಷನರಿಯಿಂದ. ಅವರು ೧೮೯೪ ರಲ್ಲಿ ಪ್ರಕಟಿಸಿದ ಕನ್ನಡ - ಇಂಗ್ಲೀಷ್ ನಿಘಂಟು ಕನ್ನಡದ ಪ್ರಪ್ರಥಮ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿದ ನಿಘಂಟು. ಅದು ಇಂದಿಗೂ ಅದ್ವಿತೀಯವಾದದ್ದು ಎಂಬುದು ಕನ್ನಡಿಗರಿಗೆ ಹೆಮ್ಮೆಯ ವಿಷಯ.

ಅಷ್ಟೇ ಅಲ್ಲ, ಕನ್ನಡಿಗರನ್ನೊಳಗೊಂಡು ಎಲ್ಲ ನಿಘಂಟುಕಾರರಿಗೆ ಕಿಟಲ್ ನಿಘಂಟು ಒಂದು ಮಾದರಿಯಾಗಿದೆ. ಕಿಟಲ್ ಕೋಶ ಅಳವಡಿಸಿದ ಪದ್ಧತಿ ಆಧುನಿಕ ನಿಘಂಟು ರಚನಾ ವಿಜ್ಞಾನ ಪದ್ಧತಿಗಿಂತ ಭಿನ್ನವಾಗಿಲ್ಲದಿರುವುದನ್ನು ನಾವು ಗಮನಿಸಬೇಕು..

೩.೩.೧ ಆಧುನಿಕ ಕೋಶ ರಚನೆಯ ಪದ್ಧತಿಯ ಹೆಜ್ಜೆಗಳು :

೧. ಕ್ಷೇತ್ರ ಕಾರ್ಯ

ಶಬ್ದಕೋಶದ ಗುರಿ, ವ್ಯಾಪ್ತಿಗಳನ್ನು ಗಮನಿಸಿ ನಿಘಂಟುಕಾರ ಕ್ಷೇತ್ರಕಾರ್ಯವನ್ನು ಮಾಡಬೇಕು. ಸರ್ವಸಂಗ್ರಾಹಕ ಶಬ್ದಕೋಶ ರಚಿಸುವಲ್ಲಿ ಆತ ಲಿಖಿತ ಸಾಹಿತ್ಯದೊದಿಗೆ ಮೌಖಿಕ ಸಾಹಿತ್ಯದ ಪರಿವೀಕ್ಷಣೆ, ವಿವಿಧ ಭೋಗೋಳಿಕ ಪ್ರದೇಶಗಳ ಹಾಗೂ ವಿವಿಧ ಜಾತಿ ವರ್ಗಗಳಿಗೆ ಸೇರಿದ ನಿರೂಪಕರನ್ನು ಸಂಪರ್ಕಿಸಬೇಕು. ಆತ/ಆಕೆ ಹಾಗೂ ಸಮಷ್ಟಿ ಸ್ವರೂಪದ ಸಾಹಿತ್ಯ ಕೃತಿಗಳಿಂದ ಶಬ್ದಗಳನ್ನು ಸಂಗ್ರಹಿಸವಾಗ ತಾರತಮ್ಯ ಭಾವಕ್ಕೆ ಆಸ್ಪದ ಕೊಡದೆ ಎಲ್ಲ ರೂಪಗಳಿಗೂ ಸಮಾನ ಸ್ಥಾನಮಾನ ನೀಡುವುದು ನಿಘಂಟುಕಾರನ/ಳ ಪ್ರಥಮ ಕರ್ತವ್ಯ.

೨. ನಿಘಂಟಿಮಗಳ ಆಯ್ಕೆ :

ಕ್ಷೇತ್ರಕಾರ್ಯದಂತೆ ನಿಘಂಟಿಮ ಶಬ್ದಗಳ ಆಯ್ಕೆ ಕೂಡ ಶಬ್ದಕೋಶದ ಗುರಿ ವ್ಯಾಪ್ತಿಗಳನ್ನು ಅವಲಂಬಿಸಿದೆ. ಕ್ಷೇತ್ರಕಾರ್ಯದ ಮೂಲಕ ದೊರಕಿಸಿಕೊಂಡ ದತ್ತ ಸಂಗ್ರಹದಿಂದ ಶಬ್ದಗಳ ಆಯ್ಕೆ ಮಾಡಬೇಕು. ಸರ್ವಸಂಗ್ರಾಹಕ ಶಬ್ದಕೋಶದಲ್ಲಿ ಎಲ್ಲ ಶಬ್ದಗಳನ್ನೂ ಅರ್ಥಾತ್ ವಿಭಿನ್ನ ಪ್ರದೇಶಗಳು, ಜಾತಿವರ್ಗಗಳ ಶಬ್ದಗಳು; ಶಿಷ್ಟ ಹಾಗೂ ಗ್ರಾಮ್ಯ ರೂಪಗಳು, ಜ್ಞಾತಿ ಪದಗಳು, ಮೂಲ ಹಾಗೂ ಸಾಧಿತ ರೂಪಗಳು, ಸಮಾಸಗಳು, ನುಡಿಗಟ್ಟುಗಳು, ಗಾದೆಗಳು, ಪ್ರತಿಧ್ವನಿತಗಳು, ದ್ವಿರುಕ್ತಿಗಳು, ಉದ್ಗಾರಗಳು, ಸಮಾನಾರ್ಥಕ ಹಾಗೂ ವಿರುದ್ಧಾರ್ಥಕಗಳೇ ಮುಂತಾದ ಪದಗಳನ್ನು ಆಯ್ಕೆ ಮಾಡಿಕೊಳ್ಳುವುದು ಅತ್ಯಗತ್ಯ.

೩. ನಿಘಂಟಿಮದ ರಚನೆ :

ಆಯ್ಕೆ ಮಾಡಿದ ಶಬ್ದಗಳನ್ನು ಅವುಗಳ ನಿಯಮಿತ ರೂಪಗಳಲ್ಲಿ ನಮೂದಿಸಬೇಕು. ಆರಂಭದಲ್ಲಿ ಪ್ರಧಾನ ಪದವನ್ನು ನಮೂದಿಸಿ ಅದರ ಉಚ್ಚಾರವನ್ನು ಧ್ವನ್ಯಾತ್ಮಕ ಲಿಪಿಯಲ್ಲಿ ಸೂಚಿಸಿ, ಆ ಬಳಿಕ ಅದರ ವ್ಯುತ್ಪತ್ತಿಯನ್ನು ಕೊಟ್ಟು, ಅದರ ವ್ಯಾಕರಣ ವರ್ಗವನ್ನೂ, ವಿಕಾರ ರೂಪಗಳನ್ನೂ ಸೂಚಿಸಿ, ಅದಕ್ಕೆ ಸಂಬಂಧಿಸಿದ ಜ್ಞಾತಿ ಪದಗಳನ್ನು ಕೊಟ್ಟಾಗ ಶಬ್ದದ /ನಿಘಂಟಿಮದ ರೂಪವನ್ನು ವಿವರಿಸಿದಂತಾಗುತ್ತದೆ.

ನಿಘಂಟಿಮದ ರಚನೆಯಲ್ಲಿ ಅದರ ರೂಪದ ವಿವರದಷ್ಟೇ ಅರ್ಥದ ವಿವರವೂ ಪ್ರಮುಖ. ಈ ಅರ್ಥ ವಿವರದಲ್ಲಿ ಸಮಾನಾರ್ಥಕಗಳು, ವಿವರಗಳು, ಮತ್ತು ಪ್ರಯೋಗಳು ಪ್ರಮುಖ ಘಟಕಗಳು.

ಪ್ರಾಚೀನ ಕನ್ನಡ ನಿಘಂಟುಗಳು

ಸಾಮಾನ್ಯ

ಏಕಭಾಷಿಕ		ದ್ವಿಭಾಷಿಕ	
ಪದ್ಯ	ಗದ್ಯ	ಪದ್ಯ	ಗದ್ಯ
ರನ್ನ ಕಂದ (ಕ್ರಿ.ಶ.೯೯೩)	ಶಬ್ದಮಣಿದರ್ಪಣ (ಕ್ರಿ.ಶ.೧೨೬೦)	ಅಭಿದಾನ ವಸ್ತು ಕೋಶ(೧೧೪೫)	ಅಭಿದಾನ ರತ್ನಮಾಲಾ (ಕ್ರಿ.ಶ. ೧೧೪೫)
ಕರ್ನಾಟಕ ನಿಘಂಟು (ಕ್ರಿ.ಶ.೧೪೦೦)	ಶಬ್ದ ಸಾರ (ಕ್ರಿ.ಶ.೧೪೦೦)	ನಾಚಿರಾಜೀಯ (ಕ್ರಿ.ಶ.೧೩೦೦)	ಕಾಶಕೃತ್ಸ್ನ ಧಾಪು ವಾಖ್ಯಾ (ಕ್ರಿ.ಶ.೧೫೦೦)
ಚತುರಾಸ್ಯ ನಿಘಂಟು (ಕ್ರಿ.ಶ.೧೪೫೦)	ಶಬ್ದಗಮಜ (ಕ್ರಿ.ಶ.೧೬ನೇ ಶತಮಾನ)	ಅಭಿನವಾಭಿದಾನಂ (ಕ್ರಿ.ಶ.೧೩೯೮)	ಕನ್ನಡ - ಲ್ಯಾಟಿನ್ ನಿಘಂಟು(ಕ್ರಿ.ಶ.೧೮೫೫)
ಕಬ್ಬಿಗರ ಕೈಪಿಡಿ (ಕ್ರಿ.ಶ.೧೫೩೦)		ಶಬ್ದರತ್ನಾಕರ (ಕ್ರಿ.ಶ.೧೬೦೦)	ಲ್ಯಾಟಿನ್ - ಕನ್ನಡ ನಿಘಂಟು(ಕ್ರಿಶ.೧೮೬೧)
ಕರ್ನಾಟಕ ಶಬ್ದ ಮಂಜರಿ (ಕ್ರಿ.ಶ.೧೫೬೦)		ಪದ್ಯನಾನಾರ್ಥ (ಕ್ರಿ.ಶ.೧೬೦೦)	
ಭಾರತ ನಿಘಂಟು (ಕ್ರಿ.ಶ.೧೬೦೦)		ನಾನಾರ್ಥಕಂದ (ಕ್ರಿ.ಶ.೧೬೦೦)	
ಕರ್ನಾಟಕ ಸಂಜೀವನ (ಕ್ರಿ.ಶ.೧೬೦೦)		ನಾನಾರ್ಥ ರತ್ನಾಕರ (ಕ್ರಿ.ಶ.೧೬೦೦)	
ಕವಿಕಂಠಹಾರ (ಕ್ರಿ.ಶ.೧೬೪೦)			
ಚಿನ್ನಾಮಿ ಕನ್ನಡ ನಿಘಂಟು(೧೭ನೇ ಶತ)			
ಶಬ್ದ ಸಂಗ್ರಹ (ಕ್ರಿ.ಶ.೧೮೭೪)			
ಕರ್ನಾಟಕ ಕಲ್ಪದ್ರುಮ (ಕ್ರಿ.ಶ ೧೮೮೫)			
ಕರ್ಣಾಟಕ ಭಾಷಾಕರ (ಕ್ರಿ.ಶ.೧೮೯೧)			

- ನಿರ್ಬಂಧಿತ
  - ಪಾರಿಭಾಷಿಕ ಪದಕೋಶ
    - ಚಾಮುಂಡಿಕಾ ಲಘು ನಿಘಂಟು (ಕ್ರಿ.ಶ. ೧೮೪೮)
    - ತತ್ವಾಭಿನಯ ನಿಘಂಟು (ಕ್ರಿ.ಶ.೧೮೯೫)
  - ವೃತ್ತಿಪದಕೋಶ
    - ಅಕಾರಾದಿ ವೈದ್ಯ ನಿಘಂಟು (ಕ್ರಿ.ಶ. ೧೩೦೦)
    - ಧನ್ವಂತರಿ ನಿಘಂಟು (ಕ್ರಿ.ಶ.೧೫೦೦)
    - ಇಂದ್ರ ದೀಪಿಕಾ ನಿಘಂಟು (ಕ್ರಿ.ಶ. ?)
    - ಮದನಾರಿ ವೈದ್ಯ ನಿಘಂಟು (ಕ್ರಿ.ಶ. ?)

ಅರ್ವಾಚೀನ ವೈಜ್ಞಾನಿಕ ನಿಘಂಟುಗಳು

ಸಾಮಾನ್ಯ

- ಏಕಭಾಷಿಕ
  - ಕನ್ನಡ ನಿಘಂಟು (ಕನ್ನಡ ಸಾಹಿತ್ಯ ಪರಿಷತ್ತು) (ಕ್ರಿ.ಶ. ೧೯೭೧)
    ವಿ.ಸೂ. : ಕಿಟೆಲ್ ಮಾದರಿಯ ಕನ್ನಡಿಗರ ಹೆಮ್ಮೆಯ ನಿಘಂಟು
- ದ್ವಿಭಾಷಿಕ
  - ರೆ.ಎಫ್. ಕಿಟೆಲರ ಕನ್ನಡ - ಇಂಗ್ಲೀಷ್ ನಿಘಂಟು
    ವಿ.ಸೂ :ಸರ್ವಸಂಗ್ರಾಹಕ ಮಹಾಕೋಶ.ಅತ್ಯಂತ ವೈಜ್ಞಾನಿಕವಾದುದು.ಇಂದಿಗೂ ಅದ್ವಿತೀಯ
  - ಇಂಗ್ಲೀಷ್- ಕನ್ನಡ ನಿಘಂಟು (ಮೈಸೂರು ವಿಶ್ವ ವಿದ್ಯಾಲಯ, ಕ್ರಿ.ಶ. ೧೯೬೫)
  - ಕಿಟೆಲ್ಸ್ ಕನ್ನಡ -ಇಂಗ್ಲೀಷ್ ನಿಘಂಟು (ಮರಿಯಪ್ಪ ಭಟ್ ಸಂ. ೧೯೬೮-೧೯೭೧)
- ಬಹುಭಾಷಿಕ
  - ತುಳು ನಿಘಂಟು (ಯು.ಪಿ.ಉಪಾಧ್ಯಾಯ (ಕ್ರಿ.ಶ.೧೯೮೮)
    ವಿ.ಸೂ :ತುಳು-ಇಂಗ್ಲೀಷ್ ಕನ್ನಡ ನಿಘಂಟು

ನಿರ್ಬಂಧಿತ

ಪದಪ್ರಯೋಗ ಕೋಶ	ವೃತ್ತಿ ಪದಕೋಶ	ವಿಶಿಷ್ಟ ಪದಕೋಶ
ಬಸವ ಪದಪ್ರಯೋಗ ಕೋಶ (ಗುಂಜಾಳ) (ಕ್ರಿ.ಶ.೧೯೭೩)	ಕಲಬುರ್ಗಿ ಜಿಲ್ಲೆಯ ಒಕ್ಕಲುತನ ವೃತ್ತಿ ಪದಗಳ ಅಧ್ಯಯನ (ವಿರಕ್ತಮಠ, ೧೯೮೧)*	ಕಾವ್ಯಾರ್ಥ ಪದಕೋಶ (ಜಿ.ಎಸ್. ಶಿವರುದ್ರಪ್ಪ ಮತ್ತು ಕೆ.ವಿ. ನಾರಾಯಣ) (ಕ್ರಿ.ಶ. ೧೯೮೦)
ತೋಂಟದ ಸಿದ್ಧಲಿಂಗ ಯತಿಗಳ ಪದಪ್ರಯೋಗ ಕೋಶ(ಗುಂಜಾಳ) (ಕ್ರಿ.ಶ.೧೯೮೩)	ಆ ಲಿಂಗ್ವಿಸ್ಟಿಕ್ ಅನಾ-ಲಿಸಿಸ್ ಆಫ್ ವೀವರ್ಸ್ ಅಕ್ಯುಪೇಶನಲ್ ವೊಕ್ಯಾಬುಲರಿ ಇನ್ ಕನ್ನಡ *	ವಿಮರ್ಶೆಯ ಪರಿಭಾಷೆ (ಓ.ಎಲ್.ನಾಗಭೂಷಣ ಸ್ವಾಮಿ) (ಕ್ರಿ.ಶ.೧೯೮೩)
ವರ್ಬಲ್ ಬೇಸಸ್ ಆಫ್ ಕುಮಾರ ವ್ಯಾಸ (ಕ್ರಿ.ಶ. ೧೯೮೩)	* ಅಪ್ರಕಟಿತ	ವಾಕ್ಯ ಮಾಣಿಕ್ಯ ಕೋಶ (ಜಿ.ಎಸ್.ಶಿವರುದ್ರಪ್ಪ ಮತ್ತು ಎಸ್.ವಿದ್ಯಾಶಂಕರ)
ಶ್ರೀ ಸಿದ್ಧರಾಮೇಶ್ವರ ವಚನ ಪದ ಪ್ರಯೋಗ ಕೋಶ (ಕ್ರಿ.ಶ.೧೯೮೬)		ಕನ್ನಡ ವಿರುದ್ಧಾರ್ಥ ಪದ ಕೋಶ (ಹನಸೋಗೆ ಮಹಾದೇವಯ್ಯ ೧೯೮೭)
ಗೋವಿಂದ ಪೈ ಪದಪ್ರಯೋಗ ಕೋಶ (ಕ್ರಿ.ಶ. ೧೯೮೬)		
ಮುದ್ದಣ ಪದಪ್ರಯೋಗ ಕೋಶ (ಕ್ರಿ.ಶ. ?)		

ಅರ್ವಾಚೀನ ಸಾಂಪ್ರದಾಯಿಕ ಕನ್ನಡ ನಿಘಂಟುಗಳು

ಸಾಮಾನ್ಯ

ಏಕಭಾಷಿಕ	ದ್ವಿಭಾಷಿಕ	ಬಹುಭಾಷಿಕ	ಉಪಭಾಷಿಕ
ಶಬ್ದಮಂಜರಿ (ಕ್ರಿ.ಶ.೧೮೯೦)	ವೆಬ್‌ಸ್ಟರ ಕೋಶ (ಕ್ರಿ.ಶ.೧೮೨೪)	ಆಶುಭಾಷಾ ವಕ್ಯಾಬುಲರಿ (೧೮೯೩)(ಸೂಲಿಬರ್ ಶ್ಯಾಮರಾವ್)	ಹವ್ಯಕ -ಇಂಗ್ಲೀಷ್ ನಿಘಂಟು (ಮರಿಯಪ್ಪ ಭಟ್, (ಕ್ರಿ.ಶ.೧೯೮೩)
ಕರ್ನಾಟಕ ಭಾಷಾಕರ (ಕ್ರಿ.ಶ.೧೮೯೧)	ಕನ್ನಡ-ಇಂಗ್ಲೀಷ್ ನಿಘಂಟು(ರೀವ್) (ಕ್ರಿ.ಶ.೧೮೩೨)	ಆಧುನಿಕ ಹಿಂದಿ-ಕನ್ನಡ ಇಂಗ್ಲೀಷ್ ಶಬ್ದಕೋಶ '(ಎಲ್.ಎಸ್.ಬಿಟಗುಟ್ಟಿ)	ಜನಪದ ನಿಘಂಟು (ಕ್ಯಾತನಹಳ್ಳಿ) (ಕ್ರಿ.ಶ.೧೯೮೭)
ಕರ್ಣಾಟ ಭಾಷಾ ರತ್ನಾಕರಂ (ಕ್ರಿ.ಶ.೧೯೨೩)	ಡ್ಯಾನಿಯಲ್ ಸ್ಯಾಂಡರ್ಸನ್ ಕನ್ನಡ-ಇಂಗ್ಲೀಷ್ ನಿಘಂಟು (ಕ್ರಿ.ಶ.೧೮೫೮)		ಹವ್ಯಕ ಶಬ್ದಮಂಜರಿ (ಟಿ.ಕೇಶವಭಟ್ಟ)
ಪಂಡಿತ ಪ್ರಭಣ್ಣರ ನಿಘಂಟು (ಕ್ರಿ.ಶ.೧೯೨೯)	ಇಂಗ್ಲೀಷ್-ಕನ್ನಡ ಸ್ಕೂಲ್ ಡಿಕ್ಶನರಿ (ಸೀಗ್ಲರ್)(೧೮೭೬)		
ಸಿರಿಗನ್ನಡ ಅರ್ಥ ಕೋಶ (ಕ್ರಿ.ಶ. ೧೯೪೦)	ಬ್ಯುಶರ್ ಕನ್ನಡ - ಇಂಗ್ಲೀಷ್ ಸಂಕ್ಷಿಪ್ತ ನಿಘಂಟು (ಕ್ರಿ.ಶ.೧೮೯೯)		
ಕನ್ನಡ ನಿಘಂಟು (ಕ್ರಿ.ಶ.೧೯೫೧)	ಲಘುಕೋಶ ಇಂಗ್ಲೀಷ್- ಕನ್ನಡ (ಕ್ರಿ.ಶ.೧೯೧೦)		
ಕನ್ನಡ-ಕನ್ನಡ ಶಬ್ದಕೋಶ (೧೯೫೨)	ಇಂಗ್ಲೀಷ್-ಕನ್ನಡ ನಿಘಂಟು (ಕ್ರಿ.ಶ.೧೯೨೧)		
ಸಚಿತ್ರ ಕನ್ನಡ-ಕನ್ನಡ ಕಸ್ತೂರಿ ಕೋಶ (೧೯೫೭) ಸಚಿತ್ರ ಕೋಶವಾಗಿದೆ	ಸ್ಟ್ಯಾಂಡರ್ಡ್ ಇಂಗ್ಲೀಷ್- ಇಂಗ್ಲೀಷ್-ಕನ್ನಡ ಭರದ್ವಾಜ (ಕ್ರಿ.ಶ.೧೯೪೨)		
ಕನ್ನಡ -ಕನ್ನಡ (೧೯೫೨)	ಹಿಂದಿ-ಕನ್ನಡ (೧೯೪೫)		
ಕನ್ನಡ -ಕನ್ನಡ (೧೯೫೬)	ಹಿಂದಿ -ಕನ್ನಡ (೧೯೪೮)		
ಕಾವ್ಯಪದಮಂಜರಿ	ಹಿಂದಿ-ಕನ್ನಡ (೧೯೫೦)		
ಕನ್ನಡ ಸಮಾನಾರ್ಥಕೋಶ (ಹನಸೋಗೆ ಮಹಾ ದೇವಯ್ಯ(ಕ್ರಿ.ಶ.೧೯೭೪)	ಹಿಂದಿ-ಕನ್ನಡ (೧೯೫೬)		
ಸಂಕ್ಷಿಪ್ತ ಕನ್ನಡ ನಿಘಂಟು (ಕ್ರಿ.ಶ.೧೯೭೫)	ಸಚಿತ್ರ ಕನ್ನಡ-ಹಿಂದಿ ಆದರ್ಶ ಕೋಶ (ಕ್ರಿ.ಶ.೧೯೫೭)		
ಕನ್ನಡ ರತ್ನಕೋಶ(೧೯೭೭)	ಕನ್ನಡ -ಹಿಂದಿ (೧೯೫೭)		
	ಇಂಗ್ಲೀಷ್-ಇಂಗ್ಲೀಷ್ -ಕನ್ನಡ ಡಿಕ್ಶನರಿ(ಕ್ರಿ.ಶ.೧೯೬೨)		
	ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು (ಕ್ರಿ.ಶ.೧೯೬೫)		
	ಸಚಿತ್ರ ಶಾಲಾ ನಿಘಂಟು		
	ಸಂಸ್ಕೃತ-ಕನ್ನಡ ಶಬ್ದಕೋಶ (ಕ್ರಿ.ಶ.೧೯೬೫), (ಕ್ರಿ.ಶ.೧೯೬೭)		
	ಕನ್ನಡ -ರಷ್ಯನ್ ನಿಘಂಟು (ಕ್ರಿ.ಶ.೧೯೭೫)		
	ಕೊಡವ-ಕನ್ನಡ ನಿಘಂಟು (ಕ್ರಿ.ಶ. ೧೯೮೩)		

ನಿರ್ಬಂಧಿತ

- **ಬೃಹತ್ಕೋಶ (ಪ್ರೆಸೌಸುರಸ್)**
  - ಕಿಸಂವಾದ್ ಗ್ಲಾಸರಿ (ಉಳ್ಳಾಳ ನರಸಿಂಗ ರಾವ್)(ಕ್ರಿ.ಶ.೧೮೯೧)
  - ಪುರಾಣನಾಮ ಚೂಡಾಮಣಿ (ಕ್ರಿ.ಶ.೧೯೪೧)
  - ಪುರಾಣ ಭಾರತ ಕೋಶ (ಕ್ರಿ.ಶ.೧೯೭೫)
  - ಕುಮಾರವ್ಯಾಸ ನಿಘಂಟು (ಕ್ರಿ.ಶ.೧೯೭೧)
- **ಪಾರಿಭಾಷಿಕ**
  - ಶಿವಾನುಭವ ಶಬ್ದಕೋಶ (ಕ್ರಿ.ಶ.?)
  - ಆಡಳಿತ ಶಬ್ದಕೋಶ (ಕ್ರಿ.ಶ. ೧೯೬೭)
  - ಮನೋವಿಜ್ಞಾನ ಕೋಶ (ಕ್ರಿ.ಶ.೧೯೬೯)
  - ಸಸ್ಯಗಳ ನಿಘಂಟು (ಕ್ರಿ.ಶ.೧೯೭೩)
  - ಕಾನೂನು ಪದಕೋಶ (ಕ್ರಿ.ಶ. ?)
  - ಬಾಷಾವಿಜ್ಞಾನ ಪದಕೋಶ (ಕೆಂಪೇಗೌಡ)(೧೯೭೬)
  - ಭೂಗೋಳ ವಿಜ್ಞಾನಕೋಶ (ಕ್ರಿ.ಶ. ೧೯೭೮)
- **ಗಾದೆ ಇ. ಪದಕೋಶ**
  - ಸಾಮತಿ ಸಂಗ್ರಹ (ಕ್ರಿ.ಶ.೧೯೦೬)
  - ಕರ್ನಾಟಕ ಲೋಕೋಕ್ತಿ ನಿಧಿ (ಕ್ರಿ.ಶ.೧೯೧೨)
  - ಕನ್ನಡ ಗಾದೆಗಳು (ಕ್ರಿ.ಶ.೧೯೫೫)
  - ನಲ್ನುಡಿ-ನನ್ನುಡಿ (ಕ್ರಿ.ಶ.೧೯೬೨)
  - ಗಾದೆಗಳು - ಗೀತೆಗಳು ಗೀತೆಗಳು (ಕ್ರಿ.ಶ.೧೯೬೦)
  - ಕನ್ನಡ ಗಾದೆಗಳ ಕೋಶ (ಕ್ರಿ.ಶ.೧೯೬೩)
  - ಕನ್ನಡ ಗಾದೆಗಳ ಮಹಾ ಕೋಶ (ಕ್ರಿ.ಶ.೧೯೮೨)
  - ಕಿಟಲ್ ಕೋಶದ ಗಾದೆಗಳು (ರಾಗೌ)
- **ಅನರ್ಥ ವ್ಯುತ್ಪತ್ತಿ ಪರ್ಯಪದಕೋಶ**
  - ಅನರ್ಥಕೋಶ ನಾ.ಕಸ್ತೂರಿ (ಕ್ರಿ.ಶ.೧೯೬೪)
  - ಪದಾರ್ಥ ಚಿಂತಾಮಣಿ (ಪಾವೆಂ) (ವ್ಯುತ್ಪತ್ತಿ ಪದಕೋಶ
  - ಮಹಾ ಕವಿ ಹರಿಹರನ ಕೃತಿಗಳ ಪದಕೋಶ ಮಲಶೆಟ್ಟಿ (ಕ್ರಿ.ಶ. ೧೯೯೧)

(ಅ) ಸಮಾನಾರ್ಥಕಗಳು : ದ್ವಿಭಾಷಾ ನಿಘಂಟಿನಲ್ಲಿ ಆಕರ ಭಾಷೆಯ ಶಬ್ದಕ್ಕೆ ಉದ್ದಿಷ್ಟ ಭಾಷೆಯಲ್ಲಿ ಶ್ರೀ ಸಾಮಾನ್ಯನಿಗೆ ನೇರವಾಗಿ ಅರ್ಥವಾಗುವ ಸಮಾನಾರ್ಥಕವನ್ನು ಕೊಡಬೇಕು ! ನೀರು water ಒಂದೇ ಶಬ್ದಕ್ಕೆ ವಿಭಿನ್ನ ಅರ್ಥಗಳಿರುವಾಗ, ಅವುಗಳನ್ನು ಸೋದಾಹರಣವಾಗಿ ಸ್ಪಷ್ಟೀಕರಿಸಬೇಕು :

ನೀಗು : (೧) `to be got rid of' - ಸಂಕಟಗಳನ್ನು ನೀಗುವುದು (B.3.70)

(೨) `to leave' - ಅಸುನೀಗಿಸು ಅಸುರನ ತನುವ (Bh 1.10.38)

ಒಂದು ಶಬ್ದಕ್ಕೆ ಹಲವು ಸಮಾನಾರ್ಥಕಗಳು ಇದ್ದಲ್ಲಿ ಹೆಚ್ಚು ಪ್ರಸಾರವುಳ್ಳವುಗಳನ್ನು ಮೊದಲು ಕೊಟ್ಟು, ಆ ಬಳಿಕ ಉಳಿದವುಗಳನ್ನು ಅನುಕ್ರಮವಾಗಿ ಸೂಚಿಸಬೇಕು:

ಕಾಯ್ : `A fruit in a yet unripe, hard, but pretty full- grown state; any nut; any head or capsule of plants; a pod; a piece used at the pagade play.

ಸಮಾನಾರ್ಥಕಗಳು ಕೊಡುವುದು ಕಷ್ಟವಾದಲ್ಲಿ, ಅರ್ಥ ವಿವರಗಳನ್ನು ಕೊಡಬೇಕು.

ಕುಂಕುಮ : `A kind of fragrant cosmetic, crimsoned saffron - powder applied by women to their foreheads as a sign of their husband being alive'.

(ಅ) ವಿವರಗಳು : ಆಯ್ಕೆ ಮಾಡಿದ ಶಬ್ದ ಸಾಮಾನ್ಯ ಪದವೆ? ಯಾವ ಭಾಷೆಯಿಂದ? ಯಾವ ಪ್ರದೇಶದಿಂದ? ಅದು ನಾಮಪದವೇ? ಕ್ರಿಯಾಪದವೇ? ತತ್ಸಮವೇ? ಪದ್ಯವೇ? ಸಕರ್ಮಕವೇ? ಅಕರ್ಮಕವೇ? - ಎಂಬಿತ್ಯಾದಿಗಳೇ ಈ ವಿವರಗಳು.

ವಿವರಗಳನ್ನು ಹೆಚ್ಚಾಗಿ ಸಂಕ್ಷೇಪಗಳ ಮೂಲಕ ಆಯ್ದ ಶಬ್ದದ ಪಕ್ಕದಲ್ಲಿಯೇ ಸೂಚಿಸುವುದು ಪರಿಪಾಠ.

(ಇ) ಪ್ರಯೋಗಗಳು : ಶಬ್ದಗಳನ್ನು ಬಳಸುವ ಸಂದರ್ಭ ಹಾಗೂ ಅರ್ಥ ಮನದಟ್ಟಾಗಲು ಪ್ರಯೋಗಗಳನ್ನು ಕೊಡಬೇಕಾಗುತ್ತದೆ.

ನಿಶ್ಚಿಂತೆ : `Freedom from anxiety or solicitude' ನಿತ್ಯ ದರಿದ್ರನಿಗೆ ನಿಶ್ಚಿಂತೆ(Prov.)

೪. ಅಕಾರಾದಿ ಸಂಯೋಜನೆ :

ದ್ವಿಭಾಷಿಕ ಶಬ್ದಕೋಶ ರಚನೆಯಲ್ಲಿ ಆಕರ ಭಾಷೆಯಿಂದ ಆಯ್ದ ಪದಗಳ ರೂಪ ಹಾಗೂ ಉದ್ದಿಷ್ಟ ಭಾಷೆಯಲ್ಲಿ ಸಮಾನಾರ್ಥಕಗಳನ್ನು ಕೊಟ್ಟ ಬಳಿಕ ಆ ನಿಘಂಟಿಮಗಳನ್ನು ಅಕಾರಾದಿಯಲ್ಲಿ ಸಂಯೋಜಿಸಿದಾಗ ಮಾತ್ರ ದ್ವಿಭಾಷಿಕ ಶಬ್ದಕೋಶ ನಿರ್ಮಾಣಗೊಳ್ಳುತ್ತದೆ.

ಭಾಗ : ೪.೦ ಸಮಾರೋಪ

ನಿಘಂಟು ರಚನೆ ಭಾರತದಲ್ಲಿ ಕ್ರಿ.ಪೂ. ನಾಲ್ಕನೆಯ ಶತಮಾನಕ್ಕಿಂತ ಹಿಂದಿನಿಂದಲೂ, ಕರ್ನಾಟಕದಲ್ಲಿ ಕ್ರಿ.ಶ. ಸು. ೧೦ನೆಯ ಶತಮಾನದಿಂದಲೂ ಪ್ರಾಚೀನವಾದುದು. ಆದರೆ ಇವು ಹೆಚ್ಚಾಗಿ ಛಂದೋಬದ್ಧವಾದವುಗಳಾಗಿದ್ದು ನಿಗಮನ ಪದ್ಧತಿಯನ್ನು ಅವಲಂಬಿಸಿವೆ. ಅವುಗಳಲ್ಲಿ ಶಬ್ದಗಳ ಚಾರಿತ್ರಿಕ ಮಾಹಿತಿಯಾಗಲಿ, ಜ್ಞಾತಿ ಶಬ್ದಗಳಾಗಲೀ, ಅರ್ಥ ವೈವಿಧ್ಯತೆಯಾಗಲಿ ಲಭಿಸುವುದಿಲ್ಲ; ಜನಪದ ಭಾಷೆಗಳ ಪದಗಳಾಗಲಿ, ದೈನಂದಿನ ವ್ಯಾವಹಾರಿಕ ಪದಗಳಾಗಲಿ ಸಿಗುವುದಿಲ್ಲ. ಅವು ಹೆಚ್ಚಾಗಿ ಶಿಷ್ಟ ಸಾಹಿತ್ಯಕ್ಕೆ ಸೀಮಿತವಾದವುಗಳಾಗಿವೆ. ಅಷ್ಟೇ ಅಲ್ಲದೆ ನಿಘಂಟು ರಚನೆಗೆ ಹಿನ್ನೆಲೆಯಾಗಿರುವ ನಿಘಂಟು ವಿಜ್ಞಾನದ ಬಗೆಗೂ ಪ್ರಾಚೀನರಲ್ಲಿ ಹೆಚ್ಚಿನ ಮಾಹಿತಿ ಲಭ್ಯವಿಲ್ಲ.

ಒಟ್ಟಿನಲ್ಲಿ, ಸಂಸ್ಕೃತ ಮಾದರಿಯಲ್ಲಿ ಅಂದು ಕನ್ನಡದಲ್ಲಿ ಹುಟ್ಟಿಬಂದ ನಿಘಂಟು ರಚನೆ, ಇಂದು ಕಿಟಲ್ ನ ತರುವಾಯ ವೈಜ್ಞಾನಿಕ ಹಾದಿಯನ್ನು ತುಳಿದು ಮುಂದಕ್ಕೆ ಸಾಗುವುದು ಕನ್ನಡದ ಬೆಳವಣಿಗೆಯ ಲಕ್ಷಣ. ಈ ಹಾದಿಯಲ್ಲಿ ನಡೆಯಬೇಕಾದುದು ಇನ್ನೂ ಸಾಕಷ್ಟಿದೆ. ಈ ವೈಜ್ಞಾನಿಕ ಪಥದಲ್ಲಿಯೇ ಮುಂದಿನ ಕನ್ನಡ ನಿಘಂಟುಕಾರರು ಮುಂದೆ ಸಾಗಬೇಕೆಂಬುದೇ ನಮ್ಮ ಅಭಿಲಾಷೆ.

ಭಾಗ :೫.೦ ಪರಾಮರ್ಶನ ಸಾಹಿತ್ಯ ಸೂಚಿ

೧. ಕೌಜಗೇರಿ, ಎಸ್.ಎಸ್. ೧೯೯೧-೯೨
ಎರಡನೆಯ ಮಂಗರಾಜನ "ಅಭಿನವಾಭಿದಾನಂ" ಒಂದು ಅಧ್ಯಯನ (ಎಂ.ಫಿಲ್. ಪ್ರಬಂಧ - ಅಪ್ರಕಟಿತ), ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ

೨. ಬಸವಾರಾಧ್ಯ. ಎನ್. ೧೯೭೦, "ಕನ್ನಡದಲ್ಲಿ ನಿಘಂಟುಶಾಸ್ತ್ರ" ಎಂ.ವಿ.

ಸೀತಾರಾಮಯ್ಯ (ಸಂ.) ಚಿನ್ನದ ಬೆಳಸು, ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

೩. ಮಹೀದಾಸ, ಬೆಂ.ವಿ. ೧೯೯೫, "ಕನ್ನಡದಲ್ಲಿ ನಿಘಂಟುಗಳು", ಶ್ರೀ ಕೃಷ್ಣಭಟ್ ಅರ್ತಿಕಜೆ (ಸಂ.), ಸಾರ್ಥಕ, ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ.

೪. ಮಾಡ್ತ, ವಿಲ್ಯಂ. ೧೯೮೯. "ನಿಘಂಟು ವಿಜ್ಞಾನ", ಸಾಧನೆ (೧೮-೧-೨), ಬೆಂಗಳೂರು : ಬೆಂಗಳೂರು ವಿಶ್ವವಿದ್ಯಾಲಯ.

೫. ಮಾಡ್ತ, ವಿಲ್ಯಂ. ೧೯೮೯ "ನಿಘಂಟು ರಚನೆ", ಸಾಧನೆ (೧೮.೩-೪), ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.

೬. ಮಾಡ್ತವಿಲ್ಯಂ ಮತ್ತು ಆರ್ . ವಾಯ್. ಕುಲಕರ್ಣಿ. ೧೯೯೪ ನಿಘಂಟುರಚನಾ ವಿಜ್ಞಾನ, ಹಂಪಿ : ಕನ್ನಡ ವಿಶ್ವವಿದ್ಯಾಲಯ.

೭. ಮಾಡ್ತ, ವಿಲ್ಯಂ. ೧೯೯೫ "ಏಕಭಾಷಿಕ ನಿಘಂಟುರಚನೆ", ಶ್ರೀ ಕೃಷ್ಣಭಟ್ ಅರ್ತಿಕಜೆ (ಸಂ.), ಸಾರ್ಥಕ:ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ, ಮದರಾಸು: ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಸಮಿತಿ.

೮. ಮಾಡ್ತ, ವಿಲ್ಯಂ; ೧೯೯೫. "ವೃತ್ತಿಪದಕೋಶ : ಸ್ವರೂಪ ಮತ್ತು ರಚನೆ", ಟಿ.ವಿ. ವೆಂಕಟಾಚಲ ಶಾಸ್ತ್ರಿ ಮತ್ತಿತರರು (ಸಂ.) ಅಭಿಜ್ಞಾನ: ಡಾ.ಕೆ. ಕೃಷ್ಣಮೂರ್ತಿ ಅಭಿನಂದನ ಗ್ರಂಥ, ಮೈಸೂರು : ಡಿ.ವಿ.ಕೆ. ಮೂರ್ತಿ.

೯. ವೆಂಕಟಸುಬ್ಬಯ್ಯ, ಜಿ. ೧೯೯೩. ಕನ್ನಡ ನಿಘಂಟು ಶಾಸ್ತ್ರ ಪರಿಚಯ. ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

೧೦. ಹಾವನೂರ, ಶ್ರೀನಿವಾಸ. ೧೯೭೪. ಹೊಸಗನ್ನಡ ಅರುಣೋದಯ, ಮೈಸೂರು: ಮೈಸೂರು ವಿಶ್ವವಿದ್ಯಾಲಯ.

11. KITTEL, (Re.) F. 1894. A Kannada - English Dictionary, Mangalore: Basel Mission Book and Tract Depository.

12. MISRA, B.G. (ed.) 1980. Lexicography in India, Mysore: Central Institute of Indian Languages.

13. SINGH, R.A. 1982. An Introduction to Lexicography,

Mysore: CIIL.

14. ZGUSTA, Ladislav. 1971. Manual of Lexicography. The Hague Paris : Mouton.

-X-

ಆಗು ಆಗು

--ಡಾ. ವಿಜಯಕುಮಾರ ಮಹಾನುಭಾವಿಗಳು

ಕಳೆದು ಹೋದವು
ಹಲವು ಜನುಮ
        ಇನ್ನಾದರೂ ಆಗು
        ನೀ ಮುಕ್ತಿ ಪುರುಷ
ಆಗು ಆಗು ನೀನಾಗು
ಆಗು ಮುಕ್ತಿ ಪುರುಷ
        ಭಕ್ತಿ ತುಂಬಿ ವಿರಕ್ತಿ ತುಂಬಿ
        ಆಗು ನೀ ಮುಕ್ತಿ ಪುರುಷ
ಆನಂದ ಅಬ್ಧಿಯಲಿ
ನಾವೆಯಾಗಿ ನೀ ಚಲಿಸು
        ಹಗಲು ಇರುಳಿನ ಕೂಟ
        ಕಡೆಗಣಿಸಿ ವಿಹರಿಸು
ಮನವೇ ಕಡಗೋಲು
ಹೃದಯ ಕ್ಷೀರಕುಂಭ
        ಅನುಭಾವ ಮಂಥನದಿ
        ಸದ್ ಭಕ್ತಿ ಒಡಲ ತುಂಬ
ಕೆನೆ ಮೊಸರ ಒಡಲಿಂದ
ನವನೀತ ಬಂದಂತೆ
        ಮನ ಹೃದಯ ಮಂದಿರದಿ
        ಬಯಲ ಮಾನಸದೇವ

--

ವಚನಗಳು

- ಡಾ. ವಿಜಯಕುಮಾರ ಮಹಾನುಭಾವಿಗಳು

ಉರಿವ ಜ್ಯೋತಿಯ ಕಿರಣ ನೀನಾಗು ಎಲೆ ಮನವೆ
ಶಿಖರದೆತ್ತರ ಜ್ಞಾನ ನೀನೇರು ಎಲೆ ಮನವೆ
ಅನುಭಾವದಾಳದಲಿ ಭಕ್ತಿಗಲಗೆಯು ಹೊಮ್ಮಿ
ವಿರಕ್ತಿ ಮಡಿಯುಟ್ಟು ವೈರಾಗ್ಯ ಗಿರಿಯಾಗು
ಬಯಲ ಮಾನಸದೇವನಲಿ ಪದತಲದಿ ಹೂವಾಗು

--

ಇದು ಭಾಗ್ಯ ಇದು ಭಾಗ್ಯ ಶಿವನೊಲುಮೆ ಅದು ಭಾಗ್ಯ
ಚಿಲಾಲ್ಯಾಳನ ಕೊಡು ಎನ್ನೆ ಅದು ಭಾಗ್ಯ ಸಿರಿಯಾಳನೆ
ತನುವರ್ಧಕೊಡು ಎನ್ನೆ ಭಾಗ್ಯವೆನಿತೋ ಸಿಂಧು ಬಲ್ಲಾಳನ
ವಸ್ತ್ರವನು ಬೇಡಲಿದು ಹಿರಿಯ ಎನಿತೋ ದಾಸಯ್ಯನ
ಕಿವಿಯೋಲೆ ಕರಪಿಡಿಯೆ ಸಂಗಯ್ಯನೊಲುಮೆ
ಆಕಳನು ಕದ್ದೊಯ್ಯೇ ಬಸವ ನಿನ್ನದು ಹಿರಿಮೆ
ಮಡದಿಯ ಬಲು ಪ್ರೀತಿ ಪ್ರಭುದೇವರ ಬಲ್ಮೆ
ಅಲ್ಲಿ ಉಂಬುವ ದೇವ ಇಲ್ಲಿ ಉಂಬುವ ದೇವ
ಬಯಲು ಮಾನಸದೇವ

--

ಹೂವು ಅರಳುವ ತೆರದಿ ಮನವು ಅರಳಲಿ
ಹಣ್ಣು ತುಂಬಿದ ತೆರದಿ ನಮ್ಮ ಬಾಳಿರಲಿ
ಹೊಳೆ ತುಂಬಿ ಬಂದಂತೆ ಬಾಳು ತುಂಬಿರಲಿ
ಸುಗ್ಗಿ ಬೆಳೆ ಬಂದಂತೆ ಅನುಭಾವವಿರಲಿ
ಅರುಣೋದಯ ತೆರದಿ ಶಿವನೊಲುಮೆ ಬರಲಿ
ಆತ್ಮಾನಂದ ನಿತ್ಯವೆಮಗಿರಲಿ ಬಯಲ ಮಾನಸದೇವ

ಅರಳು ಅರಳಿಲಿ ಮನವೆ ಅರಳು ಪರಿಮಳ ಚೆಲ್ಲು
ಅರಳರಳಿ ಅನುಭಾವ ವಚನ ಪರಿಮಳ ಬೀರು
ರವಿ ಬೆಳಕ ಎರಚಿ ಭುವಿಯ ಬೆಳಗಿದೊಲು
ಅರಿವಿನಾ ಬೆಳಕಿಂದ ಅಂತರಂಗವ ಬೆಳಗು
ಗಂಧ ಚಂದನವಾಗು ಒಡಲು ಕರ್ಪೂರವಾಗು
ಬಯಲ ಮಾನಸದೇವಗೆ.

*

ಹಂಪಿಯ ಚಂದ್ರಮೌಳೀಶ್ವರ ದೇವಾಲಯದ ಮೇಲೆ ಹೊಸಬೆಳಕು

–ಡಾ. ಎಸ್.ಎನ್. ಶಿವರುದ್ರಸ್ವಾಮಿ

ಹಂಪಿಯ ಬಹಳಷ್ಟು ದೇವಾಲಯಗಳನ್ನು ಗುರುತಿಸುವುದು ಬಹು ಕಷ್ಟ, ಏಕೆಂದರೆ ಅವುಗಳ ಪೂಜಾಮೂರ್ತಿಗಳನ್ನು ಆಕ್ರಮಣಕಾರರು ಅಥವಾ ಕಳ್ಳಕಾಕರು ಹಾಳು ಮಾಡಿರುವುದು. ಕೆಲವೊಮ್ಮೆ ಶಾಸನಾಧಾರಗಳು ಇದ್ದರೂ, ಅವು ಮಣ್ಣಿನ ಅಡಿಯಲ್ಲಿ ಮುಚ್ಚಿಹೋಗಿರುವ ಸಾಧ್ಯತೆಯೇ ಹೆಚ್ಚು. ವಿಜಯನಗರ ಸಾಮ್ರಾಜ್ಯದ ಉದ್ದಗಲಕ್ಕೂ ದೊರೆಯುವ ಅಸಂಖ್ಯಾತ ಶಾಸನಗಳು ಹಂಪಿ ದೇವಾಲಯಗಳ ಬಗ್ಗೆ ಸಾಂದರ್ಭಿಕವಾಗಿ ವಿವರಣೆಗಳನ್ನು ಕೊಡುತ್ತವೆ. ವಿಜಯನಗರದ ಅರಸರು ಹಂಪಿಯ ಪ್ರಮುಖ ದೇವಾಲಯಗಳಲ್ಲಿ ಅವುಗಳ ಪೂಜಾಮೂರ್ತಿಗಳ ಸಮ್ಮುಖದಲ್ಲಿ ಜನರಿಗೆ ದಾನ ದತ್ತಿಗಳನ್ನು ನೀಡಿದ್ದುಂಟು. ಇದನ್ನು ದಾಖಲಿಸುವುದಕ್ಕಾಗಿ ಶಾಸನಗಳನ್ನು ಹೊರಡಿಸಿದರು. ಅಂತಹ ಶಾಸನಗಳ ನೆರವಿನಿಂದ ಹಂಪಿಯ ಕೆಲವು ದೇವಾಲಯಗಳನ್ನು ಯಶಸ್ವಿಯಾಗಿ ಪತ್ತೆ ಹಚ್ಚುವ ಪ್ರಯತ್ನಗಳು ನಡೆದವು.[೧] ಹಂಪಿಯ ಅಚ್ಯುತದೇಗುಲ ವೆಂದು ಜನಪ್ರಿಯವಾಗಿರುವ ತಿರುವೆಂಗಳನಾಥ ದೇವಾಲಯದ ತೇರುಬೀದಿಯ ಉತ್ತರದ ತುದಿಯಲ್ಲಿ, ತುಂಗಭದ್ರ ನದಿಯ ದಕ್ಷಿಣ ದಂಡೆಯ ಮೇಲೆ ಒಂದು ಶಿವಾಲಯವಿದೆ. ಇದನ್ನು ಉನ್ನತವಾದ, ಆದರೆ ಹಾಳಾದ ಪ್ರಾಕಾರ ಮತ್ತು ದೊಡ್ಡದಾದ ದ್ವಾರಮಂಟಪ ಸುತ್ತುವರೆದಿದೆ. ಇದರ ಗೋಪುರವು ಕಣ್ಮರೆಯಾಗಿದೆ. ಈ ದೇವಾಲಯವನ್ನು ಅನೇಕ ವಿದ್ವಾಂಸರು ತಪ್ಪು ತಪ್ಪಾಗಿ ವಿವಿಧ ಹೆಸರುಗಳಿಂದ ಕರೆದರು. ಇದನ್ನು ಲಾಂಗ್ ಹರ್ಸ್ಟ್[೨] ವರಾಹ ದೇವಾಲಯವೆಂದು ಕರೆದ. ಡಿ. ದೇವಕುಂಜರಿ[೩] ಇದನ್ನು ಶಿವಾಲಯವೆಂದು ಗುರ್ತಿಸಿದರೂ ವರಾಹ ಪೆರುಮಾಳ್ ದೇವಾಲಯವೆಂದು ಆಕೆ ಏಕೆ ಕರೆದರೊ ತಿಳಿಯದು. ಇದನ್ನು ನಿಖರವಾಗಿ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಹಂಪೆಯ ವಿರೂಪಾಕ್ಷಮೂರ್ತಿ ವಿಜಯನಗರ ಸಾಮ್ರಾಜ್ಯದ ಕುಲದೇವತೆ.

---

* ೧೯೯೪ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಇತಿಹಾಸ ಕಾಂಗ್ರೆಸ್ ನ ಏಳನೇ ಮಹಾಧಿವೇಶನದಲ್ಲಿ ಸಾದರ ಪಡಿಸಿದ ಪ್ರಬಂಧ

ಆದ್ದರಿಂದ ವಿಜಯನಗರದ ಅರಸರು ವಿರೂಪಾಕ್ಷ ದೇವಾಲಯದಲ್ಲಿ ದಾನದತ್ತಿಗಳನ್ನು ನೀಡುವುದು ಅವರ ಪಾಲಿಗೆ ಪವಿತ್ರವಾದ ಕರ್ತವ್ಯವಾಗಿತ್ತು [೪]. ಹಂಪೆಯ ವಿರೂಪಾಕ್ಷ ದೇವಾಲಯವು ಸಾಮ್ರಾಜ್ಯದ ಕಾಲದ ಉದ್ದಕ್ಕೂ ಬಹು ಪ್ರಾಮುಖ್ಯವನ್ನು ಪಡೆದಿತ್ತು. ಹದಿನಾರನೆಯ ಶತಮಾನದಲ್ಲಿ ವಿಠ್ಠಲದೇವಾಲಯ,[೫] ಕೆಲಮಟ್ಟಿಗೆ ಮಾಲ್ಯವಂತ ರಘುನಾಥ [೬] ಮತ್ತು ಕೃಷ್ಣದೇವಾಲಯಗಳು[೭] ಅಂತಹ ಪ್ರಾಮುಖ್ಯವನ್ನು ಪಡೆದಿದ್ದವು. ಹದಿನೈದನೆಯ ಶತಮಾನದಲ್ಲಿ ಹಿರಿಮೆಯನ್ನು ಗಳಿಸಿದ್ದ, ಆದರೆ ಮರವೆಯಾಗಿದ್ದ ಮತ್ತೊಂದು ದೇವಾಲಯುವನ್ನು ಹಂಪಿಯಲ್ಲಿ ಕಾಣಬಹುದು. ಆ ಶತಮಾನದ ಉದ್ದಕ್ಕೂ ಅದು ಅಂತಹ ಪ್ರಾಮುಖ್ಯವನ್ನು ಉಳಿಸಿಕೊಂಡಿತ್ತು. ಅದೇ ಹಂಪಿಯ ತಿರುವೆಂಗಳನಾಥ (ಅಚ್ಯುತರಾಯ) ದೇವಾಲಯದ ತೇರುಬೀದಿಯುತ್ತರದ ಕುಡಿಯಲ್ಲಿ, ತುಂಗಭದ್ರಾ ನದಿಯ ದಕ್ಷಿಣದಂಡೆಯಲ್ಲಿರುವ ಚಂದ್ರಮೌಳೀಶ್ವರ ದೇವಾಲಯ. ಈ ದೇಗುಲದ ಬಗ್ಗೆ ಮೊದಲ ಉಲ್ಲೇಖದೊರೆಯುವುದು ತುಮಕೂರು ಜಿಲ್ಲೆಯ ಸಿಟಿಯಲ್ಲಿ ದೊರೆತಿರುವ ಕ್ರಿ.ಶ. ೧೪೦೩ ರ ತಾಮ್ರಶಾಸನದಲ್ಲಿ[೮]. ಎರಡನೇ ಹರಿಹರನು ಬ್ರಾಹ್ಮಣರಿಗೆ ಭಾಸ್ಕರ ಕ್ಷೇತ್ರದ ಚಂದ್ರಮೌಳೀಶ್ವರ ದೇವರ ಸಮ್ಮುಖದಲ್ಲಿ ಸಿಬಿಯನ್ನು ದಾನವಾಗಿ ನೀಡಿದನು. ಇಮ್ಮಡಿ ದೇವರಾಯನ ಕಾಲದ ಬೆಂಗಳೂರು ಜಿಲ್ಲೆಯ ಜೋಡಿಸಾದ ಹಳ್ಳಿಯಲ್ಲಿ ದೊರೆತ ಮತ್ತೊಂದು ತಾಮ್ರಶಾಸನದಲ್ಲಿ[೯] ಈ ದೇಗುಲದ ಸ್ಥಳವನ್ನು ತಿಳಿಸಲಾಗಿದೆ. ಈ ದೊರೆಯು ತುಂಗಭದ್ರಾ ನದಿಯ ದಡದಲ್ಲಿರುವ ಭಾಸ್ಕರ ಕ್ಷೇತ್ರದಲ್ಲಿನ ಚಂದ್ರ ಮೌಳೀಶ್ವರ ದೇವರ ಸನ್ನಿಧಿಯಲ್ಲಿ ಹಳ್ಳಿಯೊಂದನ್ನು ದಾನವಾಗಿ ನೀಡಿದನೆಂದು ಹೇಳಲಾಗಿದೆ. ಹೊಸಕೋಟೆಯಲ್ಲಿ ದೊರೆತಿರುವ ತಾಮ್ರಶಾಸನವೊಂದರಲ್ಲಿ ಈ ದೇವಾಲಯದ ಉಲ್ಲೇಖ ದೊರೆಯುತ್ತದೆ[೧೦]. ಇದು ಅರಸ ಮಲ್ಲಿಕಾರ್ಜುನ (೧೪೪೬ - ೬೫) ನ ಕಾಲದ್ದು. ಇವನು ಚಂದ್ರಮೌಳೀಶ್ವರ ದೇವಾಲಯದಲ್ಲಿ ಬ್ರಾಹ್ಮಣ ವಿದ್ವಾಂಸನೊಬ್ಬನಿಗೆ ಭೂಮಿಯನ್ನು ದಾನವಾಗಿ ನೀಡಿದನು. ಮಂಡ್ಯಜಿಲ್ಲೆಯ ನೆಲಮನೆಯಲ್ಲಿ ದೊರೆತಿರುವ ಶಿಲಾಶಾಸನವೂ[೧೧] ಕೂಡ ಈ ದೇವರ ದಿವ್ಯಸಾನಿಧ್ಯದಲ್ಲಿ ಅರಸರು ಮಾಡಿರುವ ದಾನಧರ್ಮಗಳನ್ನು ತಿಳಿಸುತ್ತದೆ. ಶಿವಮೊಗ್ಗ ಜಿಲ್ಲೆಯ ಅರಗದ ಪುತ್ತಿಗೆ ಮಠದಲ್ಲಿ ದೊರೆತಿರುವ ಅರಸ ಮಲ್ಲಿಕಾರ್ಜುನನು ಮಜ್ಜಲೂರು ಹಳ್ಳಿಯನ್ನು ತುಂಗಭದ್ರ ನದಿಯ ದಂಡೆಯ ಮೇಲಿರುವ ಭಾಸ್ಕರ ಕ್ಷೇತ್ರದ ಚಂದ್ರಮೌಲೀಶ್ವರ ದೇವರ ಸನ್ನಿಧಿಯಲ್ಲಿ ಅನೇಕ ಬ್ರಾಹ್ಮಣರಿಗೆ ದಾನಮಾಡಿದ.

ಮೇಲಿನ ಅಂಶಗಳಿಂದ ಈ ಚಂದ್ರಮೌಳೀಶ್ವರ ದೇವಾಲಯವು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಹಂಪಿಯ ಭಾಸ್ಕರ ಕ್ಷೇತ್ರದಲ್ಲಿತ್ತೆಂದು ಹಾಗೂ ಹಂಪಿಯ ವಿರೂಪಾಕ್ಷ ದೇವಾಲಯದ ನಂತರದ ಪ್ರಮುಖವಾದ ಮತ್ತು ಜನಪ್ರಿಯ ವಾದ ದೇಗುಲವಾಗಿತ್ತೆಂದು ತೀರ್ಮಾನಿಸಬಹುದು. ಹಂಪಿಯ ಈ ಭಾಗದಲ್ಲಿ ಚಂದ್ರಮೌಲೀಶ್ವರ ದೇವಾಲಯದ ಅನ್ವೇಷಣೆಗಾಗಿ ಸಾಕಷ್ಟು ಕ್ಷೇತ್ರಕಾರ್ಯವನ್ನು ನಡೆಸಿದೆ. ಈಗ ತಿರುವೆಂಗಳನಾಥ ದೇಗುಲದ [೧೪] ತೇರುಬೀದಿಯ ಕೊನೆಯಲ್ಲಿರುವ ದೇವಾಲಯವೇ ಚಂದ್ರಮೌಲೀಶ್ವರ ದೇಗುಲ - ಎಂದು ಪರಿಗಣಿಸಿದೆ. ಈ ಶೋಧನೆಯು ಕೆಳಗಿನ ಅಂಶಗಳನ್ನು ಆಧರಿಸಿ ತೀರ್ಮಾನಕ್ಕೆ ಬರಲಾಗಿದೆ:

೧. ಹಂಪಿಯ ತುಂಗಭದ್ರಾನದಿಯ ದಂಡೆಯ ಮೇಲಿರುವ ಭಾಸ್ಕರ ಕ್ಷೇತ್ರದಲ್ಲಿ ವಿರೂಪಾಕ್ಷ ದೇವಾಲಯದ ನಂತರದ ಪ್ರಮುಖ ದೇವಾಲಯವೇ ಇದು. ವಿರೂಪಾಕ್ಷ ದೇವಾಲಯವನ್ನು ಬಿಟ್ಟರೆ, ಇದೇ ಉನ್ನತವಾದ ದ್ವಾರ ಮಂಟಪವನ್ನೂ ಪ್ರಾಕಾರವನ್ನು ಹೊಂದಿರುವ ಶಿವಾಲಯ.

೨. ಈ ದೇವಾಲಯವಿರುವ ಸ್ಥಳವನ್ನು ಅತ್ಯಂತ ಪವಿತ್ರವೆಂದು ಪರಿಗಣಿಸಲಾಗಿದೆ. ದಕ್ಷಿಣ ಭಾರತದಲ್ಲಿ ನದಿಗಳು ಅಥವಾ ಹೊಳೆಗಳು ಉತ್ತರ ದಿಕ್ಕಿಗೆ ತಿರುಗಿ ಹರಿದರೆ, ಆಸ್ಥಳವನ್ನು ಪವಿತ್ರವೆಂದು ಅರಿಯುವುದು ಪ್ರಚಲಿತದಲ್ಲಿದೆ[೧೫]. ಇದೇ ಸ್ಥಳದಲ್ಲಿ ತುಂಗಭದ್ರಾ ನದಿಯು ಉತ್ತರ ದಿಕ್ಕಿಗೆ ತಿರುಗಿ ಹರಿಯುತ್ತದೆ. ಈ ದೃಷ್ಟಿಯಿಂದ ಚಂದ್ರಮೌಲೀಶ್ವರ ದೇವಾಲಯದ ಸ್ಥಳವು ವಿರೂಪಾಕ್ಷ ದೇಗುಲದ ಸನ್ನಿವೇಶಕ್ಕಿಂತ ಪವಿತ್ರವಾದುದು. ಈ ಅಂಶದಿಂದ ಇಡೀ ಭಾಸ್ಕರ ಕ್ಷೇತ್ರವೇ ಪುಣ್ಯಮಯವಾಗಿರಬಹುದು. ಪ್ರಾಯಶಃ ಈ ಉದ್ದೇಶವನ್ನಿಟ್ಟು ಕೊಂಡೇ ಮುಂದೆ ಹದಿನಾರನೆಯ ಶತಕದಲ್ಲಿ ತಿರುವೆಂಗಳನಾಥ ದೇವಾಲಯವನ್ನು ಉತ್ತರ ದಿಕ್ಕಿಗೆ ಮುಖಮಾಡಿ ನಿರ್ಮಿಸಲಾಗಿದೆ.

೩. ಶಾಸನಗಳಲ್ಲಿ ತಿಳಿಸಿರುವಂತೆ ಈ ದೇವಾಲಯವು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಹಂಪಿಯ ಭಾಸ್ಕರ ಕ್ಷೇತ್ರದಲ್ಲಿತ್ತು. ಅಲ್ಲಿ ರಾಜನಿವಾಸದ ಆವರಣದಲ್ಲಿರುವ ಶಿವಾಲಯವನ್ನು ಚಂದ್ರಶೇಖರ ದೇಗುಲವೆಂದು ಸ್ಥಳೀಯ ವಾಗಿ ಕರೆದರೂ, ಅದು ಶೈವ ಸಂಪ್ರದಾಯದ ಯಾವ ದೇವರಿಗೆ ಕಟ್ಟಿಸಿದ ದೇವಾಲಯವೆಂದು ತಿಳಿಯದು. ಇದರ ಹತ್ತಿರವಿರುವ ಹಾಗೂ

ರಾಮಚಂದ್ರ ದೇಗುಲದ ಮುಂದೆ ತುಸು ದೂರದಲ್ಲಿರವ ಶಿವಾಲಯದ ಲಲಾಟ ಬಿಂಬದ ಮೇಲೆ ಚಂದ್ರಶೇಖರ ಮೂರ್ತಿಯ ಉಬ್ಬು ಶಿಲ್ಪವಿದೆ. ಇವುಗಳನ್ನು ಚಂದ್ರ ಮೌಲೀಶ್ವರ ದೇವಾಲಯವೆಂದು ಕರೆಯಲು ಸಾಧ್ಯವೇ? ರಾಜನಿವಾಸದ ಆವರಣವನ್ನು ಭಾಸ್ಕರಕ್ಷೇತ್ರ. ಅಥವಾ ಪಂಪಾಕ್ಷೇತ್ರ ಅಥವಾ ಪಂಪಾತೀರ್ಥ ವೆಂದು ಕರೆಯಲು ಸಾಧ್ಯವಿಲ್ಲ. ಇತ್ತೀಚೆಗೆ ದೊರೆತ ಶಿಲಾಶಾಸನದಲ್ಲಿ ಈ ಪ್ರದೇಶವನ್ನು ಬುಕ್ಕರಾಯನ ಪಟ್ಟಣ ಎಂದೇ ಕರೆಯಲಾಗಿದೆ[೧೬]. ರಾಜನಿವಾಸ ಕೇಂದ್ರವನ್ನು ಭಾಸ್ಕರಕ್ಷೇತ್ರವೆಂದು ಕರೆಯಲಾಗುವುದಿಲ್ಲ. ಹಂಪಿಯ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಿರುವ ಫ್ರಿಟ್ಜ ಮತ್ತು ಮಿಷಲ್ ರೂ ಕೂಡ ಹಂಪೆಯ ತುಂಗಭದ್ರಾ ನದಿಯ ಪ್ರದೇಶವನ್ನು ಪಂಪಾಕ್ಷೇತ್ರವೆಂದು ತಿಳಿಸುತ್ತಾರೆ [೧೭]. ಡಾ. ವಸುಂಧರ ಸಹಾ ರಾಮಚಂದ್ರ ದೇಗುಲದ ಆವರಣ (ರಾಜನಿವಾಸ ಕೇಂದ್ರ) ವನ್ನು ಹೊಸ ಪಟ್ಟಣ ಅಥವಾ ವಿಜಯನಗರವೆಂದು ಕರೆದು, ವಿಜಯನಗರ ಮತ್ತು ವಿರೂಪಾಕ್ಷತೀರ್ಥ ವಿಭಿನ್ನ ಪ್ರದೇಶಗಳೆಂದು ಅಭಿಪ್ರಾಯ ಪಡುತ್ತಾರೆ[೧೮].

ಮೇಲೆ ವಿವರಿಸಿದ ಅಂಶಗಳಿಂದ ಭಾಸ್ಕರ ಕ್ಷೇತ್ರವು ಹಂಪೆಯ ತುಂಗ ಭದ್ರಾನದಿಯ ದಕ್ಷಿಣ ದಂಡೆಯ ಮೇಲಿರುವ ಪ್ರದೇಶವೆಂದು ನಿಚ್ಚಳವಾಗಿ ತಿಳಿಯುತ್ತದೆ. ಇದು ಪಂಪಾಕ್ಷೇತ್ರ ಅಥವಾ ಪಂಪಾ ತೀರ್ಥವೆಂದು ಜನಪ್ರಿಯವಾಗಿದೆ. ಇತ್ತೀಚೆಗೆ ದೊರೆತಿರುವ ಶಾಸನವೊಂದು ಭಾಸ್ಕರ ಕ್ಷೇತ್ರವು ಹಂಪಿಯ ಹೇಮ ಕೂಟದಿಂದ ಆರಂಭವಾಗಿ ತುಂಗಭದ್ರಾ ನದಿಯ ದಂಡೆ ಪ್ರದೇಶವನ್ನೆಲ್ಲ ವ್ಯಾಪಿಸಿತ್ತೆಂದು ತಿಳಿಸುತ್ತದೆ[೧೯]. ಭಾಸ್ಕರ ಕ್ಷೇತ್ರದಲ್ಲಿರುವ ತುಂಗಭದ್ರಾನದಿಯ ದಡದ ಮೇಲಿರುವ ಈ ದೇಗುಲವು ಚಂದ್ರಮೌಲೀಶ್ವರಾಲಯವೆಂದು ಸ್ಪಷ್ಟವಾಗಿ ತಿಳಿಯಬಹುದು.

ದೇವಾಲಯದ ರಚನೆ

ಈ ದೇವಾಲಯವು ಆಯತಾಕಾರದ ಗರ್ಭ ಗೃಹ ಮತ್ತು ಅದೇ ತೆರನಾದ ಅಂತರಾಳವನ್ನು ಹೊಂದಿದೆ. ಈ ದೇವಾಲಯದ ಮುಂದೆ ತೆರೆದ ಸ್ತಂಭರಾಜಿಯ ಮಂಟಪ (ರಂಗಮಂಟಪ)ವಿದೆ. ಇದು ಗರ್ಭಗೃಹ ಮತ್ತು ಅಂತರಾಳದ ಸುತ್ತಲೂ ಆವರಿಸಿದೆ (ಚಿತ್ರ ೩) ಸ್ತಂಭರಾಜಿಯ ಮಂಟಪವನ್ನು ಒಳಗೊಂಡಂತೆ ಈ ದೇವಾಲಯವನ್ನು ಎತ್ತರದ ವೇದಿಯ ಮೇಲೆ ನಿರ್ಮಿಸಲಾಗಿದೆ. ವೇದಿಯ ಪಟ್ಟಿಕೆಗಳು

ಮಣ್ಣಿನಿಂದ ಮುಚ್ಚಿಹೋಗಿವೆ. ದೇವಾಲಯದ ಸುತ್ತಲಿರುವ ಆಯತಾಕಾರದ ಪ್ರಾಕಾರವು ಜೀರ್ಣಾವಸ್ಥೆಯಲ್ಲಿವೆ ; ಪೂರ್ವದಲ್ಲಿ ಉನ್ನತವಾದ ದ್ವಾರಮಂಟಪವಿದೆ. ಪ್ರಾಕಾರದ ದಕ್ಷಿಣೆಗೋಡೆಯ ಒಳಭಾಗದಲ್ಲಿ ತೆರೆದ ಸ್ತಂಭರಾಜಿಯ ಮಂಟಪವಿದೆ; ಉಳಿದೆಡೆಯಲ್ಲಿ ಪ್ರಾಕಾರ ಎತ್ತರದ ಗೋಡೆಯಾಗಿ ಮುಂದುವರೆಯುತ್ತದೆ.

ದೇವಾಲಯವನ್ನು ಎತ್ತರದ ವೇದಿಯ ಮೇಲೆ ನಿರ್ಮಿಸಲಾಗಿದೆ. ಅದರಂಚಿನಲ್ಲಿ, ಅದರ ಸುತ್ತ ಸ್ತಂಭರಾಜಿಯು ಸುತ್ತುವರೆದಿದೆ. ಸ್ತಂಭಗಳು ಮೇಲೇರಿದಂತೆ ಕಿರಿದಾದ ಮೂರು ಘನಾಕೃತಿಗಳನ್ನು ಹೊಂದಿದೆ ಹಾಗೂ ಅವುಗಳ ಮಧ್ಯೆ ಅಷ್ಟಕೋನಾಕೃತಿಯ ರಚನೆಯಿದೆ. ಈ ಘನಾಕೃತಿಗಳ ಮೇಲೆ ಸರಳ ಜ್ಯಾಮಿತಿ ರಚನೆ, ಪುಷ್ಪ ಮತ್ತು ಪಕ್ಷಿಗಳ ತೆಳುವಾದ ಉಬ್ಬುಗೆತ್ತನೆಗಳಿವೆ. ಮೇಲೆ ಮಾಡಿದ ಸುತ್ತಲೂ ಇಳುಕಲಾದ ಕಪೋತವಿದೆ. ಇದರ ಕೆಲ ಭಾಗಗಳು ಕಣ್ಮರೆಯಾಗಿವೆ.

ಗರ್ಭಗೃಹ ಮತ್ತು ಅಂತರಾಳವನ್ನು ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಈ ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟ - ಕುಮುದ, ಪಟ್ಟಿಕಾ, ಕಂಠ ಮತ್ತು ಪ್ರತಿಗಳನ್ನು ಒಳಗೊಂಡಿದೆ. ಇವು ಅಧಿಷ್ಠಾನದ ವಿವಿಧ ಪಟ್ಟಿಕೆಗಳು. ಕೊನೆಯ ಎರಡು ಪಟ್ಟಿಕೆಗಳನ್ನು ಗೋಡೆಯ ಮೇಲಿರುವ ಕೋಷ್ಠಗಳು ಅನಂತರದ ಕಾಲದ ದೇವಾಲಯಗಳಲ್ಲಿರುವಂತೆ ಭೇದಿಸಿಲ್ಲ. ಗೋಡೆಗಳು ಅರೆಸ್ತಂಭ ಮತ್ತು ಆಳವಾದ ಕೋಷ್ಠಗಳಿಂದ ಅಲಂಕೃತವಾಗಿವೆ. ಗರ್ಭಗೃಹ ಮತ್ತು ಅಂತರಾಳದ ಗೋಡೆಗಳ ಮಧ್ಯದಲ್ಲಿ ಕೋಷ್ಠಗಳನ್ನೂ, ಅದರ ಇಕ್ಕೆಡೆಗಳಲ್ಲಿ ಅರೆಗಂಬಗಳನ್ನೂ ರಚಿಸಲಾಗಿದೆ. ಈ ಕೋಷ್ಠಗಳನ್ನು ಶಿಲ್ಪಗಳನ್ನು ಇಡುವುದಕ್ಕಲ್ಲದೆ, ಅಲಂಕರಣೆಗೋಸ್ಕರ ಮಾಡಲಾಗಿದೆ. ಅಂತರಾಳದ ಗೋಡೆಗಳು ಗರ್ಭಗೃಹದ ಗೋಡೆಗಳಿಗಿಂತ ಹಿಂದೆ ಸರಿದಿರುವುದರಿಂದ, ಅದರ ಪ್ರತ್ಯೇಕತೆಯನ್ನು ಗುರುತಿಸಬಹುದು. ಅರೆಸ್ತಂಭಗಳು ಚೌಕಾಕಾರದ ಕಂಬಗಳನ್ನು ಹೊಂದಿದೆ ಹಾಗೂ ಅವುಗಳ ಕುಡಿಯಲ್ಲಿ ಕುಂಭ ಮತ್ತು ಫಲಕಗಳಿವೆ. ಕೋಷ್ಠಗಳನ್ನು ಎರಡು ಭೇದಿತ ಅರೆಸ್ತಂಭಗಳಿಂದ ನಿರೂಪಿಸಲಾಗಿದೆ. ಹಾಗೂ ಅವುಗಳ ಮೇಲೆ ಕೂಡುಗಳಿಂದ ಅಲಂಕೃತವಾದ ಪ್ರಸ್ತರ, ಮಕರತೋರಣಗಳಿಂದ ಕೂಡಿದ ಕಾಲ ಹಾಗೂ ಮೂರು ಕಲಶಗಳಿವೆ (ಚಿತ್ರ ೪) ಪ್ರನಾಲವನ್ನು ಉತ್ತರ ಭಾಗದ ಅಧಿಷ್ಠಾನದ ಜಗತಿ ಪಟ್ಟಿಕೆಯಲ್ಲಿ ಇಡಲಾಗಿದೆ ಮತ್ತು ಯಾಲಿ ಮುಖದಿಂದ ಸಿಂಗರಿಸಲಾಗಿದೆ.

ಗರ್ಭಗೃಹದ ಒಳಭಾಗದಲ್ಲಿ ಗೋಡೆಗಳು ನಯವಾಗಿವೆ. ಪಶ್ಚಿಮದ ಗೋಡೆಯಲ್ಲಿ

ಪೂಜಾಪರಿಕರಗಳನ್ನು ಇಡಲು ಅನುಕೂಲವಾಗುವಂತೆ ಶಿಲಾಪಟ್ಟಿಕೆಯು ಮುನ್ ಚಾಚಿದೆ. ಮೂಲೆಗಂಬಗಳಿದ್ದು ಅದರ ಮೇಲೆ ಕೋನ ಬೋದಿಗೆಗಳಿವೆ. ಮಾಡಿನಲ್ಲಿ ಒಂದರ ಮೇಲೆ ಇನ್ನೊಂದರಂತೆ ಜೋಡಿಸಲಾದ ಚಪ್ಪಡಿಯ ಚದರಗಳಿವೆ ಹಾಗೂ ಅದರ ಮಧ್ಯದಲ್ಲಿ ಪದ್ಮವಿದೆ. ನೆಲದ ಕಲ್ಲು ಚಪ್ಪಡಿಗಳನ್ನು ಮನಸ್ವೇಚ್ಛ ಕಿತ್ತು ಪೂಜಾ ವಿಗ್ರಹವನ್ನು ಸ್ಥಳಾಂತರಿಸಲಾಗಿದೆ ಇಲ್ಲವೇ ನಾಶಪಡಿಸಲಾಗಿದೆ. ಗರ್ಭಗೃಹದ ಪೂರ್ವದಲ್ಲಿ ಬಾಗಿಲಿದ್ದು ಅಂತರಾಳಕ್ಕೆ ಪ್ರವೇಶವನ್ನು ಒದಗಿಸುತ್ತದೆ. ಬಾಗಿಲವಾಡವು ಸುರಳಿಗಳ ಶಾಖೆಗಳಿಂದ ಹಾಗೂ ಪುಷ್ಪ ಲಲಾಟಬಿಂಬದಿಂದ ಅಲಂಕೃತವಾಗಿದೆ. ಬಾಗಿಲು ಪಟ್ಟಿಗಳ ಮೇಲೆ ಕೆಳಭಾಗದಲ್ಲಿ ಪೂರ್ಣಕುಂಭಗಳನ್ನು ಚಿತ್ರಿಸಲಾಗಿದೆ. ಅಂತರಾಳದ ಗೋಡೆಗಳು ಮತ್ತು ಮಾಡನ್ನು ನಯವಾಗಿ ರೂಪಿಸಲಾಗಿದೆ. ಇದರ ಪೂರ್ವದಲ್ಲಿರುವ ದ್ವಾರವು ಸ್ತಂಭರಾಜಿಯ ಮಂಟಪಕ್ಕೆ ಅಥವಾ ರಂಗಮಂಟಪಕ್ಕೆ ಪ್ರವೇಶವನ್ನು ಒದಗಿಸುತ್ತದೆ. ಇದರ ಬಾಗಿಲ ವಾಡವನ್ನು ಪುಷ್ಪದಳ, ಹೂವಿನ ಸುರಳಿಯಲಂಕಾರಗಳಿಂದ ಅಂದಗೊಳಿಸಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಚಿತ್ರಣವಿದೆ. ಈ ಬಾಗಿಲವಾಡದ ಕೆಳಪಾರ್ಶ್ವದಲ್ಲಿ ಶೈವ ದ್ವಾರಪಾಲರನ್ನು ಕೆತ್ತಲಾಗಿದೆ (ಚಿತ್ರ ೫).

ರಂಗಮಂಟಪದ ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಸ್ವಲ್ಪ ಎತ್ತರಿಸಿದ ಚದರ ನೆಲಪ್ರದೇಶದ ಮೇಲೆ ನಿಲ್ಲಿಸಲಾಗಿದೆ. ಈ ಸ್ತಂಭಗಳು ಸುಂದರವಾಗಿದ್ದು, ಕಲ್ಯಾಣ ಚಾಲುಕ್ಯ ಮತ್ತು ಕಾಕತೀಯರ ಕಾಲದ ಸ್ತಂಭಗಳನ್ನು ನೆನಪಿಸುತ್ತವೆ. ಚೌಕಾಕಾರದ ಪೀಠಗಳ ಮೇಲೆ ನಿಲ್ಲಿಸಲಾಗಿದೆ. ಸ್ತಂಭಗಳ ಕೆಳಭಾಗದಲ್ಲಿ ಮೇಲೇರದಂತೆ ಕಿರಿದಾಗುವ ಎರಡು ಘನಾಕೃತಿಗಳಿವೆ. ಇವುಗಳ ನಡುವೆ ೮-೧೬-೮ ಕೋನಗಳ ವೃತ್ತಾಕಾರದ ಪಟ್ಟಿಕೆಗಳಿವೆ. ಸ್ತಂಭಗಳ ತುದಿಯಲ್ಲಿ ಲಶುನ, ಕುಂಭ, ಪಾಲಿ ಮತ್ತು ಫಲಕಗಳಿವೆ (ಚಿತ್ರ ೬). ಈ ಘನಾಕೃತಿಗಳ ಮೇಲೆ ಜಾಮಿತಿ ವಿನ್ಯಾಸಗಳು ಪುಷ್ಪ ನಮೂನೆಗಳು, ಪಕ್ಷಿಗಳು, ಶೈವದೇವತೆಗಳಾದ ಗಣಪತಿ, ಕಾರ್ತಿಕೇಯ ಮುಂತಾದ ದಟ್ಟವಾಗಿ ಕೆತ್ತಿದ ಉಬ್ಬುಗೆತ್ತನೆಯ ಶಿಲ್ಪಗಳನ್ನು ಕಾಣಬಹುದು (ಚಿತ್ರ ೭). ರಂಗಮಂಟಪದ ಮಧ್ಯದ ಭಾವಣೆಯಲ್ಲಿ ಮೇಲೇರಿದಂತೆ ಕಿರಿದಾಗುವ ಚೌಕಗಳು ಹಾಗೂ ಅವುಗಳ ಮಧ್ಯದಲ್ಲಿರುವ ಪದ್ಮಗಳಿಂದ ಅಲಂಕೃತವಾಗಿವೆ. ಭಾವಣೆಯ ಉಳಿದ ಭಾಗವು ನಯಗೊಳಿಸಿದ ಕಲ್ಲಿನ ಚಪ್ಪಡಿಗಳಿಂದ ಕೂಡಿದೆ. ಭಾವಣೆಯ ಸ್ವಲ್ಪ ಭಾಗ ಶಿಥಿಲವಾಗಿದೆ.

ದಕ್ಷಿಣದ ಮಂಟಪ

ದೇವಾಲಯದ ದಕ್ಷಿಣಕ್ಕೆ ಪ್ರಾಕಾರದ ದಕ್ಷಿಣ ಗೋಡೆಗೆ ಹೊಂದಿಕೊಂಡಂತೆ ಮೂರು ಸಾಲಿನ ಸ್ತಂಭರಾಜಿಯ ಮಂಟಪವಿದೆ. ಇದರ ಸ್ತಂಭಗಳು ಒರಟಾಗಿವೆ. ಈ ಮಂಟಪದ ಬಹುಭಾಗ ನಾಶವಾಗಿದೆ.

ದ್ವಾರಮಂಟಪ ಮತ್ತು ಪ್ರಾಕಾರ (ಚಿತ್ರ ೧,೨)

ದೇವಾಲಯದ ಪೂರ್ವಕ್ಕೆ ಉನ್ನತವಾದ ದ್ವಾರಮಂಟಪವಿದೆ. ಅದರ ಮೇಲಿದ್ದಿರಬಹುದಾದ ಗೋಪುರ ಕಣ್ಮರೆಯಾಗಿದೆ. ದ್ವಾರಮಂಟಪವನ್ನು ಉಪಪೀಠ ಮತ್ತು ಅಧಿಷ್ಠಾನಗಳ ಮೇಲೆ ಕಟ್ಟಲಾಗಿದೆ. ಉಪಪೀಠವು ಉಪಾನ ಪದ್ಮ, ಕಂಠ, ಪಟ್ಟಿಕಾ, ಲಂಬಪಟ್ಟಿಗಳಿಂದ ಕೂಡಿದ ಅಗಲವಾದ ಕಂಠ, ತ್ರಿಪಟ್ಟ, ಕುಮುದ, ಕಂಠ ಮತ್ತು ಕೂಡುಗಳಿಂದ ಅಲಂಕೃತವಾದ ಕಪೋತಗಳಿಂದ ಕೂಡಿದೆ. ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಂಠ ಪಟ್ಟಿಕಾ, ಕಂಠ ಮತ್ತು ಪ್ರತಿಗಳಿಂದ ಅಲಂಕೃತ ವಾಗಿದೆ. ಅಧಿಷ್ಠಾನದ ಕೊನೆಯ ಎರಡು ಪಟ್ಟಿಗಳನ್ನು ಗೋಡೆಯ ಮೇಲಿರುವ ಕೋಷ್ಠಗಳು ಛೇದಿಸುತ್ತವೆ. ಈ ಗೋಡೆಯು ಅರೆಗಂಬಗಳು, ಕುಂಭಪಂಜರ ಮತ್ತು ತೆಳುವಾದ ಕೋಷ್ಠಗಳಿಂದ ಅಲಂಕೃತವಾಗಿದೆ. ಕೋಷ್ಠಗಳನ್ನು ಛೇದಿತ ಅರೆಗಂಬಗಳಿಂದ ನಿರೂಪಿಸಲಾಗಿದೆ ಹಾಗೂ ಅವುಗಳ ಮೇಲೆ ಹ್ರಸ್ವವಾದ ಪ್ರಸ್ತರ, ಕಾಲ ಮತ್ತು ಕಲಶಗಳಿವೆ. ಗೋಡೆಯು ಉತ್ತಿರ ತೊಲೆಯೊಂದಿಗೆ ಕೊನೆಗೊಂಡು, ಮೇಲೆ ಕಪೋತವನ್ನು ಹೊಂದಿದೆ. ಕಪೋತವು ಕೂಡುಗಳಿಂದ ಅಲಂಕೃತವಾಗಿದೆ.

ದ್ವಾರಮಂಟಪದ ದ್ವಾರಪ್ರದೇಶದ ಪೂರ್ವ - ಪಶ್ಚಿಮ ಅಂಚುಗಳಲ್ಲಿ ಗೋಡೆಗಳ ಉದ್ದಕ್ಕೂ ಬಾಗಿಲಪಟ್ಟಂತಹ ಲಂಬಪಟ್ಟಿಕೆಗಳನ್ನು ಕಾಣಬಹುದು. ಇದು ಶಿಲ್ಪಾ ಲಂಕಾರದಿಂದ ಕೂಡಿದೆ. ಇವುಗಳ ಹಿಂಭಾಗದಲ್ಲಿ ಎರಡು ಬಾಗಿಲವಾಡುಗಳು ದಟ್ಟವಾದ ಶಿಲ್ಪಾಲಂಕರಣೆಯಿಂದ ಕೂಡಿವೆ. ಮಕರಗಳ ಮೇಲೆ ನಿಂತಿರುವ ಪುಷ್ಪ ತೋರಣಗಳನ್ನು ಹಿಡಿದಿರುವ ಅಲಸಕನ್ಯೆಯರನ್ನು ಉನ್ನತವಾಗಿ ಕೆತ್ತಲಾಗಿದೆ. ಬಾಗಿಲವಾಡವು ಪದ್ಮದಳ, ಸುರುಳಿಯಲಂಕಾರ, ಸರಪಳಿ ವಿನ್ಯಾಸಗಳ ಶಾಖಾಗಳಿಂದ ರಚಿತವಾಗಿವೆ. ಪ್ರದೇಶದ ಗೋಡೆಗಳ ಮೇಲೆ ಸಾಮ್ರಾಜ್ಯದ ರಾಜಚಿಹ್ನೆಗಳಿಂದ ಸೂರ್ಯಚಂದ್ರರನ್ನೂ, ಕಿರುಗತ್ತಿ ವರಾಹವನ್ನೂ ಉಬ್ಬುಗೆತ್ತನೆಯ ಶಿಲ್ಪದಲ್ಲಿ ತೋರಿಸಲಾಗಿದೆ. ಈ ಬಾಗಿಲವಾಡಗಳ ಮಧ್ಯದಲ್ಲಿ ಎರಡು ಗೋಡೆಗಳಲ್ಲಿ ಎದುರು ಬದುರಾಗಿ ಕೊಠಡಿಗಳಿವೆ. ಗೋಡೆಗಳು ನಯವಾದ ಶಿಲಾಚಪ್ಪಡಿಗಳಿಂದ ಕೂಡಿವೆ.

ಪ್ರಾಕಾರದ ಗೋಡೆಯು ಅತಿಯಾದ ಜೀರ್ಣಾವಸ್ಥೆಯಲ್ಲಿದೆ. ಗೋಡೆಯ ಎರಡು ಹೊರಮುಖಗಳನ್ನು ನಯಗೊಳಿಸಿದ ಚಪ್ಪಡಿಗಳಿಂದ ಕಟ್ಟಲಾಗಿದೆ. ಕಲ್ಲು ಚಪ್ಪಡಿಗಳ ನಡುವೆ ಇಟ್ಟಿಗೆ - ಗಾರೆಗಚ್ಚನ್ನು ತುಂಬಲಾಗಿದೆ. ಚಪ್ಪಡಿಗಳನ್ನು ಮತ್ತು ಗಾರೆಗಚ್ಚನ್ನು ಭದ್ರವಾಗಿ ಬಂಧಿಸಿಡಲು ಅಡ್ಡಕಲ್ಲಿನ ಚಿಕ್ಕ ತೊಲೆಗಳನ್ನು ಇಡಲಾಗಿದೆ. ದಕ್ಷಿಣಭಾಗದಲ್ಲಿ ಪ್ರಾಕಾರವು ನಾಶವಾಗಿದೆ. ಉಳಿದೆಡೆ ಅಲ್ಪಸ್ವಲ್ಪ ಉಳಿದುಕೊಂಡಿದೆ.

ಕಾಲ ನಿರ್ಣಯ

ಆರಂಭದ ದಿನಗಳಲ್ಲಿ ಇದೊಂದು ಸರಳ ದೇವಾಲಯವಾಗಿರಬೇಕು. ಕ್ರಿ.ಶ. ೧೩೮೭ರ ಶಾಸನವೊಂದು ತುಂಗಭದ್ರನದಿಯ ದಂಡೆಯ ಮೇಲಿರುವ ನರಸಿಂಹ ದೇಗುಲದ ಆವರಣದ ಬಂಡೆಯ ಮೇಲಿದೆ. [೨೦] ಬೈರಿಸೆಟ್ಟಿಯ ಮಕ್ಕಳಾದ ಸುಂಕದ ಹಿರಿಯ ತಮ್ಮ ಮತ್ತು ಚಿಕ್ಕತಮ್ಮರು ನರಸಿಂಹದೇವಾಲಯಕ್ಕೆ ಪಶ್ಚಿಮದಲ್ಲಿ ಶಿವಾಲಯವನ್ನು ಕಟ್ಟಿಸಿ, ಕ್ಷೇತ್ರ ಪಾಲ ವಿಗ್ರವನ್ನು ದೇವಾಲಯದ ಮುಂದೆ ನಿಲ್ಲಿಸಿದರೆಂದು ಈ ಶಾಸನದಲ್ಲಿ ತಿಳಿಸಲಾಗಿದೆ. ಈ ಶಿವಾಲಯವು ಪ್ರಸ್ತುತ ಪರಿಶೋಧನೆಗೆ ಒಳಗಾಗಿರುವ ಚಂದ್ರಮೌಲೀಶ್ವರ ದೇಗುಲವಲ್ಲದೆ ಬೇರಾವುದೂ ಅಲ್ಲ. ಈ ದೇವಾಲಯವು ನರಸಿಂಹದೇವಾಲಯದ ಪಶ್ಚಿಮ ದಿಕ್ಕಿಗೆ ಅನತಿದೂರದಲ್ಲಿದೆ, ಹಾಗೂ ಈ ದೇವಾಲಯದ ಮುಂದೆಯೇ ಕ್ಷೇತ್ರಪಾಲ ವಿಗ್ರವನ್ನು ನಿಲ್ಲಿಸಲಾಗಿದೆ. ಶಿಲ್ಪಗ್ರಂಥಗಳಲ್ಲಿ ತಿಳಿಸಿರುವ ಸೂಚನೆಗೆ ಅನುಸಾರವಾಗಿ ಕ್ಷೇತ್ರಪಾಲ (ಚಿತ್ರ ೮) ವಿಗ್ರಹವನ್ನು ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ನಿಲ್ಲಿಸಲಾಗಿದೆ.[೨೧] ತ್ರಿಪಟ್ಟಿಗಳ ಸ್ತಂಭಪೀಠ, ಶಿಲ್ಪಕೆತ್ತನೆಗಳಿಂದ ಕೂಡಿದ ಕಂಬದ ಘನಾಕೃತಿಗಳು, ಕೋನಬೋದಿಕೆಗಳು ಮುಂತಾದ ದೇವಾಲಯದ ವಾಸ್ತು ಅಂಶಗಳು ವಿಜಯನಗರದ ವಾಸ್ತು ಶೈಲಿಯ ಆರಂಭದ ಲಕ್ಷಣಗಳು.[೨೨] ಆದ್ದರಿಂದ ಈ ದೇವಾಲಯವು ಹದಿನಾಲ್ಕನೇ ಶತಮಾನದ ಕೊನೆಯ ಭಾಗದಲ್ಲಿ ನಿರ್ಮಾಣವಾಯಿತೆಂದು ನಿರ್ಧರಿಸಬಹುದು. ಈ ಲೇಖನದ ಆರಂಭದಲ್ಲೇ ತಿಳಿಸಿದಂತೆ, ಅದಕ್ಕಿರುವ ಸ್ಥಾನ-ಸನ್ನಿವೇಶಗಳ ಪಾವಿತ್ರತೆಯಿಂದ ಅರಸರು ಮತ್ತು ಜನಸಮೂಹದ ಗಮನವನ್ನು ಇದು ಸೆಳೆಯಿತು. ಈ ದೇಗುಲದಂತೆ ವಿರೂಪಾಕ್ಷ ದೇವಾಲಯವೂ ಆರಂಭದಲ್ಲಿ ಸರಳ ಕೃತಿಯೇ. ಆದರೆ ಅದಕ್ಕಿದ್ದ ಸ್ಥಳ ಸನ್ನಿವೇಶ ಮತ್ತು ಪರಂಪರೆಯಿಂದ ಇದು ಭವ್ಯವಾಗಿ ಬೆಳೆಯಿತು. ಇದೇ ರೀತಿಯಲ್ಲಿ ಚಂದ್ರಮೌಲೀಶ್ವರ ದೇಗುಲವು ಉನ್ನತ ಬೆಳವಣಿಗೆಯನ್ನು ಸಾಧಿಸಿತು. ದಿನಗಳು ಕಳೆದು, ಆಲಯವು ಪ್ರಾಮುಖ್ಯವನ್ನು ಗಳಿಸಿದಂತೆ ಅದಕ್ಕೆ ಅನೇಕ ಕಟ್ಟಡಗಳನ್ನು ಸೇರಿಸಲಾಯಿತು. ವಿಶಾಲವಾದ

ಪ್ರಾಂಗಣವನ್ನು ಒಳಗೊಂಡಂತೆ, ಪ್ರಾಕಾರ, ಉನ್ನತವೂ, ಭವ್ಯವೂ ಆದ ದ್ವಾರಮಂಟಪವನ್ನು ದೇವಾಲಯದ ಮುಂದೆ ನಿರ್ಮಿಸಲಾಯಿತು. ಹದಿನೈದನೇ ಶತಮಾನದ ಉದ್ದಕ್ಕೂ ಚಂದ್ರಮೌಲೀಶ್ವರ ದೇಗುಲವು ತನ್ನ ಪ್ರಾಮುಖ್ಯವನ್ನು, ಪಾವಿತ್ರತೆಯನ್ನು ಹಾಗೂ ಜನಪ್ರಿಯತೆಯನ್ನು ಉಳಿಸಿಕೊಂಡಿತ್ತು. ಆದರೆ ಹದಿನಾರನೇ ಶತಮಾನದಲ್ಲಿ ಅದೇ ಪರಿಸ್ಥಿತಿ ಉಳಿದಂತೆ ಕಾಣದು. ಇದಕ್ಕೆ ಕಾರಣ ಇಲ್ಲದಿಲ್ಲ. ಹದಿನೈದನೆಯ ಶತಮಾನದ ಕೊನೆಗೆ ವೈಷ್ಣವ ಧರ್ಮ ಮೇಲ್ಮೆಯನ್ನು ಸಂಪಾದಿಸಿತು ಹಾಗೂ ಹದಿನಾರನೇ ಶತಮಾನದಲ್ಲಿ ಅತ್ಯಂತ ಪ್ರಬಲವಾಯಿತು. ಈ ಧರ್ಮದ ಶ್ರೀಸಂಪ್ರದಾಯ ಮತ್ತು ಹರಿದಾಸ ಪಂಥವು, ಈ ಧರ್ಮವನ್ನು ಮತ್ತಷ್ಟು ಜನಪ್ರಿಯಗೊಳಿಸಿದವು.[೨೨] ವಿಜಯನಗರ ಸಾಮ್ರಾಜ್ಯದ ಮೊದಲನೇ ರಾಜವಂಶವಾದ ಸಂಗಮವಂಶಜರು ವೈಯಕ್ತವಾಗಿ ಶೈವಧರ್ಮೀಯರಾದರೂ ಶೈವ, ವೈಷ್ಣವ ಮತ್ತು ಜೈನಧರ್ಮಗಳ ನಡುವೆ ಅಸಾಧಾರಣವಾದ ಸಹಿಷ್ಣುತೆಯನ್ನು ತೋರಿಸಿ, ಅವುಗಳ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದರು. ಹದಿನೈದನೆಯ ಶತಮಾನದ ಅಂಚಿನಲ್ಲಿ ಅಧಿಕಾರಕ್ಕೆ ಬಂದ ಸಾಳ್ವರು, ಅವರ ನಂತರ ಅಧಿಕಾರಕ್ಕೇರಿದ ತುಳುವರು ತೀವ್ರವಾದ ವೈಷ್ಣವಾಭಿಮಾನಿಗಳಾಗಿ, ವೈಷ್ಣವ ಧರ್ಮವನ್ನು ಪೋಷಿಸಿದರು. ಅತ್ಯಧಿಕ ಪ್ರಮಾಣದಲ್ಲಿ ವೈಷ್ಣವ ಆಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು ಹಾಗೂ ತಮ್ಮನ್ನು ಅಂತಹ ಕೈಂಕರ್ಯದಲ್ಲಿ ತೊಡಗಿಸಿಕೊಂಡರು. ಹಂಪಿಯ ತುಂಗಭದ್ರಾ ನದಿಯ ದಂಡೆಯ ಮೇಲೆ ಮತ್ತು ಉಳಿದೆಡೆಯಲ್ಲೂ ಅಗಾಧ ಸಂಖ್ಯೆಯ ವೈಷ್ಣವಾಲಯಗಳು ನಿರ್ಮಾಣವಾದವು. ಈ ಪವಿತ್ರ ವಲಯದಲ್ಲಿ ಚಂದ್ರಮೌಲೀಶ್ವರ ದೇಗುಲವು ಒಂಟಿ ಶಿವಾಲಯವಾಗಿ ಹದಿನಾರನೆಯ ಶತಕದಲ್ಲಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಸಾಮ್ರಾಜ್ಯ ನಾಶವಾದ ಮೇಲೆ ಜನರ ಮನಸ್ಸಿನಿಂದ ಮರವೆಯಾಯಿತು.

೧. ಫಿಲಿಯೋಜ, ವಸುಂಧರ, Hampi - Vijayanagara, The Temple of Vithala, ನವದೆಹಲಿ, ೧೯೮೮, ಪು. ೨೪ ಇವರು ನಂಜನಗೂಡಿನಲ್ಲಿ ದೊರೆತ ಶಾಸನಗಳಿಂದ ವಿಜಯವಿಠ್ಠಲದೇವಾಲಯದ ಸುತ್ತ ಇರುವ ದೇವಾಲಯಗಳನ್ನು ಗುರುತಿಸಿದ್ದಾರೆ.

೨. ಲಾಂಗ್ ಹರ್ಸ್ಟ್, ಎ.ಎಚ್ Hampi Ruins, ನವದೆಹಲಿ, ೧೯೮೨ (ಪು.ಮು) ಪು ೧೧೬. ಈ ದೇವಾಲಯ ದ್ವಾರಮಂಟಪದ ಒಳಗೋಡೆಯ ಮೇಲೆ ವಿಜಯನಗರ ಸಾಮ್ರಾಜ್ಯದ ಲಾಂಛನವಾದ ವರಾಹ -ಕಿರುಗತ್ತಿಯ ಉಬ್ಬು

ಶಿಲ್ಪವಿದೆ. ಅದರ ಆಧಾರದ ಮೇಲೆ ಆತ ಆ ರೀತಿ ಗುರುತಿಸಿದ್ದಾರೆ.

೩. ದೇವಕುಂಜರಿ, ಡಿ. Hampi, ನವದೆಹಲಿ, ೧೯೮೩ (ಪು.ಮು) ಪು. ೬೧.

೪. EC., V, Hn. 16; Ex., V., BL., 75 ಇಂತಹ ನೂರಾರು ಉದಾಹರಣೆಗಳು ದೊರೆಯುತ್ತದೆ.

೫. EC.,IX, Cp, 153; EX., V (1976), TN., 128; SII., X 490; EC. III (1974)., Gu, 1; etc.,

೬. EC., XI, Hr., 75 and 76

೭. EC., XI, Hk., 70

೮. EC., XII, Si., 95

೯. EC., IX, Dr. 81

೧೦. EC., XII, Pg. 58

೧೧. EC., VI, (1977), Sr. 93; III (I ed) Sr. 133.

೧೨. EC., VIII, TL.,206

೧೩. EC., VII, ML.,136

೧೪. ARSIE, 1904, 16; SII, IX, Pt. ii, 564.

೧೫. Ramaswamy N.S. Temples of Tadapatri, Hyderabad, 1976, page. 18.

೧೬. VPR, 1987-88, ಶಾಸನಸಂ. ೨, ಪು. ೨೨

೧೭. ಫ್ರಿಟ್ಸ್ ಮತ್ತು ಮಿಷಲ್, City of Vijayanagara, ನ್ಯೂಯಾರ್ಕ್ ೧೯೯೧ ಪು. ೫೦

೧೮. ಫಿಲಿಯೋಜ, ವಸುಂಧರ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಬೆಂಗಳೂರು, ೧೯೮೦, ಪು. ೭೧.

೧೯. VPR,೧೯೮೪-೮೭, ಶಾಸನ ಸಂ. ೩, ಪು. ೨೦.

೨೦. ARIE, 1975-76, 99; VPR., 1983-84, ಪು. ೧೧

೨೧. ರಾಮಚಂದ್ರರಾವ್, ಎಸ್. ಕೆ., Pratima Kosha, Vol III ,ಬೆಂಗಳೂರು, ಪು. ೧೧೬.

೨೨. ಫ್ರಿಟ್ಸ್, ಮಿಷಲ್, ಸಾಗರಾಜರಾವ್ The Royal Centre at Vijayanagar, ಮೆಲ್ಬೋರನ್, ೧೯೮೪, ಪು. ೫೬.

೨೩. ಸರೋಜಿನಿದೇವಿ ಕೆ. Religion in Vijayanagara Empire, ನವದೆಹಲಿ, ೧೯೯೦ ಪು. ೧೯.

ಹುಯಿಲಗೋಳ ನಾರಾಯಣರಾಯರ ಭಕ್ತಿಗೀತೆಗಳು (ಕೀರ್ತನೆಗಳು)

– ಡಾ. ಜಿ.ಡಿ. ಜೋಶಿ

ಹುಯಿಲಗೋಳ ನಾರಾಯಣರಾಯರು (೧೮೮೪-೧೯೭೧)

'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಎಂಬ ನಾಡಗೀತೆಯಿಂದ ಕನ್ನಡಿಗರನ್ನು ಇಪ್ಪತ್ತನೆಯ ಶತಮಾನದ ಮೂರು - ನಾಲ್ಕು - ಐದನೆಯ ದಶಕಗಳಲ್ಲಿ ಜಾಗ್ರತಗೊಳಿಸಿದ ಹುಯಿಲಗೋಳನಾರಾಯಣರಾಯರು ವೃತ್ತಿಯಿಂದ ಗದಗಿನಲ್ಲಿ ವಕೀಲರಾಗಿದ್ದರೂ ಪ್ರವೃತ್ತಿಯಿಂದ ಕವಿ - ನಾಟಕಕಾರರಾಗಿದ್ದರು.

ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ೧೯೨೪ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತಗೀತೆಯೆಂದು ನಾರಾಯಣರಾಯರ 'ಉದಯವಾಗಲಿ' ಪದ್ಯವನ್ನು ಸುಶ್ರಾವ್ಯವಾಗಿ ಧಾರವಾಡದ ಗವಾಯಿ ಸುಬ್ಬರಾಯರು ಹಾಡಿದಾಗ ಸಭಿಕರೆಲ್ಲ ಪುಲಕಿತರಾದರು. ನಾರಾಯಣರಾಯರಿಗೆ ತಾವು ಕಳಿಸಿದ್ದ 'ಉದಯವಾಗಲಿ' ಸ್ವಾಗತಗೀತೆಯು ಆಯ್ಕೆಯಾದದ್ದು, ತಿಳಿದದ್ದು ಸಭಿಕರಲ್ಲಿ ಒಬ್ಬರಾಗಿ ಕುಳಿತಿದ್ದ ಆ ವೇಳೆಯಲ್ಲಿ ! ಮುಂದೆ ಕರ್ನಾಟಕದ ಏಕೀಕರಣಕ್ಕೆ ಅದು ಒಂದು ಮಂತ್ರವಾಯಿತು. ನಾಡಗೀತೆಯಾಯಿತು. ಎಲ್ಲ ಚಟುವಟಿಕೆಗಳೂ ಕಾರ್ಯಕ್ರಮಗಳೂ ಆ ಹಾಡಿನಿಂದಲೇ ಆರಂಭವಾಗತೊಡಗಿದವು.

ನಾರಾಯಣರಾಯರು ೧೮೮೪ರಲ್ಲಿ ಗದುಗಿನಲ್ಲಿ ಜನಿಸಿದರು. ಅವರು ಶಾಲಾ ಶಿಕ್ಷಣವನ್ನು ಗದಗು, ಗೋಕಾಕ, ಧಾರವಾಡಗಳಲ್ಲಿ ಮುಗಿಸಿದರು. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಬಿ.ಎ. ಅಭ್ಯಾಸ ಮಾಡಿ ಮುಂಬಯಿಯಲ್ಲಿ ಎಲ್.ಎಲ್.ಬಿ. ಶಿಕ್ಷಣ ಪಡೆದರು. ೧೯೧೧ರಲ್ಲಿ ಗದುಗಿಗೆ ಬಂದು ವಕೀಲ ವೃತ್ತಿಯಲ್ಲಿ ತೊಡಗಿದರು. ದೊಡ್ಡ ಕುಟುಂಬದ ಭಾರ ಹೊತ್ತು, ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುತ್ತ, ಕಾವ್ಯ - ನಾಟಕಗಳನ್ನು ರಚಿಸತೊಡಗಿದರು. ರಚಿಸಿದ ನಾಟಕಗಳನ್ನು 'ಯಂಗ್ ಮೆನ್ಸ್ ಫುಟ್ಬಾಲ್ ಅಮೆಚುರ್ಸ್ ಕ್ಲಬ್ಬಿ'ನ ಸದಸ್ಯರಿಗೆ ತರಬೇತಿ ಕೊಟ್ಟು ಪ್ರದರ್ಶಿಸುತ್ತಿದ್ದರು.

ಆಲೂರ ವೆಂಕಟರಾಯರು ಹಾಗೂ ಕೆರೂರ ವಾಸುದೇವಾಚಾರ್ಯರ ಸಮಕಾಲೀನರಾಗಿದ್ದು, ಇಪ್ಪತ್ತನೆಯ ಶತಮಾನದ ಪ್ರಾರಂಭದ ಕಾಲದಿಂದ ಅಂದರೆ

ಅವರು ಇನ್ನೂ ಕಾಲೇಜಿನಲ್ಲಿ ಕಲಿಯುತ್ತಿದ್ದಾಗಲೇ (೧೯೦೮-೧೦) ಕಾವ್ಯ ರಚನೆಗೆ ತೊಡಗಿದ್ದರು. ಕುಮಾರ ವ್ಯಾಸ ಭಾರತದ ಅಭ್ಯಾಸದ ಪರಿಣಾಮವಾಗಿ ಭಾಮಿನಿ ಷಟ್ಪದಿಯಲ್ಲಿ ಅವರು ಕಾವ್ಯ ರಚಿಸಲು ಹೆಚ್ಚು ಪರಿಶ್ರಮ ಪಡಬೇಕಾಗುತ್ತಿರಲಿಲ್ಲ. ಇವರು ರಚಿಸಿದ ಕಾವ್ಯದಲ್ಲಿ ಷಟ್ಪದಿಗಳು (೧೩), ಕೀರ್ತನೆಗಳು (೮೫), ಸ್ವಾಗತ ಗೀತೆಗಳು (೧೨), ಇತರ ಹಾಡುಗಳು (೪) ಹಾಗೂ ಇವರ ಸಂಗೀತ ನಾಟಕಗಳಲ್ಲಿರುವ ಹಲವಾರು ಹಾಡುಗಳು ನಮಗೆ ದೊರಕುತ್ತವೆ. ನಾರಾಯಣರಾಯರು ಹದಿಮೂರು ಸಂಗೀತ ನಾಟಕಗಳನ್ನೂ, ಹಾಗೂ ಒಂದು ಸಂಗೀತವಿಲ್ಲದ (ಬರಿ ಗದ್ಯದಲ್ಲಿ) ನಾಟಕ ವನ್ನೂ ಬರೆದಿದ್ದರೆ. 'ಮೂಡಲು ಹರಿಯಿತು' ಎಂಬ ಕಾದಂಬರಿಯನ್ನೂ ಬರೆದಿದ್ದಾರೆಂದು ತಿಳಿದು ಬಂದಿದೆ. ಕೆಲವು ಕಥೆಗಳನ್ನು ಹಾಗೂ ಸುಮಾರು ೧೮ ಲೇಖನ /ಭಾಷಣಗಳನ್ನು ಬರೆದು ಮಂಡಿಸಿದ್ದಾರೆ. ಇವರ ಸಾಹಿತ್ಯ ಸಂಗ್ರಹ ಮಾಡಲು ಇನ್ನೂ ಸಾಧ್ಯವಿದೆ. ಪ್ರಸ್ತುತ ಲೇಖನದಲ್ಲಿ ನಾರಾಯಣರಾಯರ ಭಕ್ತಿಗೀತೆಗಳ ಕುರಿತು ಸವಿವರ ವಿಶ್ಲೇಷಣೆ ಮಾಡಲಾಗಿದ್ದರೂ ಇನ್ನೂ ೨೦-೨೫ ಇಂತಹ ಭಕ್ತಿಗೀತೆಗಳ (ಕೀರ್ತನೆಗಳ) ಸಂಗ್ರಹ ಸಾಧ್ಯ ಎಂದು ನಾರಾಯಣರಾಯರ ಹಿರಿಯ ಮಗ ಶ್ರೀ ವೆಂಕಟೇಶ ಅವರು ಅಭಿಪ್ರಾಯ ಪಡುತ್ತಾರೆ.

ನಾರಾಯಣರಾಯರು ತಮ್ಮ ಭಕ್ತಿ ಗೀತೆಗಳ (ಕೀರ್ತನೆಗಳ) ರಾಗ, ತಾಳಗಳನ್ನು ಭಕ್ತಿಗೀತೆಯ ಪ್ರಾರಂಭದಲ್ಲಿ ಸೂಚಿಸಿದ್ದಾರೆ. ಅವರೂ ದಾಸ ಪರಂಪರೆಯಂತೆ ತಮ್ಮ ಭಕ್ತಿಗೀತೆಗಳಿಗೆ ಶೀರ್ಷಿಕೆ ಕೊಟ್ಟಿಲ್ಲ. ಆದರೂ ಅವರು ರಚಿಸಿದವುಗಳಲ್ಲಿ ಸಂಗ್ರಹಿಸಲಾದ ೮೫ ಭಕ್ತಿ ಗೀತೆಗಳನ್ನು ಮೊದಲ ಸಾಲಿನ ೨೧೩ ಶಬ್ದಗಳ ಸಹಾಯದಿಂದ ಇಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗುವುದು.

ಇವು ಅವರ ಭಕ್ತಿಗೀತೆಗಳು :-

೧. ಶ್ರೀ ಗಜವದನಾ
೨. ನಿಲ್ಲಿಸಯ್ಯಾ ನಿನ್ನ
೩. ಚಂಚಲಿಸಲು ಕೊಡದಿರು
೪. ಕರುಣಿಸಲಾರೆಯಾ
೫. ಏಳು ನಾರಾಯಣ
೬. ಜನುಮದ ದಿವಸವಿದು
೭. ಕೊಳಲೂದೋ ಕೃಷ್ಣಾ
೮. ಸಿಕ್ಕ ಸಿಕ್ಕ
೯. ಪುಟ್ಟಿ ಬಂದಿಹೆಯಾ
೧೦. ಪಾದಂಗಳ ತೋರಿಸೋ
೧೧. ಸ್ಮರಿಸುವುದು ರಘುನಂದನನ
೧೨. ಧನ್ಯನಾದೆ ಧನ್ಯನಾದೆ
೧೩. ಶ್ರೀ ವೇಣುಗೋಪಾಲಕೃಷ್ಣಾ
೧೪. ಪಾಲಿಸು ಸೌಭಾಗ್ಯದ

೧೫. ಅಣಿಯಾರೊ ೧೬. ಏಕೆ ಬೇಕಾಗಿತ್ತೋ
೧೭. ನಿಜ ವೈಷ್ಣವಾ ೧೮. ಬಿಡಬೇಡೋರಂಗ
೧೯. ಕೇಳಿಸಲೊಲ್ಲದೇನೋ ೨೦. ಹರಿಯನ್ನು ಒಲಿಸಿಕೊಡೋ
೨೧. ಯಾವ ಹೆಸರಿನಿಂದ ೨೨. ಒಲಿಯುವೆ ನೀನೆಂತು
೨೩. ರಾಮಚಂದ್ರ ನೀ ೨೪. ಶ್ರೀಪತಿಯೇ ನಿನ್ನ
೨೫. ಮಾಸಲಾಗಿ ನಿನ್ನದೊಂದು ೨೬. ಪರಮ ಮಂಗಳಧಾಮಾ
೨೭. ಇದೇ ಕಣೋ. ೨೮. ರಘುಪತಿಯು ನಿನ್ನ
೨೯. ಸೇವೆ ಮಾಳ್ಪೆ. ೩೦. ಎಂಥ ಧನ್ಯಳೇ
೩೧. ಬಂದೆಯಾ ಕೃಷ್ಣಯ್ಯಾ ೩೨.. ಬಾಲನಾಗಿ ಬಂದ
೩೩. ಹರಲಿ ಮಾಡಿದರಲ್ಲೇ ೩೪. ಮಧಾಂದನೋ ನಾನು
೩೫. ಹುಡುಕುತಲಿಹೆನವನಾ ೩೬. ನಿನ್ನೊರೆಗೆ
೩೭. ಕೋಪವೇತಕೆ ೩೮. ನಾಲಿಗೆ ಬರದಯ್ಯಾ
೩೯. ದನ್ಯ ಧನ್ಯನೋ ೪೦. ಕಾಯೋತೋಯಜ
೪೧. ಜಯ ಮಂಗಳಂ ಬುದ್ಧಿಯನಾಳ್ದವಗೆ ೪೨. ಭಾರತೀರಮಣ
೪೩. ಖೋಡಿ ಮನಸು ೪೪. ನೀನೊಲಿದರೇನು
೪೫. ಸುಲಭ ನೀನೆನಗಲ್ಲ ೪೬. ಎಂಥ ಪಾಪವನು
೪೭. ನಿನ್ನ ದಿವ್ಯ ೪೮. ಕೊಳಲನೂದೆಲೋ
೪೯.ಸುಲಭ ನೀನೆನಗಲ್ಲ ೪೯. ನನ್ನದೇನಿದೆಯೋ
೫೦. ಏನು ವೈಭವವೋ ೫೧. ಮನೆಗೆ ಬಾರೋ
೫೨. ಜಿಪುಣರ್ಯೆ ನೀವೆಂದು ೫೩. ಕನಕಾ ನಿನ್ನ
೫೪. ಏನೆಂದು ವರಿಸಿದೆಯೆ ೫೫. ಯಾದವ ಮಾಧವ
೫೬. ಎಂದು ಕಾಂಬುವೆ ೫೭. ಜಯಮಂಗಳಂ ನಿತ್ಯ.
೫೮. ಇಟ್ಟಂಗೆ ಇರುವೆನೋ ೫೯. ಮನವೇನೀ
೬೦. ಕಾಲ ಬೆರಳು ೬೧. ಏನು ಮಾಡಿದೆ
೬೨. ನಿನ್ನನಲ್ಲವೇನೋ ೬೩. ಬೇಡೆಲೋ ಜೀವ
೬೪. ನಾನೇನು ನಿನಗೆಂದೆನೋ ೬೫. ಯಾವಲ್ಲಿ ಅಡಗಿರುವೆ
೬೬. ಎಲ್ಲೆಲ್ಲಿ ಆಡಿ ೬೭. ಕಂಡಿರೇನಯ್ಯ
೬೮. ಶರಣು ಬಂದೆನೋ ೬೯. ಬುಗರಿ ಆಡೋ

೭೦. ಏನಿದು ಚಂದ
೭೧. ಜಯಮಂಗಳಂ ನಿತ್ಯ ಮಂಗಳಂ
೭೨. ಎಂಥ ವೀರನೋ
೭೩. ಈಸಲು ಬಿಡು
೭೪. ಪಾರ್ಥನ ಸಾರಥಿಯಾ
೭೫. ರತ್ನವ ದೊರಕಿಸಿರೋ
೭೬. ಕಮಲಭವನ
೭೭. ಚಂದವಾ ಪರಮೇಶ್ವರಿ
೭೮. ರಾಯ ಕೇಶವ
೭೯. ಪ್ರಾಣದೇವಾ
೮೦. ಕರುಣೆಸಯ್ಯ ಚಂದ್ರಶೇಖರ
೮೧. ಮಂಗಳಾರುತಿ ತಂದು
೮೨. ನಾನೇನು ನಿನ್ನ ಚರಣವ
೮೩. ನೀನಲ್ಲದಿನ್ನಾರು
೮೪. ಎಷ್ಟು ಭಜಿಸಿದರು
೮೫. ಮಂಗಳಂ ಜಯ ಮಂಗಳಂ ಇಂಗಡಲ ಕುವರಂಗೆ (ಈ ಲೇಖನದಲ್ಲಿ ಆಧಾರವಾಗಿ ಕೊಟ್ಟ ಸಂಖ್ಯೆಗಳು ಈ ಭಕ್ತಿಗೀತೆಗಳ ಸಂಖ್ಯೆಗೆ ಅನುಗುಣವಾಗಿವೆ).

ಈ ೮೫ ಭಕ್ತಿಗೀತೆಗಳಲ್ಲಿ ಬಹಳ ಜನಪ್ರಿಯವಾಗಿದ್ದು ಜನರ ಬಾಯಲ್ಲಿ ಈಗಲೂ ನಲಿದಾಡುವಂಥಗಳಲ್ಲಿ ಈ ಕೆಳಗೆ ಕೊಟ್ಟವುಗಳು ಸುಪ್ರಸಿದ್ಧವಾದವು. ಅವುಗಳ ಪಲ್ಲವಿ/ಅನುಪಲ್ಲವಿ ಮಾತ್ರ ಇಲ್ಲಿ ಕೊಡಲು ಸಾಧ್ಯ.

೧. ಕೇಳಿಸಲೊಲ್ಲದೇನೋ |ಕೃಷ್ಣಾ ಕೇಳಿ|
ಕೇಳಿಸದಂತಿರುವೆಯೇನೋ ? || ಪ || (೧೯)

೨. ಕೊಳಲೂದೋ ಕೃಷ್ಣಾ ಕೊಳಲೂದೋ || ಪ ||
ಕೊಳಲೂದಲು ಮನ ತಳೆವುದು ಮನವಿದೋ |
ಬಳಲಿಪ ಚಿಂತೆಯ ಕಳೆವುದು ನಾದೋ || ಅ.ಪ || (೪೮)

೩. ಸಿಕ್ಕ ಸಿಕ್ಕ ಇಲ್ಲೆ ಸಿಕ್ಕ || ಪ ||
ಪಕ್ಕದೊಳೆಲ್ಲೆಲ್ಲೂ ಹರಿ ತುಂಬಿಹನಕ್ಕ || ಅ.ಪ. ||(೮)

೪. ಏಕೆ ಬೇಕಾಗಿತ್ತೋ ನಿನಗೆ ಈ ಆಟ |
ಲೋಕೇಶ ಸಾಕಯ್ಯ ಇಲಿ ಬೆಕ್ಕಿನಾಟ || ಪ || (೧೬)

೫. ಮಿಾಸಲಾಗಿ ನಿನ್ನದೊಂದು ಚೆಲ್ವ ರೂಪವನ್ನಿಡೋ ।
ವಾಸುದೇವ ನಿನ್ನನಂತ ದಿವ್ಯ ರೂಪಂಗಳಲಿ ಎನಗೆ ॥ ಪ ॥(೨೫)

೬. ಕಾಲ ಬೆರಳು ಬಾಯೊಳೇತಕೋ । ರಂಗಯ್ಯ ನಿನ್ನ ॥ ಪ ॥
ಸಾಲದಾಯ್ತೆ ಭಕ್ತರಿತ್ತ ।(ದುಡುಕು)ಕಾಲೋಚಿತ ಶಾಲ್ಯನ್ನವು
ಹಾಲೋಗರ ಭಕ್ಷ್ಯಂಗಳು ॥ ಅ.ಪ ॥ (೬೦)

೭. ಯಾವಲ್ಲಿ ಅಡಗಿರುವಿ । ಕೃಷ್ಣಯ್ಯ ನೀ । ಯಾವಲ್ಲಿ ಅಡಗಿರುವಿ ॥ ಪ ॥
ಯಾವಲ್ಲಿ ಅಡಗಿರುವಿ । ಯಾವಲ್ಲಿ ಹುಡುಕಲಿ ।
ಭಾವದ ಮೂಲೆಯ ಠಾವನು ಬಿಟ್ಟು ॥ ಅ.ಪ ॥ (೬೫)

ಸಂಗ್ರಹಿಸಲಾದ ನಾರಾಯಣರಾಯರ ೮೫ ಭಕ್ತಿಗೀತೆಗಳನ್ನು ಐದು ಅಂಶಗಳ ಅಡಿಯಲ್ಲಿ ಇನ್ನು ಸ್ವಲ್ಪ ವಿವರವಾಗಿ ಅಭ್ಯಾಸ ನಡೆಸಬಹುದಾಗಿದೆ. ೧. ಮಾನವ ಸ್ವಭಾವ ವಿಶ್ಲೇಷಣೆ ೨. ಭಕ್ತನಲ್ಲಿರಬೇಕಾದ ಸದ್ಗುಣಗಳು ೩. ಪೌರಾಣಿಕ ಸಂಗತಿಗಳ ಬಳಕೆ ೪. ಸಂಗೀತ –ರಾಗ – ತಾಳಗಳ ಸಂಯೋಜನೆ ೫. ದ್ವೈತ ಮತ – ತತ್ವಗಳಲ್ಲಿ ಶ್ರದ್ಧೆ.

೧. ಮಾನವ ಸ್ವಭಾವದ ವಿಶ್ಲೇಷಣೆ

ನಾರಾಯಣರಾಯರಿಗೆ ಮಾನವ ಸ್ವಭಾವದ ಪರಿಚಯ, ಅಭ್ಯಾಸ ಚೆನ್ನಾಗಿ ಇತ್ತು. ಮಾನವ ಸ್ವಭಾವದ ವಿಶ್ಲೇಷಣೆಯನ್ನು ಕೆಲವು ಸಂದರ್ಭಗಳಲ್ಲಿ ಯಶಸ್ವಿಯಾಗಿ ನಡೆಸಿದ್ದಾರೆ. ಉದಾಹರಣೆಗೆ ಮನುಷ್ಯನು ತನ್ನ ಕಷ್ಟ ಕಾಲದಲ್ಲಿ ದೇವರಿಗೆ ಮೊರೆ ಹೋಗುವುದು ಮಾನವನ ಚಿತ್ತ ಚಾಂಚಲ್ಯ, ಪರೋಪಕಾರ ಮಾಡುತ್ತ ಬಾಳುವ ರೀತಿ, ಮಾನವನಲ್ಲಿ ವಿನಯಶೀಲತೆ.

ಉದಾ: ಕಷ್ಟದಲ್ಲಿ

"ಬಾಗುತ ಬೇಡುವೆ ನೀಗು ವಿಘ್ನಗಳ "ಎಂದು ಗಣಪತಿಯನ್ನು ಪ್ರಾರ್ಥಿಸುವುದು (೧) "ಎನ್ನನು ಕಾಡುವಂಥ ದುರಿತವನ್ನು ಕಳೆದು ... "ಎಂದು ಮಾರುತಿಗೆ ಮೊರೆ ಹೋಗುವುದು (೪)

"ಬಡತನದ ಭೂತವ ಎದುರಿಸುವುದು ತಾಯೇ ತಡೆಯಲಾರೆನು ಇನ್ನು ಕರುಣಿಸು ತಾಯೆ" ಎಂದು ಲಕ್ಷ್ಮೀದೇವಿಗೆ ಪ್ರಾರ್ಥಿಸುವುದು (೧೪)

"ನರಳುವ ಕೂಸನು ಚರಣಕೆ ಹಾಕಲು, ಮೊರೆಯಿಡೆ ಕರುಣದಿ ಕರಗಿತು ಹೃದಯ" ಎಂದು ಶ್ರೀರಾಮನನ್ನು ಕೃತಜ್ಞತೆಯಿಂದ ಸ್ಮರಿಸುವುದು (೨೭)

"ಬಡವನು ಮತಿಯೊಳು ಸಿರಿಯೊಳು ಸಹ, ಎನ್ನ ಪಡಿಪಾಟಲನು ಕಡಿದು ಕಾಪಾಡೋ" ಎಂದು ರಾಘವೇಂದ್ರನಲ್ಲಿ ಕೇಳಿಕೊಳ್ಳುವುದು (೩೮)

ಉದಾ : ಚಿತ್ತಚಾಂಚಲ್ಯ

"ಚಂಚಲಿಸಲು ಕೊಡದಿರು ನೀನೆನ್ನ ಮನಕೆ ಶ್ರೀಹರಿಯೆ || ಪ ||
ವಂಚಿಸುತಿಹುದೀ ಮನವು ಸ್ಥಿರಗೊಳಿಸಲರಿಯೆ" (೩) ಎಂದು ಮನಸ್ಸನ್ನು ವಿವರಿಸುವುದು

"ಖೋಡಿ ಮನಸು ಇದು ಓಡಿ ಹೋಗುತದ ಬೇಡೆಂದರು ಕೇಳದು" (೪೩) ಎಂದು ಮನಸ್ಸನ್ನು ವರ್ಣಿಸುವುದು.

"ಮನವೇ ನೀ ಸ್ಥಿರವಾಗಿ ಹರಿಯ ಪಾದಾಂಬುಜವನ್ನು ಸೇರಿ ಅಲ್ಲಿಯೇ ನಿಲ್ಲಯ್ಯ ಬಿಡದೆ || ಪ || ಅನುದಿನ ಸೇವಿಸಲನುವಾಗುವುದಯ್ಯಾ ಘನಚಂಚಲ ನೀನು "(೫೯) ಎಂದು ಮನಸ್ಸಿಗೆ ಕವಿ ಹೇಳುವುದು.

"ನೂರೊಂದು ಒಗಟುಗಳು (೬೨) ಮನಸ್ಸನ್ನು ಆವರಿಸಿರುತ್ತವೆ" ಎಂದು ಹೇಳಲಾಗಿದೆ

ಉದಾ : ಪರೋಪಕಾರ ಮಾಡುತ್ತಾ ಬಾಳುವುದು

ಪರೋಪಕಾರ ಮಾಡುತ್ತ ಬಾಳುವುದೇ ಸಾರ್ಥಕವಾದ ಬಾಳು ಎಂಬುದನ್ನು ಭಕ್ತಿ ಗೀತೆಗಳಲ್ಲಿ ಪ್ರತಿಪಾದಿಸಲಾಗಿದೆ. ಉದಾ :

"ಇತರರ ದುಃಖವ ತನ್ನಿಂದರಿವಾ ಅವನೇ ನಿಜವೈಷ್ಣವಾ" (೧೭) ಎಂದೂ "ಏನು ಮಾಡಿದೆ ಮೂಢ ಮನುಜಾ" (೬೧) ಎಂಬ ಹಾಡಿನಲ್ಲಿಯೂ ಜನಸೇವೆಯ ಕಾರ್ಯದ ಮಹತ್ವವನ್ನ ತಿಳಿಸಲಾಗಿದೆ.

ಉದಾ : ವಿನಯಶೀಲನಾಗಿರಬೇಕು

ವಿನಯ ಗುಣದ ಪ್ರತಿಪಾದನೆ ಹಲವು ಸಂದರ್ಭಗಳಲ್ಲಿ ಮಾಡಿದ್ದಾರೆ. ಉದಾ.

"ರಾಗ ನಿನಗೆಯೆ ಗೊತ್ತು, ತಾಳ ನಿನಗೆಯೆ ಗೊತ್ತು || ರಾಗ ತಾಳಗಳಲ್ಲಿ ಹಗುರಾಗಿ ಹಾಡಲಿಕೆ ತೂಗಿ ಶಬ್ದಗಳಿಡಲು ಸನ್ಮತಿಯ ನೀಡೋ "(೨೮) ಎಂಬಲ್ಲಿ

"ತನು ಮನಗಳಿವು ನಿನ್ನವೆ ನನದೆಂಬುದೇನುಂಟು" (೪೪) ಎಂದು ಹೇಳುವುದರಲ್ಲಿ,

"ಏನು ತಿಳಿಯದವನಾನೀ ಗುಟ್ಟು "(೭೩) ಎಂದು ಸಾರುವುದರಲ್ಲಿ "ಸಾರಾಸಾರ ವಿಚಾರವಿಲ್ಲವೊ ಗಡ, ತೀರ ಅಲ್ಪನು ತಿಳಿ "(೧೭) ಎಂದೂ ಕವಿ ಕಾವ್ಯದಲ್ಲಿ ತನ್ನ ವಿನಯ ಸೂಚಿಸಿ ವಿನಯಗುಣವನ್ನು ಎತ್ತಿ ಹಿಡಿಯುತ್ತಾನೆ.

೨. ಭಕ್ತನಲ್ಲಿರ ಬೇಕಾದ ಸದ್ಗುಣಗಳು

ನಾರಾಯಣರಾಯರು ರಚಿಸಿದ ನಿಜವೈಷ್ಣವಾ ಅವನೇ ನಿಜವೈಷ್ಣವಾ (೧೭) ಎಂಬ ಭಕ್ತಿಗೀತೆಯಲ್ಲಿ ಭಕ್ತನಲ್ಲಿರಬೇಕಾದ ಲಕ್ಷಣಗಳನ್ನು ಸೂಚಿಸಿದ್ದಾರೆ. ಅವರ ಮಾತಿನಲ್ಲಿಯೇ ಅವು ಹೀಗಿವೆ.

೧. ಇತರರ ದುಃಖವು ತನ್ನದೆಂದರಿವಾ

೨. ಸತತದಿ ಸೇವೆಗೆ ತತ್ಪರನಿರುವಾ

೩. ತೊರೆದು ಹೆಮ್ಮೆಯಾ ಸರುವರ ನಮಿಸುವ

೪. ಪರರನು ಜರಿಯಾ

೫. ನಿರುಮಲನಿರುವಾ

೬. ಅನ್ಯ ಸತಿಯರನು ತನ್ನ ತಾಯಿಯೊಲು ಮನ್ನಿಸುತಿರುವಾ

೭. ಸಟೆಯನು ನುಡಿಯಾ

೮. ಪರಧನ ಪಿಡಿಯಾ

೯. ಕಟ್ಟಲಿ ಸಿಕ್ಕದೆ ಸಮಮನಸಿನವಾ

ಇತರೆಡೆಗಳಲ್ಲಿ ಜ್ಞಾನಿಗಳಲ್ಲಿ ವಿನಯ, ಮನಸ್ಸಿನಲ್ಲಿ ಹರಿಭಕ್ತಿ, ಇತರ ಭಕ್ತ ಜನಕ್ಕೆ ಪ್ರಿಯ, ಮನಸ್ಸನ್ನು ಬುದ್ಧಿಯಿಂದ ತಿದ್ದುವ , ಶುದ್ಧ ಭಕ್ತಿಭಾವವುಳ್ಳ, ಮಧ್ವಮತದಲ್ಲಿ ನಿಷ್ಠೆಯುಳ್ಳ ಮುನಿಗಳಿಗೆ ಪ್ರಿಯ, ವಿಷಯ ಭೋಗ ಕಳೆದುಕೊಂಡ, ನಾಮಸ್ಮರಣೆಯಲ್ಲಿ ಭಕ್ತನಿರತನಾಗಿರಬೇಕು ಎಂದೂ ಹೇಳಿದ್ದಾರೆ.

ಮೇಲೆ "ನಿಜವೈಷ್ಣವಾ "(೧೭) ಭಕ್ತಿಗೀತೆಯಲ್ಲಿ ಹೇಳಿದ ಭಕ್ತನ ಸದ್ಗುಣಗಳನ್ನು ಕುರಿತು ಹೇಳಲಾಗಿದೆ.

ಭಕ್ತನು ಆಸೆ - ಆಮಿಷಗಳನ್ನು, ಅರಿಷಡ್ವರ್ಗವನ್ನು ಹಾಗೂ ಮೂರು ತಾಪಗಳನ್ನು (ಆದಿಭೌತಿಕ, ಆಧ್ಯಾತ್ಮಿಕ, ಆದಿದೈವಿಕ) ಗೆದ್ದು ಶ್ರೇಷ್ಠ ಭಕ್ತಿಯನ್ನು ಸಮರ್ಪಿಸುತ್ತಾ ಜನ್ಮಾಂತರದಿಂದ ಮುಕ್ತಿ ಪಡೆಯಲು ಯತ್ನಿಸಬೇಕು ಎಂದು ಭಕ್ತಿಗೀತೆಯಲ್ಲಿ (೬೨) ಹೇಳಲಾಗಿದೆ.

ದೇವರು ಭಕ್ತನನ್ನು ಪರಿಪರಿಯಾಗಿ ಪರೀಕ್ಷಿಸಿದರೂ ಹೆದರದೆ ಅವನಲ್ಲಿ ಅಚಲವಾದ ಶ್ರದ್ಧೆ ಇಟ್ಟುಕೊಂಡಿರಬೇಕು ಎಂದೂ ಭಕ್ತಿಗೀತೆ (೬೩)ರಲ್ಲಿ ಹೇಳಿದೆ.

ಹೀಗೆ ಭಕ್ತನ ನಡೆ - ನುಡಿ ಒಂದಾಗಿದ್ದರೆ ದೇವರು ಒಲಿಯುವನೆಂದು ಅಲ್ಲಲ್ಲಿ ಹೇಳಲಾಗಿದೆ.

ಭಕ್ತನು ಗುರುವಿನ ಮೂಖಾಂತರ ದೇವರನ್ನು ಒಲಿಸಿಕೊಳ್ಳುವುದು ಸುಲಭ ಹಾಗೂ ಸಾಧ್ಯ ಆದ್ದರಿಂದ ಭಕ್ತಾಗ್ರೇಸರ ಹನುಮಂತ (೧೫), ಗುರು ರಾಘವೇಂದ್ರ (೩೮),(೩೯), ಭಾರತೀರಮಣ ಸಮೀರಣ (ಹನುಮ, ಭೀಮ, ಮಧ್ವ), (೪೨) (೩೭) - ಇವರನ್ನು ಕವಿ ಭಕ್ತಿಗೀತೆಗಳಲ್ಲಿ ಮೊರೆಹೋಗುತ್ತಾನೆ.

ಭಕ್ತಿಗೀತೆಗಳಲ್ಲಿ ಕವಿ, ಗದುಗಿನ ವೀರನಾರಾಯಣನಿಗೆ ಶರಣಾಗತನಾಗಿ ಕರುಣೆಯ ಯಾಚನೆ ಮಾಡುತ್ತಾನೆ.

"ಕೃಪೆಯ ಮಾಡಯ್ಯ ನೀ ಭಕ್ತ ವತ್ಸನೆ ... ನಿನ್ನ ನಂಬಿದ
ಜನರನು ಬೆಂಬಿಡದೆ ಕಾಯುವ ನೀ ಕೃಪಾಳೋ "(೨೪) ಎಂದೂ,
"ಶರಣ ಬಂದೆನಯ್ಯ ರಘುಕುಲಸೋಮ "(೨೬) ಎಂದು
"ಇಷ್ಟೇ ಭಕುತಿಯಿಂದ ನೀನು ತುಷ್ಟನಾಗಿ ಸಲಹಬೇಕು" (೨೦) ಎಂಬುದಾಗಿಯೂ,
"ಶರಣ ಬಂದೆನೋ ಹರಿಯ ಶರಣು ಬಂದೆನೊ ಕರುಣದಿ
ನೋಡೆನ್ನ ಸಲಹು "(೪೪) ಎಂದೂ
"ಶಿರಬಾಗಿ ನಿನ್ನ ಚರಣಗಳಿಗೆ ಬಂದಿದೆ ಶರಣ| ನಿರುತ ಧನವಾರೋಗ್ಯವಿತ್ತು ದುರಿತಾಪಹರಣ|| ಪರೀಕ್ಷಿಸಿ ರಕ್ಷಿಸಲು ಬಾರೋ ಕರುಣಾಭರಣ "ಎಂದೂ ತನ್ನ ಶರಣಾಗತಿಯನ್ನು ಕವಿ ಹೇಳಿದ್ದಾನೆ.

ನಾರಾಯಣರಾಯರ ಭಕ್ತಿಗೀತೆಗಳಲ್ಲಿ ಭಕ್ತಿ ಜ್ಞಾನಗಳ ಮೇಳದ ಕುರಿತು ಕೆಲವು ಉದಾಹರಣೆಗಳನ್ನು ಕೊಡಬಹುದಾಗಿದೆ.

"ಪಕ್ಕದೊಳೆಲ್ಲೆಲ್ಲೂ ಹರಿತುಂಬಿಹನಕ್ಕ || ಅ.ಪ || ಅಡಗಲು ಎಲ್ಲೆಲ್ಲೂ ಸ್ಥಳವಿಲ್ಲವಕ್ಕ| ಜಡ ಜೀವಗಳೊಳು ತೋರುವನಕ್ಕ || ೧ || ಸಕಲರಿಗವನು ಕಾಣನು ತನ್ನ ಭಕ್ತ ರಿಗಷ್ಟೇ ಕಾಣುವನಕ್ಕ || ೨|| ... ಭಕ್ತಿಯೊಳರಸಲು ಇಲ್ಲೇ ಸಿಗುವನಕ್ಕ "|| ೩|| (೮)
"ಪುಟ್ಟಿಬಂದಿಹೆಯಾ ಕಿಟ್ಟಯ್ಯ || ಪ || ಕೆಟ್ಟ ಲೋಕವನೆಲ್ಲ ನೆಟ್ಟನೆ ತಿದ್ದಲು (೯)"
"ಎಡೆಗಿದ್ದರು ಗಡ ಅಡಗಿಹನಲ್ಲೆಂದು ಹುಡುಕುತ ಕೇಳುವ ಜಡಮತಿ ನಾನು (೩೪)"

"ತಿಳಿಯುವವ ನೀನೆಯೋ, ತಿಳಿಸುವವ ನೀನೆಯೋ ||ಬೆಳೆಯಿಸುವವ ನೀನೆಯೋ, ಕಳೆಯುವವ ನೀನೆಯೋ, ಕೊಳುವವನು ನೀನೆಯೋ, | ಕಸಿವವನು ನೀನೆಯೋ ||೨||(೪೯)
ಜ್ಞಾನದ ಖಣಿಯಿಂದ ಅಗೆದು ಮನಸಿನ ಹೀನ ಕಸವನ್ನೆಲ್ಲ ತೆಗೆದು ||
ಧ್ಯಾನ ಕುಂದಣದಿಂದ ಗುಟ್ಟಾಗಿ ಬಗಿದು ಮಾನಸಬಂಡಾರದೊಳಗಿಡಲು ಬಗೆದು || (೭೫)

– ಹೀಗೆ ಭಕ್ತಿ ಜ್ಞಾನಗಳ ಮೇಳವಿಕೆ ಭಕ್ತನಲ್ಲಿ ಅಗತ್ಯವಾಗಿ ಇರಬೇಕೆಂಬುದನ್ನು ಮಾರ್ಮಿಕವಾಗಿ ನಾರಾಯಣರಾಯರು ನಿರೂಪಿಸಿದ್ದಾರೆ.

೩. ಪೌರಾಣಿಕ ಸಂಗತಿಗಳ ಬಳಕೆ

ನಾರಾಯಣರಾಯರು ತಮ್ಮ ಭಕ್ತಿಗೀತೆಗಳಲ್ಲಿ ಹಲವು ಪೌರಾಣಿಕ ಅಂಶಗಳನ್ನು ಬಳಸಿಕೊಂಡಿದ್ದಾರೆ. ವಿಷ್ಣು ಹಾಗೂ ಅವನ ವಿವಿಧ ಅವತಾರಗಳು (ವೀರ ನಾರಾಯಣನೇರಿದಂತೆ) ಮಹಾಲಕ್ಷ್ಮಿ, ವಿಷ್ಣುವಿನ ಸೇವಕರು, ದಾಸರು, ಹಾಗೂ ಭಕ್ತರೆಲ್ಲರ ಬಗೆಗೂ ಉಲ್ಲೇಖಗಳಿವೆ.

ವಿಷ್ಣು ಹಾಗೂ ಅವತಾರಗಳ ಬಳಕೆಗೆ ಕೆಲವು ಉದಾಹರಣೆ ಹೀಗಿವೆ :
"ಸಿರಿಯು ತಾನೆ ನಿಂತು ನಿನ್ನ | ನಿರುತ ಸೇವೆ ಗೆಯ್ಯುತಿಹಳೋ "(೪೯)
"ಪಾವು ಮಂಚವ (ಶೇಷಶಾಹಿ) ಬಿಟ್ಟು ಬೇಗೆದ್ದು ಬಾರೋ, "(೫)
"ಇಲ್ಲೆ ಗದುಗಿನಲ್ಲೆ ಬಂದು ನಿಂತಿಹನಕ್ಕ | ಬಲ್ಲ ವೀರನಾರಾಯಣನಕ್ಕ"(೮)
"ಧನವಕೊಟ್ಟು ನಿನ್ನೊಲಿಸೇನೆಂದರೆ ಲಕ್ಷ್ಮೀಪತಿ ನೀನಹುದೋ " (೨೨)

ರಾಮಾವತಾರದ ಸಂದರ್ಭಗಳನ್ನು ಸ್ಮರಿಸುವುದು ರಘುನಂದನನ" ಎಂಬ ಭಕ್ತಿಗೀತೆಯಲ್ಲಿ ಕಾಣಬಹುದು. ಸೀತಾಸ್ವಯಂವರ, ಅಹಲ್ಯೋದ್ಧಾರ, ತಂದೆ ಕೊಟ್ಟ ವಚನ ಪಾಲನೆಗಳ ವರ್ಣನೆ ಇದೆ.

ಕೃಷ್ಣಾವತಾರದ ಹಲವಾರು ಸನ್ನಿವೇಶಗಳ ಉಲ್ಲೇಖವಿದೆ. ಕೃಷ್ಣನ ಕೊಳಲಿನ ಆನಂದ (೧೬) 'ಬಿಡಬೇಡೋ ರಂಗ ಬಿಡಬೇಡೋ' ಎಂಬ ಹಾಡಿನಲ್ಲಿ, ಕೇಳಿಸಲೊಲ್ಲದೇನೋ ಕೃಷ್ಣಾ (೧೯) ಎಂಬ ಹಾಡಿನಲ್ಲಿ, 'ಗೊಲ್ಲ ಕೃಷ್ಣ ಬಾರಾ' ಎಂದು ಕರೆದರೂ ಕೃಷ್ಣನು ಬರುವನು ಎಂಬುದನ್ನು 'ಕಂಸಾರಿಯೇ ನೀನೆ ಭಾರ ಹೊತ್ತವ' ಎಂಬುದನ್ನು 'ಗೋಪನೆ ಎಲ್ಲಕೂ ಕರ್ತೃ ನೀನಲ್ಲವೇ' (೨೪) ಎಂಬಲ್ಲಿ , 'ಸುಕುಮಾರವ್ಯಾಸನಿಗೆ ವರವಿತ್ತು ಉರುತರದ ಕನ್ನಡದಿ ಭಾರತವ ಬರೆಯಿಸಿದೆ '

(೧೯) ಎಂದು ವೀರನಾರಾಯಣನನ್ನು ಕೊಂಡಾಡುವಲ್ಲಿ, 'ರಜತ ನದಿಯ ಹೆತ್ತ ಚರಣ, ಕಲ್ಲಹಲ್ಯೆ ತೊರೆದ ಚರಣ ||೨||ಕುರು ನೃಪನನು ಕೆಡೆದ ಚರಣ | ಉರಗ ಕಾಳಿ ಹಣಿದ ಚರಣ '(೨೯) ಎಂದು ವಿಷ್ಣು (ಕೃಷ್ಣ) ಪಾದದ ವರ್ಣನೆಯಲ್ಲಿ, 'ಎಂಥ ಧನ್ಯಳೇ ಯಶೋದೆ' ಎಂಬ ಗೀತೆಯಲ್ಲಿ ಕಂತುಪಿತನು ಕುವರನಾಗಿ (ಯಶೋಧೆಗೆ) ಸಂತೋಷವ ಪಡಿಸಿದನು ಎಂದು ವರ್ಣಿಸುವಲ್ಲಿ, ಬಾಲಕೃಷ್ಣನನ್ನು ಕೊಳಲದನಿ ಕೇಳಿ ಪ್ರೀತಿಸುವ, ಮುದ್ದಿಸುವ ನಿರೂಪಣೆಯಲ್ಲಿ (೫೧) ಯಶೋಧೆಗೆ ಬಾಲ ಕೃಷ್ಣನ ಕುರಿತಾದ ದೂರುಗಳು (೮೧) ದ್ರೌಪದಿಯ ಮಾನ ರಕ್ಷಣೆ ಮಾಡಿದ ಪ್ರಸಂಗ, ಕೃಷ್ಣನ ಕೊಳಲ ಗಾನದ ಮೋಹಕತೆ (೮೪) ಅರ್ಜುನನಿಗೆ ಗೀತೆಯನ್ನು ಬೋಧಿಸಿದ ವರ್ಣನೆ ಇತ್ಯಾದಿ ಹಲವಾರು ಉಲ್ಲೇಖಗಳು ಕೃಷ್ಣಾವತಾರದ ಬಗ್ಗೆ ಇದೆ.

ಮಹಾಲಕ್ಷ್ಮಿ ಹಾಗೂ ಅವಳ ಅವತಾರಗಳ ಬಗ್ಗೆ ಕೆಲವು ಭಕ್ತಿಗೀತೆಗಳಲ್ಲಿ ವರ್ಣಿಸಲಾಗಿದೆ. ಕೆಲವು ಉದಾ. ಹೀಗಿವೆ :-

"ಗದುಗಿನ ವೀರನಾರಾಯಣನ ಜಾಣೆ ಕೊಡು ನೀ ವರವನು ವಿಠಲನ ರಾಣಿ" ಎಂದು (೧೪) ಕೊಲ್ಲಾಪುರದ ಲಕ್ಷ್ಮಿಯನ್ನು ಕುರಿತು ಹೇಳಲಾಗಿದೆ. 'ಸಿರಿಯು ತಾನೆ ನಿಂತು ನಿರುತ ಸೇವೆಗೆಯ್ಯುತಿಹಳೋ' ಎಂದು (೫೦) ಲಕ್ಷ್ಮಿಯು ಮಾಡುತ್ತಿದ್ದ ವಿಷ್ಣುವಿನ ಸೇವೆಯ ಬಗ್ಗೆ ಹೇಳಲಾಗಿದೆ.

ಲಕ್ಷ್ಮಿಯನ್ನು ಇಂಗಡಲ ಕುವರಿ ಎಂಬಲ್ಲಿ (೮೫) ಸುಮದ್ರ ಮಂಥನದ ಸೂಚನೆಯೂ ಇದೆ. ಲಕ್ಷ್ಮಿಯನ್ನು 'ರಂಗನಾಥನ ರಾಣಿ', 'ಮಹಾಲಕ್ಷ್ಮಿ ವೀರನಾರಾಯಣನ ಪ್ರೇಮದ ಮಡದಿ 'ಎಂದೂ ಹೇಳಲಾಗಿದೆ.

ವಿಷ್ಣುವಿನ ಹಾಗೂ ಅವನ ಇತರ ಅವತಾರಗಳಲ್ಲಿ ಬರುವ ಸೇವಕರು, ದಾಸರು ಭಕ್ತರ ಕುರಿತಾದ ಪೌರಾಣಿಕ ಅಂಶಗಳೂ ಭಕ್ತಿಗೀತೆಗಳಲ್ಲಿವೆ. ಉದಾ :

ಹನುಮಂತನು ಸೀತೆಯನ್ನು ಶೋಧಿಸಲೆಂದು ಕಡಲು ಜಿಗಿದ ಪ್ರಸಂಗ (೬) (೧೫) ಮಾರುತಿಯ ಮುಖಾಂತರ ಹರಿಯನ್ನು ಕಾಣುವ ಬಯಕೆ (ಮಾರುತಿ ರಾಮದೂತ) (೨೦) ಹನುಮಂತನು ಮಾಡಿದ ಸಾಹಸಗಳ ವರ್ಣನೆ (೫೭) ಯಲಗುರೇಶನಾಗಿ ಹನುಮಂತ ಅವತರಿಸಿದ ವರ್ಣನೆ (೭೯) ಇತ್ಯಾದಿ ಹನುಮಂತನ ಕುರಿತಾದ ಪೌರಾಣಿಕ ಪ್ರಸಂಗಗಳ ವರ್ಣನೆ ಭಕ್ತಿಗೀತೆಗಳು ಬರುತ್ತದೆ.

ಹಾಗೆಯೇ ಪುರಂದರದಾಸರ (೧೩) (೫೨) ಕನಕದಾಸರ ಬಗ್ಗೆ (೫೩)

ಉಲ್ಲೇಖಗಳೂ ಭಕ್ತಿಗೀತೆಗಳಲ್ಲಿವೆ. ರಾಘವೇಂದ್ರರನ್ನು ಶರಣುಹೋಗುವ (೩೭,೩೮,೩೯) ಭಕ್ತಿಗೀತೆಯೂ ಇದೆ.

೪. ಸಂಗೀತ - ರಾಗ, ತಾಳಗಳ ಸಂಯೋಜನೆ

ದಾಸ ಪರಂಪರೆಗೆ ಅನುಗುಣವಾಗಿ ನಾರಾಯಣರಾಯರು ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಭಕ್ತಿಗೀತೆಗಳಿಗೆ ಶೀರ್ಷಿಕೆಗಳನ್ನು ಕೊಟ್ಟಿಲ್ಲ. ಆದರೆ ರಾಗ - ತಾಳ ಸೂಚಿಸಿ ಅವುಗಳಿಗೆ ಅನುಗುಣವಾಗಿ ಭಕ್ತಿಗೀತೆ ರಚಿಸಿದ್ದಾರೆ. ನವೋದಯ ಕಾಲದ ಪ್ರಾರಂಭದಲ್ಲಿ ಸಾಹಿತ್ಯ ರಚನೆಗೆ ತೊಡಗಿದ ನಾರಾಯಣರಾಯರು ಪರಂಪರಾ ಪ್ರಿಯರು. ತಮ್ಮ ಕಾವ್ಯದಲ್ಲಿ ಪ್ರಾಸಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಅಲ್ಲದೆ ಪ್ರಾಸವನ್ನು ಬಿಡಬಾರದೆಂಬುದು ಅವರ ಅಭಿಪ್ರಾಯವಾಗಿತ್ತು. ಭಕ್ತಿಗೀತೆಗಳಲ್ಲಿ ಪ್ರಾಸವಿದೆ. ಪಲ್ಲವಿ (ಹಾಗೂ ಕೆಲವೆಡೆ ಅನುಪಲ್ಲವಿ) ಗಳಿಂದ ಪ್ರಾರಂಭವಾಗುವ ನಾರಾಯಣ ರಾಯರ ಭಕ್ತಿಗೀತೆಗಳಲ್ಲಿ ಕೆಲವು ಚಿಕ್ಕವು, ಕೆಲವು ಬಹಳ ದೊಡ್ಡವು ಹಾಗೂ ಹೆಚ್ಚಿನವು ಮಧ್ಯಮ ಗಾತ್ರವಾಗಿವೆ. ಎಂಟರಿಂದ ಮೂವತ್ತೇಳು ಸಾಲುಗಳಷ್ಟು ಗಾತ್ರ ಭಕ್ತಿ ಗೀತೆಗಳು ಪಡೆದಿವೆ. ಸಾಮಾನ್ಯವಾಗಿ ೩,೪,೫ ನುಡಿಗಳುಳ್ಳ ಭಕ್ತಿಗೀತೆಗಳು ಹೆಚ್ಚು. ಭಕ್ತಿ ಗೀತೆಗಳಲ್ಲಿ ರಾಗ - ತಾಳಗಳ ಕಡೆಗೆ ಗಮನವಿತ್ತರೆ ನಾರಾಯಣರಾಯರಿಗೆ ದಕ್ಷಿಣಾದಿ ಹಾಗೂ ಉತ್ತರಾದಿ ಸಂಗೀತಗಳ ಪರಿಚಯವಿದ್ದಿತೆಂಬುದು, ಕಂಡುಬರುತ್ತದೆ. ಒಂದೆರಡು ಕಡೆಗಳಲ್ಲಿ ಪುರಂದರದಾಸರ 'ಇಂಥ ಹಾಡಿನಂತೆ 'ಎಂದೂ ರಾಗ - ತಾಳಗಳ ಸೂಚನೆ ಕೊಟ್ಟಿದ್ದಾರೆ. ಈ ಭಾಗದಲ್ಲಿ ಸಮಾವೇಶವಾದ ಒಂದು ಲಾವಣಿ ಹಾಡಿನಲ್ಲಿ 'ದುಡುಕು' ಹಾಡುವ ರೀತಿಯನ್ನೂ ಸೂಚಿಸಿದ್ದಾರೆ. ನಾರಾಯಣರಾಯರು ಅನುಪ್ರಾಸವನ್ನು ಸಹಜವಾಗಿ ಬಳಸಬಲ್ಲವರಾಗಿದ್ದರು ಎಂದು ಧಾರಾಳವಾಗಿ ಹೇಳಬಹುದು.

೫. ದ್ವೈತ ಮತ್ತು ತತ್ವಗಳಲ್ಲಿ ಶ್ರದ್ಧೆ

ನಾರಾಯಣರಾಯರು ದ್ವೈತ ಮತಾವಲಂಬಿಯಾಗಿದ್ದರೂ ಪರ ಮತ ವಿರೋಧಿಯಾಗಿರಲಿಲ್ಲ. ಇದು ಅವರ ಜೀವನದಿಂದ ವ್ಯಕ್ತವಾಗುಂತೆ ಅವರ ಭಕ್ತಿಗೀತೆಗಳಲ್ಲಿಯೂ ಪಡಿ ಮೂಡಿಬಂದಿದೆ. ಗದುಗಿನ ವೀರನಾರಾಯಣನ ಪರಮ ಭಕ್ತರಲ್ಲಿ ನಾರಾಯಣರಾಯರು ಗಣ್ಯರು.

ಕುಮಾರವ್ಯಾಸನ ನಂತರ ಗದುಗಿನ ವೀರನಾರಾಯಣನನ್ನು ತಮ್ಮ ಕಾವ್ಯದಲ್ಲಿ ಸ್ಮರಿಸಿದ ಕೀರ್ತಿ ನಾರಾಯಣರಾಯರಿಗೆ ಸಲ್ಲುತ್ತದೆ. ಭಕ್ತಿಗೀತೆಗಳಲ್ಲಿ ಸ್ಮರಿಸಿದ್ದಾರೆ,

ಅಂಕಿತವನ್ನಾಗಿ ವೀರನಾರಾಯಣನನ್ನೇ ಇಟ್ಟುಕೊಂಡಿದ್ದಾರೆ. ಹರಿಪಾರಮಾತ್ಮ ಅವರ ಹೆಚ್ಚಿನ ಭಕ್ತಿಗೀತೆಗಳಲ್ಲಿ ವ್ಯಕ್ತವಾಗಿದೆ. ವಿಷ್ಣು ಹಾಗೂ ವಿಷ್ಣುವಿನ ಅವತಾರಗಳು ಹಾಗೂ ವಿಷ್ಣುವಿನ ಸೇವಕರು, ದಾಸರು, ಭಕ್ತರು, ಇವರ ಬಗ್ಗೆ ಈಗಾಗಲೇ ಕಂಡುಕೊಂಡಿದ್ದೇವೆ. ಆ ಪೌರಾಣಿಕ ಅಂಶ-ಸಂಗತಿಗಳ ವರ್ಣನೆಯ ಸಂದರ್ಭದಲ್ಲಿ ಹರಿಪಾರಮಾತ್ಮ ಎದ್ದು ಕಾಣುತ್ತದೆ. ಮಹಾಲಕ್ಷ್ಮಿ ಹಾಗೂ ಇತರ ದೇವತೆಗಳು, ರಾಘವೇಂದ್ರರಾಯರು ಇವರ ಕುರಿತು ಗಮನಿಸಿದಾಗಲೂ ಅಲ್ಲಿ ದ್ವೈತ ಮತದ ಛಾಯೆ ಇದ್ದುದು ಕಂಡುಬರುತ್ತದೆ ಹರಿಪಾರಮಾತ್ಮ್ಯದ ಕುರಿತು ಕೆಲವು ಉದಾ ಹೀಗಿವೆ :-

ಎಲ್ಲವೂ ಹರಿಯಿಂದ ಸಾಧ್ಯ, ಹರಿಸ್ವತಂತ್ರ, ಸರ್ವೋತ್ತಮ , ಭಕ್ತನಿಗೆ ಅವನ ಕರುಣೆ ಅವಶ್ಯಕ (೩) ಎಂಬುದು ವ್ಯಕ್ತವಾಗಿದೆ.

"ನಿನ್ನ ದಯವಿರದಿರೆ ಕಣ ।ಲವ ಸಹ ಸರಿಯದಯ್ಯಾ"(೬) ಎಂಬಲ್ಲಿಯೂ ಅದೇ ವಿಚಾರವಿದೆ.

"ಭೂಮಿ ಆಕಾಶದಿ ಸಕಲವನು ವ್ಯಾಪಿಸಿದ "(೩೧) ಎಂದು ವರ್ಣಿಸುವಲ್ಲಿ

"ಇಡಿಯ ಜಗವನುದರದಲಿ ।ಹಿಡಿದು ಬಾಲನಾಗಿ ಗದುಗಿನೊಡೆಯ ವೀರನಾರಾಯಣ (ಯಶೋದೆಯ) ತೊಡೆಯ ಮೇಲೆ ಆಡಿದನು "(೩೨) ಎಂದೂ,

"ಜಗವನು ತುಂಬಿದ ತ್ರಿಗುಣಾತ್ಮಕನೇ "(೩೪) ಎಂದು ಸಂಬೋಧಿಸುವಲ್ಲಿಯೂ

"ಬೊಮ್ಮಾದಿ ದೇವತೆಗಳು ಅಮ್ಮ ಲಕುಮಿಯು ಸಹ ನಿಮ್ಮನ್ನು ತಿಳಿಯರಿನ್ನು ತಿಳಿವ ಹಮ್ಮು ನನಗೇಕೆ ಶೌರೇ "(೩೬) ಎಂಬಲ್ಲಿಯೂ,

"ಸೃಷ್ಟಿ ಸ್ಥಿತಿ ಲಯ ಕಾರಣ ಸೃಷ್ಟಿಯೊಳಗೆ ಉತ್ಕೃಷ್ಟ ಗದುಗಿನ ವೀರನಾರಾಯಣ "(೪೮) ಎಂಬಲ್ಲಿಯೂ

"ಗೋಪನೆ ಎಲ್ಲಕ್ಕೂ ಕರ್ತೃ ನೀನಲ್ಲವೆ "(೨೪) ಎಂಬಲ್ಲಿಯೂ

"ಲೋಕೈಕ ದೇವನೆಂದು ಜ್ಞಾನಿಗಳೇಕಾಗಿ ಸಾರ್ವರಿಂದು ‖ ಆಕಾರ ರಹಿತನ ಲೋಕ ಸಾಮಾನ್ಯರು ಸ್ವೀಕರಿಸರು "(೩೦) ಎಂದು ವರ್ಣಿಸುವಲ್ಲಿ

"ನೀ ಕೊಟ್ಟರುಂಟು ಕೊಡದಿದ್ದರೇನುಂಟು "(೧೭೩) ಎಂದು ವಿವರಿಸುವಲ್ಲಿಯೂ ದ್ವೈತ ಮತ ತತ್ವಗಳಲ್ಲಿಯ ನಾರಾಯಣರಾಯರ ಶ್ರದ್ಧೆ ವ್ಯಕ್ತವಾಗಿದೆ.

ವಾಯು ಜೀವೋತ್ತಮ :- ಮೂಲಗುರುವಾದ ವಾಯುದೇವರ ಮತದಂತೆ ಪರಾಪರ ತತ್ವಜ್ಞಾನ ಅರಿತುಕೊಳ್ಳಬೇಕೆಂಬ ವಿಚಾರವೂ ದ್ವೈತ ಮತಕ್ಕನುಗುಣವಾಗಿದೆ.

ಉದಾ :- "ಹರಿಯನ್ನು ನಿನ್ನದೆ ಪರಿ ಮುಖದಿಂದಲೇ ಸರುವರು ಕಾಣಬೇಕೆಂಬರು ನೋಡೋ " (೧೬)

"ಭಾರತಿ ರಮಣ ಸಮೀರಣ ನಿನ್ನಯ ಚಾರು ಲೀಲೆಯನೆಂತು ಬಣ್ಣಿಪೆ || ಪ || ಮೂರು ಯುಗಗಳಲಿ ಮೂರವತಾರದಿ ||ಮೂರು ನಾಮಗಳಲಿ (ಹನುಮಂತ, ಭೀಮ, ಮಧ್ವ) ಮೂರು ವೇಷಣಗಳಲಿ, ಮೂರು ಕ್ರಮಗಳ ಮೂರು ಧರ್ಮಗಳ ಮೂರು ಲೋಕಕೆ ತಿಳಿಸಿದ ಮೂರುತಿಯೆ "ಎಂದು (೪೨) ವರ್ಣಿಸುವಲ್ಲಿ.

"ಪ್ರಾಣದೇವ ಕಾವುದೆಮ್ಮ ಜೀವೋತ್ತಮಾ" ಎಂದೂ ವಾಯುಜೀವೋತ್ತಮನ (ಗುರುವಿನ) ಮುಖಾಂತರ ದೇವರನ್ನು ಅರಿಯಲು ಸಾಧ್ಯ ಎಂಬುದನ್ನು ಹಲವಾರು ಭಕ್ತಿಗೀತೆಗಳಲ್ಲಿ ಪ್ರತಿಪಾದಿಸಿದ್ದಾರೆ.

ಹೀಗೆ ಸುಲಭವಾದ, ಸರಳವಾದ, ಅಲ್ಲಲ್ಲಿ ಉತ್ತರ ಕರ್ನಾಟಕದ (ಗದುಗಿನ) ಪ್ರಾದೇಶಿಕ ಮೆರುಗನ್ನು ಮಿಂಚಿಸುವ ಭಾಷೆಯಲ್ಲಿ, ಗೂಢವಾದ ಹಾಗೂ ಸಹಜವಾದ ಭಾವಗಳನ್ನು ಭಕ್ತಿಗೀತೆಗಳಲ್ಲಿ ವ್ಯಕ್ತಗೊಳಿಸಿದ್ದಾರೆ. ಹೀಗೆ ಮಾಡುವ ಸಾಮರ್ಥ್ಯ ಬಹುಶಃ ಅವರ ವೀರನಾರಾಯಣನಲ್ಲಿಯ ಭಕ್ತಿಯಿಂದಲೇ ಬಂದಿರಬೇಕೆಂದೆನಿಸುತ್ತದೆ. ಅಂಥ ಸದ್ಭಕ್ತರು, ದೇವರ ಅವತಾರಗಳನ್ನು ವರ್ಣಿಸುವಲ್ಲಿ, ಅಲಂಕಾರಗಳನ್ನು ಬಳಸುವಲ್ಲಿ ಪೌರಾಣಿಕ ಪ್ರಸಂಗಗಳನ್ನು ಸಂಕ್ಷಿಪ್ತವಾಗಿ ಸೂಚಿಸುವಲ್ಲಿ, ಇಂಪಾದ ಶಬ್ದಗಳ ಜೋಡಣೆಯಲ್ಲಿ ದಾಸ ಪರಂಪರೆಗೆ ಯೋಗ್ಯರಾದವರು ಎಂದೆನಿಸುವಂತೆ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ದಾಸ ಸಾಹಿತ್ಯದ ಕೊನೆಯ ಕೊಂಡಿ ಎಂದು ಆಗ ನಾರಾಯಣ ರಾಯರನ್ನು ಗುರುತಿಸಲಾಗಿತ್ತು.

ನಾರಾಯಣರಾಯರ ಕೆಲವು ಭಕ್ತಿಗೀತೆ (ಕೀರ್ತನೆ)ಗಳನ್ನು ಸ್ಮರಿಸಿ ಈ ಲೇಖನವನ್ನು ನಿಲ್ಲಿಸಿದರೂ ಲೇಖನ ಅಪೂರ್ಣ ಎನಿಸುತ್ತದೆ.

೧. ರಾಗ : ರೇಗುಪ್ತಿ ತಾಳ : ಅಟತಾಳ

ಕೇಳಿಸಲೊಲ್ಲದೇನೋ |ಕೃಷ್ಣಾ ಕೇಳಿ | ಕೇಳದಂತಿರುವೆಯೇನೋ ?|| ಪ ||
ಬಾಳುವೆಯೊಳು ಬಲು | ಕೀಳಾದೆ ನಾನಿಂತು | ಏಳಿಸೆನ್ನನು ಎಂದು ಕೇಳಿ
ಕೊಳ್ಳುವುದಿನ್ನು || ಅ.ಪ ||

ಯಾವತ್ತು ತಿಳಿದವನು। ಎಂಬರು ನನ್ನ । ನೋವು ತಿಳಿಯದಾಯ್ತೇನು?॥
ಸಾವಿರ ಕಿವಿಗಳಿದ್ದೆನ್ನಯ ಪಾಲಿಗೆ । ದೇವಾ ಅವೆಲ್ಲವು ಕಿವುಡಾದವೇನೊ ॥ ೧ ॥
ವಿಶ್ವವನು ತುಂಬಿ । ನಿಂತಹನೆಂಬೀ । ಭಾವಕೆ ನೀನೇನೆಂಬಿ
ಆವಾವ ಜೀವರ ಭಾವವನರಿತು ನೀ ।ಕಾವುದಂತೆಂಬೊ ಈ ವಚನವು ನಿನಗೆ ॥ ೨ ॥
ಭೇದ ಭಾವವು ಇಲ್ಲೆಂದು ।ಸಾಧಿಸುವುವು । ವೇದಗಳೆಲ್ಲವಿಂದು
ಬಾಧೆಯ ಬಿಡಿಸೆಂದು ಬೇಡುವ ಗದುಗಿನ ಆಧಾರಿ ದೇವನೆ ವೀರನಾರಾಯಣ (೧೯)
॥ ೩ ॥

೨. ರಾಗ : ಕಾಂಬೋದಿ   ತಾಳ : ಝಂಪಾ

ಏಕೆ ಬೇಕಾಗಿತ್ತೊ ನಿನಗೆ ಈ ಆಟ ।
ಲೋಕೇಶ ಸಾಕಯ್ಯ ಇಲಿ ಬೆಕ್ಕಿನಾಟ ॥ ಪ ॥
ಸುಷ್ಟು ಜಲಧಿಶಯನ ಬಿಸುಟು ಬಿಡಲ್ಯಾಕೆ ।
ಸೃಷ್ಟಿಸುವುದು ಮೊದಲ್ಯಾಕೆ ಸೃಷ್ಟಿಸಲು ಪ್ರಾಣಿಗಳ ॥
ಕಷ್ಟಪಡಿಸುವುದ್ಯಾಕೆ ಕಷ್ಟವನು ನೋಡಿ ।
ತುಷ್ಟಿಪಡುವುದು ಯಾಕೆ ಇಷ್ಟ್ಯಾಕೆ ಬಯಕೆ ॥ ೧ ॥

ಸ್ವರ್ಗನರಕಗಳೇಕೆ ಜನ್ಮ ಜನ್ಮಾಂತರದ ।
ವರ್ಗಮಾಡುವುದೇಕೆ ಪಾಪಪುಣ್ಯಗಳೇಕೆ ॥
ದುರ್ಗಮದ ವೈಕುಂಠದಾಸೆ ತೋರುವುದೇಕೆ ।
ನಿರ್ಗುಣನೆ ಸಲ್ಲದೀ ಉದ್ಯೋಗವ್ಯಾಕೆ ॥ ೨ ॥

ಉದಧಿಶಯನದೊಳಾತ್ಮನಂದದಲಿ ಮುಳುಗಿ ।
ಹೃದಯದೊಳು ನೀನೊಂದು ನೀನೆಯೇ ನೀನಾಗಿ ॥
ಮೋದ ಪಡುವುದು ಬಿಟ್ಟು ವೀರನಾರಾಯಣನೆ ।
ಗದುಗಿನೊಳು ಬಂದಿಲ್ಲಿ ನಿಂತಿರುವುದೇಕೇ ॥ ೩ ॥

೩. ರಾಗ :ಮುಖಾರಿ ತಾಳ : ತ್ರಿಪುಟ

ಯಾವಲ್ಲಿ ಅಡಗಿರುವಿ | ಕೃಷ್ಣಯ್ಯನೀ |ನಾವಲ್ಲಿ ಅಡಗಿರುವಿ || ಪ ||
ಯಾವಲ್ಲಿ ಅಡಗಿರುವಿ | ಯಾವಲ್ಲಿ ಹುಡುಕಲಿ |ಭಾವದ ಮೂಲೆಯ ಠಾವ ಬಿಟ್ಟು
ಕಣ್ಣು ಮುಚ್ಚಾಲೆಯಾಟ| ಬೇಡಯ್ಯ ಈ | ಬಣ್ಣದ ನುಡಿಯ ಬೇಟ ||
ಕಣ್ಣು ಮುಚ್ಚಲು ಕೊಟ್ಟೆ |ಟಣ್ಣನೆ ಜಿಗಿದೋಟ | ಅಣ್ಣಾ ಹುಡುಕಿ ಹುಡುಕಿ | ಹಣ್ಣಾಗಿ
ಹೋದೆನೋ || ೧ ||
ಎಲ್ಲೆಲ್ಲೂ ತುಂಬಿರುವೆ | ಹುಡುಕಲು ನೀ | ಎಲ್ಲೆಲ್ಲೂ ಸಿಗದಿರುವೆ ||
ಕ್ಷುಲ್ಲಕೆನ್ನನ್ನನು | ಚಲ್ಲದೆ ನನ್ನೆದಿರು | ಚೆಲ್ವರೂಪದೆ ಬಂದು | ನಿಲ್ಲುದನ್ನು
ಬಿಟ್ಟು || ೨ ||
ಕಡುಕಷ್ಟ ಹುಡುಕುವುದು | ಮನವಿದು ನಿನ್ನ | ಹಿಡಿಯಲು ದುಡುಕುವುದು ||
ಹಿಡಿದು ಹಿಡಿದು ತಂದು |ಒಡಲಲ್ಲಿಡಲು ಮತ್ತು | ಒಡನೆ ನುಸುಳಿಕೊಂಡು
ಬಿಡದಮೇಲೋಡಿ ||೩ ||
ಇದೀಗ ಕರೆದು ತಂದು | ನೆನೆಯಲು ನಿನ್ನ | ಸದಾವಕಾಲಕೆಂದು |
ಹೃದಯ ಗವಿಯೊಳು| ಮುದದಿ ಕೂಡಿಸಿ ಮೇಲೆ |ಬದಿಗೆ ಕಾವಲವಿಟ್ಟು ಮನವಟೋಣೆದು
ನೀ ||೪||
ಬದರಿ ಕಾಶಿ ಕಂಚಿಯೋ | ನೀನಿರುವುದು | ಮಧುರೆ ಪಂಢರಪುರವೋ||
ಪದುಮಾವತಿ ಗಿರಿಯೋ | ಉಡುಪಿ ದ್ವಾರಕೆಯೊ |ಗದುಗೊ, ಗದುಗೊನೀ ಹೇಳಯ್ಯ
ವೀರನಾರಾಯಣ ||೫||

೪. ರಾಗ : ಕಮಾಚ ತಾಳ : ರೂಪಕ

-ಕಾಲ ಬೆರಳು ಬಾಯೊಳೇತಕೋ | ರಂಗಯ್ಯ ನಿನ್ನ || ಪ ||
ಸಾಲದಾಯ್ತೆ ಭಕ್ತರಿತ್ತ |(ದುಡುಕು) ಕಾಲೋಚಿತ ಶಾಲ್ಯನ್ನವು ಹಾಲೋಗರ ಭಕ್ಷ್ಯಂಗಳು
ಆಲದೆಲೆಯ ಮೇಲೆ ಮಲಗಿರೋ |ಚೆಲುವ ನಿನ್ನ| ಕಾಲುಚಾಚಲನುವೆ ಇಲ್ಲವೆ
ಬಾಲ ನಿನ್ನ ನಾಭಿಕಮಲ |(ದುಡುಕು) ಕಾಲವಾಲದಲ್ಲಿ ಗಂಗೆಜಲವ ಬಿಡುತಲಿರುವೆ
ಯೇನು || ೨ ||

ಹಸಿವೆ ಬಹಳವಾಗಿರುವುದೆ | ನಿನ್ನಮ್ಮ ಆ | ಯಶೋದೆ ನಿನಗೆ ಮೊಲೆಯನುಣಿಸಳೆ ನಿಶಾಚರಿ ಪೂತನಿಯ ಮೊಲೆಯ |(ದುಡುಕು) ವಿಷವನುಂಡ ಕಾರಣದಲಿ ನೀರಡಿಸುತಲಿರುವೆ ಯೇನು

ಹಸುಳ ನಿನ್ನ ಪದದೊಳಿಡುತಿಹ |ಭಕ್ತರ ಭಕ್ತಿ |ರಸವ ಸವಿದು ನೋಡುತಿರುವೆಯಾ ಪೆಸರನೆತ್ತ ಗದುಗಿನ ಶ್ರಿ |(ದುಡುಕು) ವೀರನಾರಾಯಣನೆ ದಯವ ತೋರಿ ಹೇಳು ಬೇಡುತಿಹೆನು (೬೦) || ೪ ||

ಕನ್ನಡ ನಾಡು ನುಡಿಗೆ ದಿವ್ಯ ಮಂತ್ರವನ್ನಾಗಿ ಉದಯವಾಗಲಿ ನಾಡ ಗೀತೆಯನ್ನು ಕೊಟ್ಟ ನಾರಾಯಣರಾಯರಿಗೆ ನಾವು ಅವರ ಸಮಗ್ರ ಸಾಹಿತ್ಯ ಅಭ್ಯಾಸ ಮಾಡಿ ಶ್ರದ್ಧಾಂಜಲಿ ಅರ್ಪಿಸಬೇಕಾಗಿದೆ. ಅವರ ಸಾಹಿತ್ಯದ ಬಹುಭಾಗ ಇನ್ನೂ ಪ್ರಕಟವಾಗಿಲ್ಲ. ಹಸ್ತಪ್ರತಿ ಜರ್ಜರಿತವಾಗಿದೆ. ಕರ್ನಾಟಕ ಸರಕಾರವು ನಾರಾಯಣರಾಯರ ಸಮಗ್ರಸಾಹಿತ್ಯ (ಕಾವ್ಯ, ನಾಟಕ, ಕಥೆ, ಲೇಖನಗಳು) ಕೂಡಲೇ ಸಮಗ್ರ ಸಂಪುಟಗಳಲ್ಲಿ ಪ್ರಕಟಿಸಿದರೆ ಅವರ ಸಾಹಿತ್ಯ ಮುಂದಿನ ಪೀಳಿಗೆಗಳಿಗೆ ಓದಲು, ಅಭ್ಯಾಸ ಮಾಡಲು ಸಾಧ್ಯವಾಗುತ್ತದೆ. ಹಾಗೆ ಮಾಡಲಿ ಎಂಬುದು ನನ್ನ ಆಸೆ.

ಹುಯಿಲಗೋಳ ನಾರಾಯಣರಾಯರ ಕೃತಿಗಳು

೧. ಕಾವ್ಯ

(ಅ) ಷಟ್ಪದಿಗಳು

೧. ಕನಸು (೧೯೦೮), ೨. ಕನ್ನಡಿಗರ ಸಾಹಿತ್ಯ ಸಮ್ಮೇಳನ (೧೯೧೫), ೩. ಕರ್ನಾಟಕನ ಮಿಡುಕು (೧೯೧೬), ೪. ರಥೋತ್ಸವ (೧೯೧೮), ೫. ಚಂದ್ರನು ಜ್ಯೋತಿ ಸಂವಾದ (೧೯೧೯), ೬. ಭಾರತ ಭೂವನ ಅಥವಾ ನಾಡತೋಟ (೧೯೨೧), ೭. ಜೋಕುಮಾರನ ಜನಸೇವೆ (೧೯೨೩), ೮. ಗಜೇಂದ್ರ ಮೋಕ್ಷ (೧೯೨೮), ೯. ಆಗುಂಬೆಯ ಸೂರ್ಯಾಸ್ತ (೧೯೩೧), ೧೦. ವಿಜಯನಗರದ ವೀರವಾಣಿ (೧೯೩೬), ೧೧. ಒಂದಾದ ಕನ್ನಡ ನಾಡು (೧೯೫೬), ೧೨. ಶ್ರಿಮದಾನಂದತೀರ್ಥರು, ೧೩. ಶ್ರಿ ಮಾಧ್ವ ಮಹಾಮಂಡಲದ ಹುಂಡಿನಿಧಿ (೧೯೬೯ ?).

(ಆ) ಭಕ್ತಿಗೀತೆಗಳು (ಕೀರ್ತನೆಗಳು) –

೮೫ (ವಿವರಗಳು ಅನುಬಂಧ ೩ ರಲ್ಲಿವೆ)

(ಇ) ಸ್ವಾಗತ ಗೀತೆಗಳು :

೧. ಉದಯವಾಗಲಿ (೧೯೨೪), ೨. ಗೆಲುಬರಲಿ (೧೯೩೫) ?), ೩. ಬನ್ನಿ ಬನ್ನಿ ದಯಮಾಡಿಸಿ (೧೯೩೭), ೪. ಸ್ವಾಗತವು ಸ್ವಾಗತವು ಕನ್ನಡದ ಪುತ್ರರಿಗೆ (೧೯೪೦?), ೫. ಬೆಳಗಲೆಂದಿಗು (೧೯೫೬ ?) , ೬. ಸ್ವಾಗತವು ಸ್ವಾಗತವು ಸ್ವಾಗತವು ಸಕಲರ್ಗೆ (೧೯೪೦), ೭. ದಯಮಾಡಿ ದಯಮಾಡಿ (೧೯೬೧), ೮. ಸ್ವಾಗತ ಸ್ವಾಗತ ಶ್ರೀಗಳ ವೃಂದಕೆ (೧೯೬೬ ?).

(ಈ) ಇತರ ಹಾಡುಗಳು :

೧. ಭಾರತ ಮಾತೆ , ೨. ಬನ್ನಿರೋ (೧೯೪೭), ೩. ಮೂಡಿದುದು (೧೯೫೬), ೪. ಸಹ ಜೀವನ (೧೯೬೫).

೨. ನಾಟಕಗಳು

೧. ವಜ್ರಮುಕುಟವು (೧೯೧೦), ೨. ಪ್ರಮಾರ್ಜುನ (೧೯೧೨), ೩. ಕನಕವಿಲಾಸ (೧೯೧೩), ೪. ಮೋಹಲಹರಿ ೯೧೯೧೪), ೫. ಅಜ್ಞಾತವಾಸ (೧೯೧೫), ೬. ಪ್ರೇಮ ವಿಜಯ (೧೯೧೬), ೭. ಕುಮಾರರಾಮ (೧೯೧೭), ೮. ಭಾರತ ಸಂಧಾನ (೧೯೧೮), ೯. ಸ್ತ್ರೀಧರ್ಮರಹಸ್ಯ (೧೯೧೯) ಸ್ತ್ರೀಧರ್ಮರಹಸ್ಯ ನಾಟಕದ ಪದ್ಯಾವಳಿ (೧೯೨೧), ೧೦. ಶಿಕ್ಷಣ ಸಂಭ್ರಮ (೧೯೨೦), ೧೦. ವಿದ್ಯಾರಣ್ಯ (೧೯೨೧), ೧೨. ಪತಿತೋದ್ಧಾರ ವಿದ್ಯಾರಣ್ಯ ನಾಟಕದ ಪದ್ಯಪುಸ್ತಕವು (೧೯೨೭) ಮುದ್ರಣಗೊಂಡಿವೆ, ೧೩. ಪತಿತೋದ್ಧಾರ (೧೯೨೩), ೧೪. ಪುನರಾಗಮನ (೧೯೫೬ ?).

೩. ಇತರ ಗದ್ಯ ಸಾಹಿತ್ಯ

೧. ಕಾದಂಬರಿ – ಮೂಡಲು ಹರಿಯಿತು (ಉಪಲಬ್ದವಿಲ್ಲ) (ಅಪ್ರಕಟಿತ), ೨. ಕಥೆ – ನೆತ್ತರದ ಅವುತಣವು

೪. ಲೇಖನ / ಭಾಷಣಗಳು

೧.ಮಹಾಕವಿ ಕುಮಾರವ್ಯಾಸನ ಮತ

೨. ಕುಮಾರವ್ಯಾಸನ ಬಗ್ಗೆ ಕೊಟ್ಟ ಸಂದರ್ಶನ

೩. ಕುಮಾರವ್ಯಾಸನು

೪. ಕುಮಾರವ್ಯಾಸನಲ್ಲಿ ಹಾಸ್ಯ
೫. ಪುರಂದರದಾಸರ ३೮೮ನೆಯ ಪುಣ್ಯತಿಥಿ
೬. ವಿದ್ಯಾರಣ್ಯರ ಪುಣ್ಯತಿಥಿ
೭. ಲೋಕಮಾನ್ಯರ ಸ್ಮರಣೆಗಳು
೮. ಧಾರವಾಡ ಜಿಲ್ಲೆಯ ಎರಡನೆಯ ಕವಿಸಮ್ಮೇಳನದ ಸ್ವಾಗತ ಭಾಷಣ
೯. ಲಕ್ಕುಂಡಿ
೧೦. ವ್ಯವಸಾಯ ರಂಗಭೂಮಿ ಸಮಸ್ಯೆ (೧೯೫೫)
೧೧. ಪ್ರಚಲಿತ ಸಂಗೀತ ನಾಟಕಗಳನ್ನು ಮೊದಲು ಹುಡುಕಿದವರಾರು?
೧೨. ವ್ಯವಸಾಯು ರಂಗಭೂಮಿಯ ಸಮಸ್ಯೆ (೧೯೫೫)
೧೩. ಏಳುಕೋಟಿಗ್ಯೋ
೧೪. ವಿಜಾಪುರ ಜಿಲ್ಲೆಯ ನಾಟಕ ಸಮ್ಮೇಳನದ ಅಧ್ಯಕ್ಷೀಯ ಭಾಷಣ
೧೫. ಉತ್ತರ ಕರ್ನಾಟಕದ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ
೧೬. ಶ್ರೀ ವೀರನಾರಾಯಣ ಪ್ರಾಸಾದಿತ ಕೃತುಪರ ನಾಟಕ ಮಂಡಳಿಯ ಸಂಕ್ಷಿಪ್ತ ಇತಿಹಾಸವು.
೧೭. ಕನ್ನಡ ರಂಗಭೂಮಿ ಹಿರಿಯರು ಗರೂಡ ಸದಾಶಿವರಾಯರು.
೧೮. ದಿ ಮರಾಠ ಸ್ಟೇಜ್ (ಇಂಗ್ಲಿಷ್ ಭಾಷಣ)

ಹುಯಿಲಗೋಳ ನಾರಾಯಣರು : ಮಹತ್ವದ ವರ್ಷಗಳು

೧೮೮೪ - ನಾರಾಯಣರಾಯರ ಜನನ ೪.೧೦.೧೮೮೪ ಗದುಗಿನಲ್ಲಿ. ತಂದೆ - ಕೃಷ್ಣರಾಯರು. ತಾಯಿ - ರಾಧಾಬಾಯಿ (ಬಹಿಣಕ್ಕ)

೧೯೦೨ - ಮ್ಯಾಟ್ರಿಕ್ ಪರೀಕ್ಷೆ ಪಾಸಾದದ್ದು (ಧಾರವಾಡ)

೧೯೦೫, ೧೯೦೯ - ಮದುವೆ

೧೯೦೭ - ಬಿ.ಎ. ಪಾಸಾದದ್ದು (ಫರ್ಗ್ಯೂಸನ್ ಕಾಲೇಜು, ಪುಣೆ)

೧೯೦೮-೧೦ ಶಿಕ್ಷಕ , ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಕವಿವರ್ಯ ದ.ರಾ. ಬೇಂದ್ರೆ ಅವರಿಗೆ.

೧೯೧೦ - 'ವಜ್ರಮುಕುಟ' ನಾಟಕವು ರಚನೆ (ಪ್ರಥಮ ನಾಟಕ)

೧೯೧೧ - ಎಲ್.ಎಲ್.ಬಿ. ಪಾಸಾದದ್ದು (ಮುಂಬಯಿ), ಗದುಗಿನಲ್ಲಿ ವಕೀಲಿ ವೃತ್ತಿ ಪ್ರಾರಂಭ

೧೯೧೫ - ಪ್ರಥಮ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪಾಲ್ಗೊಂಡುದು, ಅದರ ಕುರಿತು ಷಟ್ಪದಿ ರಚನೆ.

೧೯೨೧ - ಸ್ತ್ರೀ ಧರ್ಮ ರಹಸ್ಯ ನಾಟಕದ ಮುದ್ರಣ

೧೯೨೪ - 'ಉದಯವಾಗಲಿ' ನಾಡಗೀತೆಯ ರಚನೆ ಹಾಗೂ ಬೆಳಗಾವಿ ಕಾಂಗ್ರೆಸ್ಸಿನಲ್ಲಿ ಅದಕ್ಕೆ ಮನ್ನಣೆ.

೧೯೨೫ - 'ಶಿಕ್ಷಣ ಸಂಭ್ರಮ' ನಾಟಕದ ಮುದ್ರಣ

೧೯೩೫ - ಉತ್ತರ ಕರ್ನಾಟಕದ ರಂಗಭೂಮಿ ಇತಿಹಾಸ ಲೇಖನ, ರಂಗಭೂಮಿ, ಅಕ್ಟೋಬರ್ ೧೯೩೫.

೧೯೫೨ - ಕಲೋಪಾಸಕ ಮಂಡಳದಿಂದ ಸತ್ಕಾರ

೧೯೫೩ - ಗದಗ -ಬೆಟಗೇರಿ ನಾಗರಿಕರಿಂದ ಸನ್ಮಾನ

೧೯೫೫ - ಗದುಗಿನ ವಕೀಲ ಸಂಘದಿಂದ ಸನ್ಮಾನ (೨೩.೪.೧೯೫೫)

೧೯೫೬ - ಕರ್ನಾಟಕ ಸರಕಾರದಿಂದ ಸನ್ಮಾನ ಬೆಂಗಳೂರಿನಲ್ಲಿ (ಡಾ. ರಾಜೇಂದ್ರ ಪ್ರಸಾದ ಅವರ ಹಸ್ತದಿಂದ)

- ಪತಿತೋದ್ಧಾರ ನಾಟಕಕ್ಕೆ ಮುಂಬಯಿ ಸರಕಾರದಿಂದ ಬಹುಮಾನ

- ಪುನರಾಗಮನ ನಾಟಕವನ್ನು (ಬಹುಶಃ ಸ್ಪರ್ಧೆಗಾಗಿ) ಮೈಸೂರು ಸರಕಾರಕ್ಕೆ ಕಳಿಸಿದ್ದು.

- ಲಕ್ಕುಂಡಿ - ಸಂಶೋಧನ ಲೇಖನ - ಕರ್ನಾಟಕ ಬಂಧು - ದೀಪಾವಳಿ ವಿಶೇಷಾಂಕ

೧೯೬೧ - ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ (ಗದಗಿನಲ್ಲಿ)

೧೯೭೧ - ಮರಣ (೨.೭.೧೯೭೧) ಹುಬ್ಬಳ್ಳಿಯಲ್ಲಿ

೧೯೭೪ - ಗದಗಿನಲ್ಲಿ (ಟಾಂಗಾಕೂಟಕ್ಕೆ) 'ಹುಯಿಲಗೋಳ ನಾರಾಯಣರಾಯರ ವೃತ್ತ' ಎಂದು ನಾಮಕರಣ

೧೯೮೪ - ನಾರಾಯಣರಾಯರ ಜನ್ಮಶತಾಬ್ದಿ ಆಚರಣೆ - ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಿಂದ

೧೯೮೫ - ಜನ್ಮಶತಾಬ್ದಿ ಆಚರಣೆ ಗದಗಿನಲ್ಲಿ (ಗದಗ-ಬೆಟಗೇರಿ ನಗರ ಪಾಲಿಕೆ ಹಾಗೂ ಸಾಹಿತ್ಯ ಕುಟೀರ ಬೆಂಗಳೂರು ಇವುಗಳ ಸಂಯುಕ್ತ ಆಶ್ರಯದಲ್ಲಿ)
- ಜನ್ಮಶತಾಬ್ಧಿ ಆಚರಣೆ ಬೆಂಗಳೂರು - ಕನ್ನಡ ಸಾಹಿತ್ಯ ಪರಿಷತ್ತು.

ಶ್ರೀ

ರಾಗ - ಮೋಹನ ಜಂಪೆತಾಳ

ಉದಯವಾಗಲಿ ನಮ್ಮ ಚಲುವ ಕನ್ನಡನಾಡು || ಪ ||
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು || ಅ.ಪ ||

ರಾಜನ್ಯರಿಪು ಪರಶುಧರನ ಜನನಿಯ ನಾಡು ||
ಆ ಜಲಧಿಯನೆ ಜಿಗಿದ ಹನುಮ ಪುಟ್ಟಿದ ನಾಡು ||
ಓಜೆಯಿಂಮೆರೆದರಸುಗಳ ಸಾಹಸದ ಸೂಡು ||
ತೇಜವನು ನಮಗೀವ ವೀರವೃಂದದ ಬೀಡು || ೧ ||

ಲೆಕ್ಕಿಗ ಮಿತಾಕ್ಷರರು ಮೆರೆದು ಬೆಳೆದಿಹ ನಾಡು ||
ಜಕ್ಕಣನ ಶಿಲ್ಪಕಲೆಯದ್ಭುತದ ಕರುಗೋಡು ||
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು ||
ಬೊಕ್ಕಸದ ಕಣಜಗೈ ಜಯಸಿರಿಯು ನಲಿಯುವ ನಾಡು || ೨ ||

ಪಾವನೆಯರಾಕೃಷ್ಣೆ ಭೀಮೆಯರ ತಾಯ್ನಾಡು ||
ಕಾವೇರಿ ಗೋದೆಯರು ಮೈದೊಳೆಯುವ ನಲುನಾಡು ||
ಆವಗಂ ಸ್ಫೂರ್ತಿಸುವ ಕಟ್ಟಿಗರ ನಡೆ ಮಾಡು ||
ಕಾವ ಗದುಗಿನ ವೀರನಾರಾಯಣನ ಬೀಡು || ೩ ||

೧೯೨೪, ಡಿಸೆಂಬರ್

೦

ಅತೀಂದ್ರಿಯ ಧ್ಯಾನದ ಪ್ರಯೋಜನ

(ಭಾವಾತೀತ ಧ್ಯಾನದ ಪ್ರಯೊಜನ)

- ಡಾ. ಚಂದ್ರಮೌಳಿ ನಾಯ್ಕರ್

ಭಾರತವು ಆಧ್ಯಾತ್ಮದ ನೆಲೆವೀಡಾಗಿದ್ದು, ಇಲ್ಲಿ ಅನೇಕ ಯೋಗ ಪದ್ಧತಿಗಳೂ, ಧ್ಯಾನದ ವಿವಿಧ ವಿಧಗಳೂ ಪರಿಪೂರ್ಣವಾಗಿ ವಿಕಾಸಗೊಂಡು ಜಾಗೃತಾವಸ್ಥೆಯಲ್ಲಿ ಅಸ್ತಿತ್ವಕ್ಕೆ ಬಂದಿವೆ. ಅಂಥ ದ್ಯಾನದ ಪ್ರಕಾರಗಳಲ್ಲಿ ಭಾವಾತೀತ ಧ್ಯಾನವೂ ಒಂದು ಮಹತ್ತ್ವದ್ದಾಗಿದೆ.

ಇಲ್ಲಿ ಧ್ಯಾನವೆಂದರೇನೆಂಬುದನ್ನು ಅರಿಯೋಣ. ಧ್ಯಾನವೆಂದರೆ ಚಿಂತನೆ, ಮನನ. ಭಾವಾತೀತ ಅಥವಾ ಅತೀಂದ್ರಿಯವೆಂದರೆ ಶ್ರೀಸಾಮಾನ್ಯರ ಇಂದ್ರಿಯಕ್ಕೆ ಗೋಚರವಾಗದ ವಿಷಯ ಇಲ್ಲವೆ ವಿಚಾರ ಅಥವಾ ಭಾವ. ತನ್ಮೂಲಕ ಸಂಕ್ಷೇಪದಲ್ಲಿ ಬಾವಾತೀತ ಧ್ಯಾನವನ್ನು ಇಂತು ಅರಿ... ಬಹುದು: "ಎಲ್ಲ ಚಟುವಟಿಕೆಗಳಿಂದ ಅತೀತವಾಗಿ ಕ್ರಿಯಾಶೀಲ ಚೇತನದೆಡೆಗೆ ಮನಸ್ಸು ಧಾವಿಸುವುದೇ ಈ ಭಾವಾತೀತ ಧ್ಯಾನವಾಗಿದೆ".

ಇಲ್ಲಿ ಕ್ರಿಯಾಶೀಲ ಚೇತನವೆಂದರೆ ಎಲ್ಲ ಕ್ರಿಯೆಗಳಿಗೂ ಚೈತನ್ಯ ರೂಪದಲ್ಲಿರುವ ವಿಚಾರದ ಮೂಲವೆಂದು ತಿಳಿಯಲಾಗುವುದು. ಆ ವಿಚಾರ ಮೂಲದೆಡೆಗೆ ಮನಸ್ಸು ಧಾವಿಸುವಂತೆ ಮಾಡುವುದೇ ಧ್ಯಾ... ನೆ. ಸರ್ವಸಾಧಾರಣವಾದ ಭಾವನೆಗಳನ್ನು ಮೀರಿದ ವಿಚಾರದ ಮೂಲವಾಗಿದೆ ಈ ಧ್ಯಾನ.

ಇಂಗ್ಲಿಷಿನಲ್ಲಿ ಈ ಭಾವಾತೀತ ಧ್ಯಾನವನ್ನು ಹೀಗೆ ಪ್ರತಿಪಾದಿಸಿರುವರು :

"Transcendental Meditation Technic takes the mind to the soure of thought wl... doing so the mind transcends the field of activities".

ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿಗೂ ಚೇತನ ಇದೆಯೆಂಬುದು ನಮಗೆಲ್ಲರಿಗೂ ವೇದ್ಯವಾದ ವಿಷಯು. ಇಲ್ಲಿ ಚೇತನವೆಂದರೆ ಒಂದು ತೆರನಾದ ಶಕ್ತಿಯೆಂದು ತಿಳಿಯುಬಹುದು.

ಈ ಶಕ್ತಿಯಲ್ಲಿ ಮೂರು ವಿಧವಾದ ಗುಣಗಳಿರುವುವು. ಅವಾವುವೆಂದರೆ, ಸತ್ತ್ವ, ರಜ, ತಮವೆಂಬುವು. ಈ ಗುಣಗಳು ನಿರ್ದಿಷ್ಟವಾದ ಅಸ್ತಿತ್ವವನ್ನು ಹೊಂದಿರುವುವು.

ಸತ್ತ್ವವೆಂಬುದು ಶಕ್ತಿಯು, ರಜವು ರಚನಾತ್ಮಕ ಇಲ್ಲವೇ ಕ್ರಿಯಾತ್ಮಕವಾದದ್ದು, ತಮವು ನಾಶವನ್ನೇ ಮಾಡುವ ಇಲ್ಲವೆ ವಿಧ್ವಂಸಕ ಗುಣವಾಗಿದೆ.

ನಿಸರ್ಗದಲ್ಲಿಯ ಒಳ್ಳೆಯ ಇಲ್ಲವೆ ಭಯಂಕರ ಘಟನೆಗಳು ಈ ಮೂರು ಗುಣಗಳನ್ನು ಅವಲಂಬಿಸಿವೆ. ಅದರಂತೆಯೇ ಮಾನವನಲ್ಲಿಯೂ ಈ ಮೂರು ಗುಣಗಳಿರುವುವು. ಈ ಗುಣಗಳು ಅತ್ಯವಶ್ಯವಾಗಿವೆ. ಒಂದನ್ನು ಬಿಟ್ಟು ಬೇರೊಂದು ಇರಲು ಸಾಧ್ಯವಿಲ್ಲ. ಬರೀ ಶಕ್ತಿಯಿದ್ದರೆ ಪ್ರಯೋಜನವಿಲ್ಲ. ಆ ಶಕ್ತಿಗೆ ಚಾಲನೆ ಬೇಕು. ಒಂದು ಶಕ್ತಿ ಒಂದೇ ತರಹದ ಚಾಲನೆಯಲ್ಲಿರಲು ಸಾಧ್ಯವಿಲ್ಲ. ತನ್ಮೂಲಕ ಅದರಲ್ಲಿ ಬದಲಾವಣೆಯಾಗಬೇಕಾದರೆ ಮೊದಲಿನದು ನಾಶವಾಗಬೇಕು. ಆಗ ಮಾತ್ರ ಹೊಸದಾದ ಒಂದು ಪ್ರಗತಿ ಸಾಧಿಸಲು ಸಾಧ್ಯ.

ಮಾನವರಿಗೆ ಈ ಗುಣಗಳಿರುವುದರಿಂದ ಅಸಾಧ್ಯವಾದುದು ಯಾವುದೂ ಇಲ್ಲ. ಆದರೆ ಆ ಎಲ್ಲ ಬಯಕೆಗಳು ಏಕೆ ಈಡೇರುವುದಿಲ್ಲ? ಏಕೆಂದರೆ ಮಾನವನು ತಾನು ಕೈಕೊಂಡ ಕಾರ್ಯದ ಬಗ್ಗೆ ಆಳವಾದ ವಿಚಾರ ಮಾಡುವುದಿಲ್ಲ. ಕೇವಲ ಸ್ಥೂಲ ಮಟ್ಟದಲ್ಲಿ ವಿಚಾರಿಸುವನು. (ಸ್ಥೂಲತೆಯೆಂದರೆ Grosser level ಎಂದು ತಿಳಿಯಲಾಗಿದೆ). ಮಾನವನು ಯಾವಾಗಲೂ ಸಮಗ್ರ ಅಥವಾ ಸ್ಥೂಲ ಮಟ್ಟದಲ್ಲಿ ವಿಚಾರಿಸುವನೇ ಹೊರತು ಆಳವಾದ ವಿಚಾರ ಮೂಲದಲ್ಲಿ ಏಕೆ ಇಳಿಯುವದಿಲ್ಲ? ಕಾರಣವಿಷ್ಟೆ, ಶಾರೀರಿಕವಾಗಿ, ಮಾನಸಿಕವಾಗಿ ಅವನಿಗೆ ಅವ್ಯಾಹತವಾದ ಅವಧಾರಣೆ ಮತ್ತು ಪರಿಶ್ರಮವಾಗುವುದರಿಂದ ಆಳವಾದ ವಿಚಾರದ ಮೂಲಕ್ಕೆ ಹೋಗದೇ ವಸ್ತುಗಳ ಬಾಹ್ಯಸ್ಥಿತಿಯನ್ನು ವಿಚಾರಿಸಿ ಅಲ್ಲಿ ಶ್ರಮದಿಂದ ಅಧಿಕವಾದ ಫಲಪ್ರಾಪ್ತಿಯಾಗಿ ಪ್ರಯತ್ನಿಸುವನು.

"Due to stress and strain man always thinks on the grosses level"

ಮನಃ ಶಾಸ್ತ್ರಜ್ಞರು ಪ್ರತಿಪಾದಿಸಿದಂತೆ ಮಾನವನು ತನ್ನ ಮಾನಸಿಕ ಯೋಗ್ಯತೆಯನ್ನು ಕೇವಲ ಶೇ. ೫.೧೦ ರಷ್ಟು ಉಪಯೋಗಿಸುವನು. ಉಳಿದ ಶೇ. ೯೪.೯೦ ರಷ್ಟು ಯೋಗ್ಯತೆಯು ನಿರರ್ಥಕವಾಗಿ ಅಲಕ್ಷಿಸಲ್ಪಟ್ಟಿದೆ. ಆ ಉಳಿದ ಭಾಗದ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಲು ಅತೀಂದ್ರಿಯ ಧ್ಯಾನವು ಮಾತ್ರ ಸಾಧನವಾಗಿದೆ.

ಈಗ ಒಟ್ಟಿನಲ್ಲಿ ಸಂಕ್ಷಿಪ್ತವಾಗಿ ಅತೀಂದ್ರಿಯ ಧ್ಯಾನವೆಂದರೇನೆಂಬುದು

ಅರಿಯಲ್ಪಟ್ಟಿತು. ಇನ್ನು ಅದು ಯುವಕರಿಗೆ ಹೇಗೆ ಪ್ರಯೋಜನಕಾರಿಯಾಗಿದೆ ಯೆಂಬುದನ್ನು ವೈಜ್ಞಾನಿಕ ಸ್ಥಿರೀಕರಣದ ಉದಾಹರಣೆಗಳೊಂದಿಗೆ ಅವಲೋಕಿಸೋಣ.

ಇಂದಿನ ವೈಜ್ಞಾನಿಕ ಪ್ರಪಂಚದಲ್ಲಿ, ತಾಂತ್ರಿಕತೆ ಹಾಗೂ ಮಹತ್ಸಾಧನೆ ಸಾಧಿಸಲ್ಪಟ್ಟಿದ್ದರೂ ಮಾನವರು ಮಾನಸಿಕ ಕ್ಲೇಶದಿಂದ ಇನ್ನೂ ಬಳಸುತ್ತಿದ್ದಾರೆ. ಹೇಗೆಂದರೆ, ಈಗಾಗಲೇ ಅನೇಕ ಗ್ರಹಗಳ ಅನ್ವೇಷಣೆಯಲ್ಲಿ ಈ ಪ್ರಪಂಚ ಯಶಸ್ವಿಯಾದರೂ ಇನ್ನೂ ಹಿಂಗದ ಬಯಕೆ ಇದೆ. ಆ ಬಯಕೆ ಹೊಸ ಹೊಸ ವಿಷಯಗಳಿಗಾಗಿ ಹಾತೊರೆಯುವುದೇ ವಿನಾ ಸಂತೃಪ್ತಿಯನ್ನು ಹೊಂದಿಲ್ಲ. ಯಾಕೆಂದರೆ ಪ್ರಪಂಚದ ಚಾಲನೆ ಅದಕ್ಕಿದ್ದ ಚೇತನ ಯಾವುದೆಂಬುದು ಅರಿಯಲ್ಪಟ್ಟಿಲ್ಲ. ಆ ಚೇತನ ಶಕ್ತಿ ಯಾವುದು ಎಂಬುದು ಅರಿಯಲ್ಪಡದಿದ್ದಾಗ ಏನೇ ಸಾಧಿಸಿದರೂ ಮುಂದೆ ಏನು? ಎಂಬ ಪ್ರಶ್ನೆ ಪದೇ ಪದೇ ಉದ್ಭವಿಸುವ ಸಮಸ್ಯೆಯಾಗಿದೆ.

ನಿಸರ್ಗದ ನಿಯಮವನ್ನು ನಿರೀಕ್ಷಿಸಿದಾಗ ಕಂಡುಬರುವುದೇನೆಂದರೆ, ಪ್ರತಿಯೊಂದು ವಸ್ತುವಿನ ಕ್ರಮಕ್ಕೆ ಅವ್ಯಕ್ತವಾದ ಒಂದು ಚೇತನವು ಇದ್ದೇ ಇದೆ ಎಂಬ ಅರಿವಾಗುವುದು. ಹೇಗೆಂದರೆ : ವಿಶ್ವದ ನಿಯಮಬದ್ಧ ಆವರ್ತನೆ (Rotation) ಯು ಅವ್ಯಕ್ತವಾದ, ಅಸಾಧಾರಣವಾದ ಹಾಗೂ ಅಲೌಕಿಕವಾದ ಚೇತನದ ಮೂಲಕವಾಗಿದೆ.

ಕ್ರಿಯಾಶೀಲ ಚೇತನ ವಿಜ್ಞಾನವು ಚೇತನದ ಸತ್ಯಾಸ್ತಿತ್ವವನ್ನೂ ಹಾಗೂ ಸುಪ್ತ ಸ್ಥಿತಿಯಲ್ಲಿರುವ ಚೇತನವನ್ನೂ ಜಾಗೃತಗೊಳಿಸಿ ರಚನಾತ್ಮಕವಾಗಿ ಮಾಡುವುದು.

ಕ್ರಿಯಾಶೀಲ ಚೇತನ ವಿಜ್ಞಾನವು (Science of Creative Intelligence)

ಎರಡು ವಿಧವಾಗಿದೆ.

೧. ತಿಳುವಳಿಕೆಗಾಗಿ ತಾತ್ತ್ವಿಕವಾಗಿದೆ

೨. ಅನುಭವಕ್ಕೆ ಪ್ರಾಯೋಗಿಕವಾಗಿದೆ

ಯಶಸ್ವಿಯಾದ ಕಾರ್ಯವು ಕ್ರಿಯಾಶೀಲತೆ ಮತ್ತು ಚೈತನ್ಯ ಪರಿಪೂರ್ಣವಾದ ವಿಚಾರವನ್ನು ಅವಲಂಬಿಸುವುದು. ಇಂಥ ಸನ್ನಿವೇಶದಲ್ಲಿ ಅತೀಂದ್ರಿಯ ಧ್ಯಾನವು ಮಾತ್ರ ಪ್ರಜ್ಞಾಪೂರ್ಣವಾದ ಮನೋಭಾವವನ್ನು (ಬುದ್ಧಿಯನ್ನು) ವಿಚಾರದ ಮೂಲಕ್ಕೆ ಒಯ್ಯುವುದು. ಅಂದರೆ ಕ್ರಿಯಾಶೀಲ ಚೇತನದ ಕೇಂದ್ರಕ್ಕೆ ಕ್ರಿಯಾಶೀಲ ಚೇತನವು ಆಧುನಿಕ ತರುಣ ಮಾನವನನ್ನು ಆಕ್ಷೇಪಿಸುವುದು ನಿಜಾಂಶದಿಂದ ಕೂಡಿದೆ. ಏಕೆಂದರೆ

ಪ್ರಗತಿ ಬಯಸುವ ಯುವಕರು ತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕು, ಇಲ್ಲವೇ ಯೋಗ್ಯತೆ ಹೆಚ್ಚಿಸಿಕೊಳ್ಳಲು ಆಗದಿದ್ದ ಯುವಕರು ಪ್ರಗತಿಯನ್ನೇ ಬಯಸದಿರಬೇಕು.

ಪ್ರಗತಿಯನ್ನು ಸದಾ ಬಯಸುವ ತರುಣರು ದಿನದಿನಕ್ಕೂ ಹೆಚ್ಚು ಕ್ರಿಯಾತ್ಮಕವಾಗಿರಬೇಕು. ಅಂದರೆ ಕ್ರಿಯಾಶೀಲ ಚೇತನದ ಕೇಂದ್ರಕ್ಕೆ ಪ್ರತಿದಿನ ಎರಡು ಸಾರೆ ಧಾವಿಸಬೇಕು. ಆಗ ಕೃತಿಯಲ್ಲಿ ಪರಿಣತಿಯಾಗಲೀ ಇಲ್ಲವೆ ಸೊಬಗು ಉಂಟಾಗುವುದು. ಸುಪ್ತಾವಸ್ಥೆಯಲ್ಲಿ ಜಾಗೃತವಾಗಿದ್ದ ಅಣುವಿನಂತೆ ಜಾಗೃತ ಚೇತನದಲ್ಲಿ ಕ್ರಿಯಾಶೀಲ ಶಾಂತಿ ಉಂಟಾಗಬೇಕು. ಆಗ ವಿಚಾರದ ಅಲೆಗಳ ರೀತಿಯಲ್ಲಿ ಬದಲಾವಣೆಯಾಗಿ ಉಪದ್ರವರಹಿತ ಅಂತರ್ದಕ್ಷತೆಯುಂಟಾಗುವುದು.

ಈ ಧ್ಯಾನದಿಂದ ತರುಣರಿಗೆ ಸ್ಥೈರ್ಯವೂ, ಜ್ವರನಿಯಂತ್ರಣ ಸಾಮರ್ಥ್ಯವೂ, ಅವ್ಯಾಹತವಾದ ಸ್ಪರ್ಶವಿದ್ಯುಲ್ಲತೆಯಂಥ ಇಲ್ಲವೆ ಹೊಳೆಯುವ ತ್ವಚೆ ಮುಂತಾದ ವಿಶೇಷ ಆಕರ್ಷಕ ಗುಣಗಳು ಉಂಟಾಗುವುವು.

ಈ ಧ್ಯಾನದಿಂದ ತರುಣರು, ಮಾನಸಿಕ ಸ್ಥೈರ್ಯ ಹಾಗೂ ಶರೀರ ಧಾರ್ಢ್ಯ ಮುಂತಾದ ವಿಶೇಷ ಗುಣಗಳನ್ನು ಪಡೆದವರಾಗಿ ಮಾನಸಿಕ ಯೋಗ್ಯತೆಯನ್ನು ಹೆಚ್ಚಿಸಿಕೊಂಡು ಸಂಕಷ್ಟಗಳ ಪರಿಮಾಣವನ್ನು ಕಡಿಮೆ ಮಾಡಿಕೊಳ್ಳಲು ಸಹಜವಾಗಿ, ಸ್ವಾಭಾವಿಕವಾಗಿ ಸಮರ್ಥರಾಗುವರು. ಧ್ಯಾನವನ್ನು ಮಾಡುವ ಯುವಕನು (ಚಿಂತನಶೀಲ ತರುಣನು), ಪರಿಣಾಮಕಾರಿಯಾದ ಕಾರ್ಯಪ್ರವೃತ್ತನಾಗುವ ಸ್ಥಿತಿಯಲ್ಲಿ ಬಹು ಬೇಗನೇ ಮಾನಸಿಕ ಕ್ಲೇಶದಿಂದ ಮುಕ್ತನಾಗುವನು.

ಆದರೆ ಧ್ಯಾನ ಮಾಡದ ಯುವಕನು ಬಹುವಾದ ಕ್ಲೇಶದಿಂದ ಕೂಡಿಕೊಂಡು ಪರಿಣಾಮಕಾರಿಯಾದ ಕಾರ್ಯಗಳಲ್ಲಿ ಪ್ರವೃತ್ತನಾಗುವಲ್ಲಿ ಅಯಶಸ್ವಿಯಾಗುವನು.

ವ್ಯಕ್ತಿತ್ವವು ವೃದ್ಧಿಯಾದಂತೆ, ಅತೀಂದ್ರಿಯ ಧ್ಯಾನದ ಅಭ್ಯಾಸದಿಂದ ತರುಣನು ಹೆಚ್ಚು ಸ್ವಪ್ರತ್ಯಕ್ಷನಾಗುವನು (Self actualized).

ಚಟುವಟಿಕೆಗಳಲ್ಲಿ ತೊಡಗಲು ಅತೀಂದ್ರಿಯ ಧ್ಯಾನವು ಸಾಧನವಾಗಿದೆ. ಹೇಗೆಂದರೆ, ಶೀಘ್ರವಾದ ಪ್ರತಿಕ್ರಿಯೆಯು ಹೆಚ್ಚಿನ ಜಾಗ್ರತೆಗೆ ಕಾರಣವಾಗಿದೆ. ತನ್ಮೂಲಕ ಇಲ್ಲಿ ಸಂವೇದನೆಯ ಇಂದ್ರಿಯಗಳು ಅತ್ಯಂತ ಜಾಗೃತವಾಗಿ ತರುಣನು ಸರಿ - ತಪ್ಪುಗಳ ಕಲ್ಪನೆಯನ್ನು ನಿಸ್ಸಂಶಯವಾಗಿ ವಿಶ್ಲೇಷಿಸುವನು.

ಅವನ ಶ್ರೇಷ್ಠವಾದ ಸಂವೇದನಾ ಯಂತ್ರವು (Superior perceptual

matar)ನಿಜಾರ್ಥದಲ್ಲಿ ವೃದ್ಧಿ ಹೊಂದಿ ಬುದ್ಧಿ ಮತ್ತು ಶರೀರಗಳ ಮಧ್ಯದಲ್ಲಿ ಸರಿಯಾದ ಸಮತ್ವವನ್ನು ಪಡೆಯುವುದು. ಇಂಥ ತರುಣನ ಮನಸ್ಸನ್ನು ಸಮಯೋಚಿತ ವಿಚಾರಗಳಿಂದ ಕೂಡಿಕೊಳ್ಳುವುದಲ್ಲದೆ, ಸಂವೇದನೆಯು ತೀಕ್ಷ್ಣತೆ ಹೆಚ್ಚಿಸುವುದು.

ಧ್ಯಾನ ಮಾಡುವ ತರುಣನು ಹೆಚ್ಚಿನ ಪ್ರಭಾವ ಪರಿಪೂರ್ಣತೆಯಿಂದ ಕೂಡಿಕೊಳ್ಳುವನು ಹಾಗೂ ಅವನ ಸ್ನಾಯುಗಳಲ್ಲಿ ಆಳವಾದ ಸಮಸ್ವವು ಬರುವುದು. ವಿದ್ಯಾರ್ಜನೆಯ ಸಾಮರ್ಥ್ಯವು ಹೆಚ್ಚುವುದು. ಅಂದರೆ ಜ್ಞಾಪಕಶಕ್ತಿಯ ಸಾಮರ್ಥ್ಯವು ನಿಸ್ಸಂಶಯವಾಗಿ ವೃದ್ಧಿಯಾಗುವುದು.

ಇಂಥ ದೃಷ್ಟಿಯಿಂದ ಈ ಧ್ಯಾನವು ವಿದ್ಯಾರ್ಥಿಗಳಿಗಂತೂ ನೂರಕ್ಕೆ ನೂರರಷ್ಟು ಸಾರ್ಥಕವಾಗಿದೆಯೆನ್ನಬಹುದು. ಧ್ಯಾನ ಮಾಡುವುದರಿಂದ ಹೃದಯದಲ್ಲಿ ಸ್ವಮತ್ವ ಬಂದು ಪ್ರಾಣವಾಯುವು ಸರಿಯಾಗಿ ಪೂರೈಕೆಯಾಗಿ ಶರೀರದಲ್ಲಿ ಸಮರ್ಪಕವಾಗಿ ರಕ್ತವು ಚಲಿಸಿ ದೇಹದಾರ್ಢ್ಯವನ್ನು ಹೆಚ್ಚಿಸುವುದು. ಅಲ್ಲದೆ, ವಿಶೇಷವಾಗಿ ಶ್ರೇಷ್ಠವಾದ ಸಂವೇದನೆಯ ಯಂತ್ರದ ಶಕ್ತಿ ಪ್ರದರ್ಶನವು ವಿಕಾಸವಾಗುವುದು.

ತರುಣರ ಕ್ರಿಯಾಶೀಲವಾದ ಬುದ್ಧಿಯು ಸಮತ್ವದಿಂದ ಹಾಗೂ ಬಲದಿಂದ ಕೂಡಿಕೊಳ್ಳಬೇಕಾದರೆ ಆ ಬುದ್ಧಿಯು ಇಲ್ಲವೆ ಪ್ರಜ್ಞೆಯು ವಿಚಾರಮೂಲದ ಆಳದಿಂದ ಬಂದುದಾಗಿರಬೇಕು. ಹೇಗೆಂದರೆ, ಸಮುದ್ರದ ಆಳದಿಂದ ಬಂದ ತೆರೆಯು ಬಹು ಪ್ರಬಲವಾದುದಾಗಿರುವುದು. ಆದರೆ ಮೇಲೆ ಬರುವ ಗಾಳಿಯ ತೆರೆಗಳು ಪ್ರಬಲ ವಾಗಿರದೇ ಬಹು ಬಲಹೀನವಾಗಿರುವುವು. ಅದರಂತೆ ವಿಚಾರ ಮೂಲದಿಂದ ಬರದಿದ್ದ ವಿಚಾರವು ಬಲಹೀನವಾಗಿರುವುದರಿಂದ ನಿತ್ಯ ಜೀವನದಲ್ಲಿ ಮಾನವರು ಅಯಶಸ್ವಿಯಾಗಿ ಮಾನಸಿಕ ತೊಂದರೆಗಳಿಗೆ ಈಡಾಗಿ ಕೊರಗುತ್ತಿದ್ದಾರೆ.

ಧ್ಯಾನ ಮಾಡುವುದರಿಂದ ನಿರ್ದೋಷವಾದ ವಿಚಾರ ಬರುವುದು ಖಂಡಿತ. ಅದು ಸರ್ವರಿಗೂ ಕಂಡುಬರುವ ಒಂದು ಹೊಸ ಗುಣವಾಗುವುದು. ಅತೀಂದ್ರಿಯ ಧ್ಯಾನವು ಏಕಕಾಲಿಕವಾಗಿ ಮಿದುಳಿನ ಹಾಗೂ ವಿಚಾರಗಳು ಉತ್ಪನ್ನವಾಗುವ ಕ್ಷೇತ್ರ ಗಳೆರಡರಲ್ಲಿಯೂ ಜಾಗೃತವಾದ ಹೊಂದಾಣಿಕೆ ಉಂಟಾಗಿ ಸರಿಯಾದ ಕ್ರಮಬದ್ಧವಾದ ವ್ಯವಸ್ಥೆ ಬರುವುದು. ಉದಾ : ಮಿದುಳಿನಿಂದ ಬರುವ ಆಲ್ಫಾ, ಬೀಟಾ, ತೀಟಾ ಹಾಗೂ ಡೆಲ್ಟಾ ಎಂಬ ಅಲೆಗಳು ಸಮಾನವಾಗಿ, ಸರಿಯಾಗಿ, ಸಮರ್ಪಕವಾಗಿ ಏಕರೂಪವಾಗಿ ಬರುವುವು. ಹೀಗಾಗಿ ಅವುಗಳಲ್ಲಿ ಸಂಯೋಗವು ಕಂಡುಬರುವುದು.

ಜಗತ್ತಿನಲ್ಲೆಲ್ಲ ಸಂಶೋಧನೆಯಿಂದ ಕಂಡುಕೊಂಡದ್ದೇನೆಂದರೆ, "ಕ್ರಿಯಾಶೀಲ ಚೇತನದೆಡೆಗ ಹೋಗಿ ಆಳವಾದ ವಿಚಾರ ಮೂಲಕ್ಕೆ ಹೋಗಲು ಅತೀಂದ್ರಿಯ ಇಲ್ಲವೆ ಭಾವಾತೀತ ಧ್ಯಾನವೊಂದೇ ಸರಳ ಸಾಧನವಾಗಿದೆ".

ಇಲ್ಲಿ ಇದರ ಉದ್ದೇಶವೇನೆಂದರೆ, "ಯಾವಾಗಲೂ ಮುಕ್ತವಾಗಿ ಚಲಿಸಬಲ್ಲ ಮನಸ್ಸನ್ನು ನಿಯಂತ್ರಿಸುವಂತಿಲ್ಲ. ಅದು ಮನಬಂದಂತೆ ಚಲಿಸಲಿ ಎಂದು ಸಡಿಲಿಸುದುದೇ ಈ ಮಾರ್ಗದಲ್ಲಿ ಸರಳವಾದ ಸಾಧನವಾಗಿದೆ. ಒಂದು ವೇಳೆ ಆ ಮನಸ್ಸನ್ನು ನಿಯಂತ್ರಿಸಿದ್ದೇ ಆದರೆ ಎಲ್ಲ ಚಟುವಟಿಕೆಗಳಿಗೆ ಆತಂಕ ಉಂಟಾದಂತಾಗಿ ಕೊನೆಗೆ ಎಲ್ಲವೂ ನಿರರ್ಥಕವಾದ ಪರಿಣಾಮವನ್ನು ಹೊಂದುವುದು."

"Natural tendency of the mind is to move always freely. If it is restricted, it disturbs the whole activities".

ಇಲ್ಲಿ ಏಕಾಗ್ರತೆಯಾಗಲೀ, ಜಿಜ್ಞಾಸೆಯಾಗಲೀ ಇಲ್ಲ. ಯಾಕೆಂದರೆ ಅವು ನಮ್ಮ ಸಾಧನದ ಮಾರ್ಗದ ಮೇಲೆ ಅಡ್ಡಿಯನ್ನು ಉಂಟುಮಾಡುವ ಬಿಜಿಗೆ (Hurdles) ಗಳಾಗಿವೆ.

ಉಳಿದ ಯೋಗಗಳಿಗೂ ಇದಕ್ಕೂ ಗಮನೀಯವಾದ ವ್ಯತ್ಯಾಸಗಳಿವೆ. ಅವು ಯಾವುವೆಂದರೆ, ಯೋಗದಲ್ಲಿ ನಿರ್ದಿಷ್ಟ ಆಸನದ ನಿಯಮವಿದೆ. ಇಲ್ಲಿ ಅಂಥ ಕಟ್ಟುಪಟ್ಟು ಇಲ್ಲ. ಅಲ್ಲಿ ಏಕಾಗ್ರತೆ ಮೊದಲಾದವುಗಳಿವೆ. ಬಾವಾತೀತ ಧ್ಯಾನದಲ್ಲಿ ಅವು ಇಲ್ಲ. ಅಲ್ಲಿ ಚೇತನದ ಮೂಲ ತಿಳಿಯಲು ಜಿಜ್ಞಾಸೆ ಮಾಡಲ್ಪಡುವುದು. ಇಲ್ಲಿ ಸ್ವಪ್ರತ್ಯಕ್ಷತೆ, ಸ್ವಮನವರಿಕೆ ಇದೆ.

ಬಾವಾತೀತ ಧ್ಯಾನವು ಸುಗಮವಾಗಿ ಪ್ರಾರಂಭವಾಗಿ ಯಶಸ್ವಿಯಾಗಿ ಮುಂದುರೆದರೆ, ಕ್ರಮೇಣ ಔಷಧಿಗಳನ್ನು ತೆಗೆದುಕೊಳ್ಳುವುದರಲ್ಲಿ ಆಸಕ್ತಿ ಕಡಿಮೆಯಾಗುವುದು.

ಇವೆಲ್ಲ ಅತಿದ್ರಿಯ ಇಲ್ಲವೇ ಭಾವಾತೀತ ಧ್ಯಾನದ ಪ್ರಯೋಜನಗಳು. ಮನುಷ್ಯನು ಅನೇಕ ವಿಷಯುಗಳಿಗೆ, ಮಾರ್ಗಗಳಿಗೆ ಮಾರುಹೋದರೆ A Philosopher never attains salvation ಎಂಬಂತೆ ಸಾರ್ಥಕವಾದ ಕೊನೆಯನ್ನು ಎಂದೂ ಮುಟ್ಟಲಾರ. ತನ್ಮೂಲಕ ವೈಜ್ಞಾನಿಕವಾಗಿ ಮಂಡಿಸಲ್ಪಟ್ಟ Transcendental Meditation ಮಾಡುವುದರಿಂದ ಜೀವನದ ರೀತಿಯಲ್ಲಿಯೇ ಸುಧಾರಣೆಗಳಾಗುವ ಬದಲಾವಣೆಗಳು ಒಡಮೂಡಿ ಬರುವವು.

ಅತೀಂದ್ರಿಯ ಧ್ಯಾನದಿಂದ ಶರೀರ ಸಮತ್ತ್ವವನು ಮೆದುಳಿನ ಪ್ರಫುಲ್ಲ ವಿಕಾಸ, ಹೃದಯದ ಬಡಿತದ ಸಮತೋಲತೆ, ಸರಿ ತಪ್ಪುಗಳ ವಿಶ್ಲೇಷಣೆಯ ಪ್ರಜ್ಞೆ, ಸ್ನಾಯುಗಳ ದುರ್ಬಲತೆಯಲ್ಲಿಡಿತ, ಜ್ಞಾಪಕಶಕ್ತಿಯ ಹೆಚ್ಚಳವೇ ಮುಂತಾದ ಪ್ರಯೋಜನಗಳಿಂದಾಗಿ ತರುಣರಿಗೆ ಅವರವರ ಕಾರ್ಯಕ್ಷೇತ್ರದಲ್ಲಿ ಉನ್ನತಿಯಾಗುವುದು.

ಆಧುನಿಕ ಯುವಜನಾಂಗವು ನಿರರ್ಥಕವಾದ ಚಿತ್ರಗಳನ್ನು ನೋಡುವಲ್ಲಿ, ಸಪ್ರಯೋಜನ ರಹಿತವಾದ ಕಾದಂಬರಿ ಮುಂತಾದವುಗಳನ್ನು ಓದುವುದರಲ್ಲಿ ವೇಳೆ ಹರಣ ಮಾಡುವರು. ಅಂಥದನ್ನೆಲ್ಲ ಬಿಟ್ಟು ಪ್ರಯೋಜನಕಾರಿಯಾದ ಅತೀಂದ್ರಿಯ ಧ್ಯಾನವನ್ನು ಪಾಲಿಸಿದ್ದೇ ಆದರೆ ದೃಢನಿರ್ಧಾರದಿಂದ ಪ್ರಾರಂಭಿಸಿದ ಕಾರ್ಯಗಳಲ್ಲಿ ಖಂಡಿತ ಯಶಸ್ಸನ್ನು ಪಡೆಯುವರು.

ಉಳಿದ ಜನಾಂಗಕ್ಕೂ, ಇವರು ಮಾರ್ಗದರ್ಶಕರಾಗಿ ಆದರ್ಶರಾಗುವರು. ತನ್ಮೂಲಕ ಪ್ರಯೋಜನ (ಫಲ) ಪ್ರದವಾದ ವೈಜ್ಞಾನಿಕವಾಗಿ ಸ್ವೀಕರಿಸಲ್ಪಟ್ಟ ಈ ಕ್ರಿಯಾಶೀಲ ಚೇತನ ವಿಜ್ಞಾನವನ್ನು ನಮ್ಮ ತರುಣರು ಪಾಲಿಸಲಿ ; ಭಾರತದ ಭಾವೀ ನಾಗರಿಕರಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಯಶಸ್ವಿಯಾಗುವರು.

X

ದಿವಾನ ಪೂರ್ಣಯ್ಯ ಮತ್ತು ಶೃಂಗೇರಿ ಮಠ

- ಡಾ|| ಎ.ಕೆ. ಶಾಸ್ತ್ರಿ

ಸುಮಾರು ಹನ್ನೆರಡುನೂರು ವರ್ಷಗಳ ಹಿಂದೆ ಆದಿ ಶಂಕರರು ಕರ್ನಾಟಕದ ಶೃಂಗೇರಿಯಲ್ಲಿ ಅದ್ವೈತಮಠವನ್ನು ಸ್ಥಾಪಿಸಿದರು. ಬಹು ಪುರಾತನ ಕಾಲದಿಂದ ಶೃಂಗೇರಿ, 'ದಕ್ಷಿಣದ ವಾರಣಾಸಿ' ಎಂಬ ಪ್ರಸಿದ್ಧಿಗೆ ಮತ್ತು ಮುಸಲ್ಮಾನ ದೊರೆಗಳು, ಮೈಸೂರಿನ ಒಡೆಯರು, ಬ್ರಿಟಿಷ್ ಕಮಿಷನರ್‌ರು ಮತ್ತು ಅನೇಕ ಸಂಸ್ಥಾನಿಕರು ಕಾಲಕಾಲಕ್ಕೆ ಶೃಂಗೇರಿ ಮಠಕ್ಕೆ ಭೂದಾನ ಮಾಡಿ, ರಾಜಾಶ್ರಯ ನೀಡಿದ್ದರಿಂದ, ಅದೊಂದು ' ಧರ್ಮಸಂಸ್ಥಾನ 'ವಾಗಿ ರೂಪುಗೊಂಡಿತು[೧]. ಹೈದರಾಲಿಯು ಸ್ವಸಾಮರ್ಥ್ಯದಿಂದ ಕ್ರಿ.ಶ. ೧೭೬೧ರಲ್ಲಿ ತನ್ನ ಅಧಿಕಾರವನ್ನು ಮೈಸೂರಿನಲ್ಲಿ ಪ್ರಾರಂಭಿಸುವುದಕ್ಕಿಂತ ಮುಂಚೆಯೇ ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರು ಶೃಂಗೇರಿ ಮಠದ ದ್ವಿತೀಯ ಶ್ರೀಸಚ್ಚಿದಾನಂದ ಭಾರತೀ ಸ್ವಾಮಿಗಳೊಂದಿಗೆ ನಿಕಟ ಸಂಬಂಧವಿರಿಸಿಕೊಂಡಿದ್ದರು. ಹೈದರಾಲಿ ಮತ್ತು ಟೀಪುಸುಲ್ತಾನರೂ ಕೂಡ ಶೃಂಗೇರಿಯ ಜಗದ್ಗುರು, ತೃತೀಯ ಶ್ರೀ ಸಚ್ಚಿದಾನಂದ ಭಾರತಿಗಳನ್ನು ಗೌರವಿಸುತ್ತಿದ್ದರೆಂಬುದು ಮಠದಲ್ಲಿಯ ಅನೇಕ ದಾಖಲೆಗಳಿಂದ ಸ್ಪಷ್ಟವಾಗುತ್ತದೆ[೨]. ಟೀಪುಸುಲ್ತಾನನ ಪತನದ ನಂತರ ಮೈಸೂರಿನಲ್ಲಿ ಒಡೆಯರ ಅರಸೊತ್ತಿಗೆಯು ಪುನಃ ಪ್ರಾರಂಭವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು (ಕ್ರಿ.ಶ. ೧೭೯೬ - ಕ್ರಿ.ಶ. ೧೮೬೮) ಇನ್ನೂ ಚಿಕ್ಕವರಾಗಿದ್ದರಿಂದ ಹೈದರ ಮತ್ತು ಟೀಪುರವರ ಆಡಳಿತದಲ್ಲಿ ಸೇವೆ ಸಲ್ಲಿಸಿದ ಪೂರ್ಣಯ್ಯನವರು ರಾಜಪ್ರತಿನಿಧಿಯಾದರು (ಕ್ರಿ.ಶ. ೧೭೯೯ - ಕ್ರಿ.ಶ. ೧೮೧೧) ಪೂರ್ಣಯ್ಯನವರು ತೃತೀಯ ಶ್ರೀ ಸಚ್ಚಿದಾನಂದ ಭಾರತಿಗಳ ತಪೋಮಹಿಮೆ ಮತ್ತು ವಿದ್ವತ್ತುಗಳನ್ನು ಮನಗಂಡು, ಶೃಂಗೇರಿಯ ಅದ್ವೈತ ಮಠವನ್ನು ಭಕ್ತಿಯಿಂದ ಗೌರವಿಸುತ್ತಿದ್ದರು.

ಶೃಂಗೇರಿ ಮಠಕ್ಕೆ ಸಂಬಂಧಿಸಿದ ದಿವಾನ ಪೂರ್ಣಯ್ಯನವರ ೩೮ ದಾಖಲೆಗಳು ಶೃಂಗೇರಿ ಮಠದಲ್ಲಿ ದೊರಕಿವೆ [೩]. ಇವುಗಳಲ್ಲಿ ಕ್ರಿ.ಶ. ೧೭೯೪ ರ ೩ ದಾಖಲೆಗಳು ಟೀಪುವಿನ ಕಾಲಕ್ಕೆ ಸೇರಿದವುಗಳು ಇನ್ನುಳಿದ ೩೫ ದಾಖಲೆಗಳು ಕ್ರಿ.ಶ. ೧೮೦೦ - ಕ್ರಿ.ಶ. ೧೮೧೧ ರ ಅವಧಿಯವುಗಳು. ಶಾರದಮ್ಮನವರ ನವರಾತ್ರೆ ಉತ್ಸವ ಮತ್ತು ಗುರುಗಳ

ಚಾತುರ್ಮಾಸ್ಯದ ನಿಮಿತ್ತ ಉಡುಗೊರೆ, ಬೆಟ್ಟದ ಮಲ್ಲಿಕಾರ್ಜುನ ಸ್ವಾಮಿಗೆ ಪ್ರಾರ್ಥನೆ ಮಾಡಿದ್ದರಿಂದ ಮಳೆ, ಮಂತ್ರಾಕ್ಷತೆ ತಲುಪಿದ ಸಮಾಚಾರ, ಶ್ರೀಗಳವರ ದರುಶನ ಪಡೆಯುವ ಅಪೇಕ್ಷೆ, ಗುರುಗಳ ಯಾತ್ರೆ ಕಾಲದಲ್ಲಿ ಪೂರ್ವ ಮರ್ಯಾದೆ ಪ್ರಕಾರ ಸಕಲ ವ್ಯವಸ್ಥೆ, ಶೃಂಗೇರಿ ಸೀಮೆ ರೈತರಿಂದ ಮಠಕ್ಕೆ ಸರಿಯಾಗಿ ಕಂದಾಯ ಸಲ್ಲಿಸುವ ವ್ಯವಸ್ಥೆ, ಸಂಗಮ ಮತ್ತು ಶಿವಗಂಗೆ ಮಠಗಳ ವ್ಯವಹಾರ, ಮಾರ್ಕರ ಜಾತಿಧರ್ಮ, ಕಾಣಿಕೆ, ಶಿಷ್ಯರ ಆಚಾರ ವಿಚಾರ, ಶ್ರೀಗಳವರು ಮೈಸೂರಿಗೆ ದಯಮಾಡಿಸುವ ವಿಷಯ, ಅನಾವೃಷ್ಟಿ, ಶೃಂಗೇರಿ ಮಠಕ್ಕೆ ಅಗ್ರತಾಂಬೂಲ, ಹರಿಹರಪುರದ ಸ್ವಾಮಿಗಳು ಅಡ್ಡಪಲ್ಲಕ್ಕಿಗೆ ಅನರ್ಹ, ಶ್ರೀಮಠದ ಲೆಕ್ಕಪತ್ರ, ಪುತ್ತಿಗೆ ಮಠದವರು ಪ್ರವರ್ತಿಸಿದ ಆಕ್ರಮವನ್ನು ಸರಿಪಡಿಸುವುದು, ತೀರ್ಥಹಳ್ಳಿ ಹೈಗರ ಮಠದ ಸಮಾಚಾರ ಇತ್ಯಾದಿ ವಿಷಯಗಳ ಮೇಲೆ ಪ್ರಸ್ತುತ ದಾಖಲೆಗಳು ಬೆಳಕು ಬೀರುತ್ತವೆ.

ಜಗದ್ಗುರು ಪೀಠದಲ್ಲಿ ಮೂವತ್ತನೆಯವರಾದ ತೃತೀಯ ಶ್ರೀ ಸಚ್ಚಿದಾನಂದ ಭಾರತಿಗಳು (ಪೀಠಾಧಿಪತ್ಯ ಕ್ರಿ.ಶ. ೧೭೭೦-ಕ್ರಿ.ಶ. ೧೮೧೪) ದಿವಾನ ಪೂರ್ಣಯ್ಯನವರ ಸಮಕಾಲೀನರು. ಶ್ರೀ ಶಾರದಮ್ಮನವರ ನವರಾತ್ರೆ ಉತ್ಸವ ಮತ್ತು ಗುರುಗಳ ಚಾತುರ್ಮಾಸ್ಯದ ನಿಮಿತ್ತ ಧೋತ್ರದ ಜೋಡಿ ಕಳಿಸಿರುವದಾಗಿ ಮತ್ತು ಶೃಂಗೇರಿಯ ಬೆಟ್ಟದ ಮಲ್ಲಿಕಾರ್ಜುನ ಸ್ವಾಮಿಗೆ ಪ್ರಾರ್ಥನೆ ಸಲ್ಲಿಸಿದ್ದರಿಂದ ಮಳೆ ಬಂದಿರುವುದಾಗಿ ಪೂರ್ಣಯ್ಯನವರು ಗುರುಗಳಿಗೆ ಕ್ರಿ.ಶ. ೧೭೯೪ರಲ್ಲಿ ಬರೆದ ಪತ್ರದಿಂದ ತಿಳಿದು ಬರುತ್ತದೆ[3]. ಗುರುಗಳು ಶಿವಮೊಗ್ಗೆ ಪ್ರಾಂತ್ಯಕ್ಕೆ ಬಂದಾಗ ತನಗೆ ಗುರುಗಳ ದರುಶನ ಪಡೆಯಬೇಕೆಂಬ ಅಪೇಕ್ಷೆ ಇರುವದಾಗಿಯೂ ಪೂರ್ಣಯ್ಯನವರು ತಿಳಿಸಿದರು.

ಶ್ರೀ ಶಾರದಮ್ಮನವರ ನವರಾತ್ರೆ ಮಹೋತ್ಸವದಲ್ಲಿ ಬ್ರಾಹ್ಮಣ ಸಂತರ್ಪಣೆ, ರಥೋತ್ಸವ ಸಾಂಗವಾಗಿ ನಡೆದು, ನರಸಿಂಹ ಶಾಸ್ತ್ರಿಗಳ ಮುಖಾಂತರ ಕಳುಹಿಸಿದ ಮಂತ್ರಾಕ್ಷತೆ ಮತ್ತು ಶ್ರೀಮುಖ ತಲುಪಿರುವದಾಗಿ ದಿವಾನರು ಗುರುಗಳಿಗೆ ೧೭೯೪ ರಲ್ಲಿ ಬರೆದರು[4].

ಸ್ವಾಮಿಗಳವರು ತಿರುಪತಿಗೆ ದೇವರ ದರ್ಶನದ ನಿಮಿತ್ತವಾಗಿ ಶೃಂಗೇರಿಯಿಂದ ಸಾಗಿ ಬಂದಿರುವುದರಿಂದ, ನಿಮ್ಮ ನಿಮ್ಮ ಗಡಿಗಳಲ್ಲಿ ಪೂರ್ವದ ಮರ್ಯಾದೆ ಪ್ರಕಾರ ಸಕಲ ವ್ಯವಸ್ಥೆಗಳನ್ನು ಮಾಡಿ, ಸ್ವಾಮಿಗಳು ಬಂದ ವಿವರಕ್ಕೆ ತನಗೆ ಬರೆಸಿಕಳುಹಿಸಬೇಕಾಗಿ ಪೂರ್ಣಯ್ಯನವರು ೧೮೦೨ರಲ್ಲಿ ಅರಮನೆ ಸೀಮೆ ಗಡಿಗಳ ಅಮಲ್ದಾರ ಮತ್ತು

ಕಿಲ್ಲೆದಾರರಿಗೆ ಆಜ್ಞಾಪಿಸಿದರು[೭].

ಶೃಂಗೇರಿ ಸೀಮೆ ರೈತರು ಕಂದಾಯದ ಹಣವನ್ನು ಕೊಡದೇ ಇರುವವರಿಂದ ಸರಿಯಾದ ಕಾನೂನು ಮಾಡಲಾಗಿದೆ. ರೈತರಿಂದ ಬಾಕಿ ಇರುವ ಹಣವನ್ನು ಬರಮಾಡಿಕೊಳ್ಳಬೇಕು. ಗಂಧದ ಕ್ರಯದ ಹಣವನ್ನು ಮಠಕ್ಕೆ ಕೊಡಿಸಿ ಕೊಡುವ ಹಾಗೆ ನಗರದ ಸುಬೇದಾರ ರಾಮರಾಯರಿಗೆ ಪರವಾನೆ ಕಳುಹಿಸಲಾಗಿದೆ. ತುಂಟ ಜನರನ್ನು ಅಂಕಿತದಲ್ಲಿಡುವಂತೆ ಕೊಪ್ಪದ ಕಿಲ್ಲೆದಾರ ಮತ್ತು ಅಮಲ್ದಾರರಿಗೆ ಪರವಾನೆಯನ್ನು ಕಳುಹಿಸಲಾಗಿದೆ. ಕಟ್ಟಳೆ ಮೇರೆಗೆ ಬರತಕ್ಕ ಹಣ, ಹೊಂನ್ನುಗಳನ್ನು ತರಿಸಿಕೊಂಡು, ಸ್ವಾಮಿಗಳ ಅಪ್ಪಣೆ ಪ್ರಕಾರ ದೇವತಾ ಸೇವೆ ಮುಂತಾದ ಧರ್ಮಗಳನ್ನು ನಡೆಸಬೇಕಾಗಿ ದಿವಾನರು ಶೃಂಗೇರಿ ಮಠದ ಪಾರುಪತ್ಯಗಾರ ನರಸಿಂಹ ಶಾಸ್ತ್ರಿಗಳಿಗೆ ೧೮೦೨ ರಲ್ಲಿ ಬರೆದರು. [೮]

ರಾಜ್ಯಕ್ಕೆ ಅನಾವೃಷ್ಟಿ ಮುಂತಾದ ದೋಷಗಳು ಪ್ರಾಪ್ತವಾಗಿ, ಎಲ್ಲ ಬ್ರಾಹ್ಮಣರೂ ಕೂಡಿ, ಸ್ನಾನ, ಜಪ, ಮುಂತಾದ ಸತ್ಕರ್ಮಗಳನ್ನು ಮಾಡಿ. ಅನಾವೃಷ್ಟಿ ದೋಷ ಪರಿಹಾರವಾಗಿ, ಸುವೃಷ್ಟಿ ಆಗಿ, ಜನರು, ದನ, ಕರು ಸಹ ಸೌಖ್ಯದಲ್ಲಿ ಹೇಗಿರಬೇಕೋ ಆ ಪ್ರಕಾರ ಸುವೃಷ್ಟಿ ಆಗುವ ಹಾಗೆ ಮಾಡಿಸಬೇಕು ಎಂದು ದಿವಾನರು ಸ್ವಾಮಿಗಳನ್ನು ೧೮೦೪ರಲ್ಲಿ ಪ್ರಾರ್ಥಿಸಿಕೊಂಡರು.[೯]

ಪೂರ್ವಾರಭ್ಯ ನಡೆದು ಬಂದ ಪ್ರಕಾರ, ಶ್ರೀಮಠಕ್ಕೆ ಬರುವಂಥ ದವಸ, ಜವಳಿ ಮುಂತಾದ ಜಿನಸುಗಳಿಗೆ ಸುಂಕ ಕೇಳದೆ ಬಿಡಬೇಕು ಎಂಬುದಾಗಿ ಸುಂಕದ ರಾಮರಾಯರಿಗೆ ತಾಕೀತು ಕಳಿಸಿರುವದಾಗಿ ಮತ್ತು ಕೆಲವು ಜನರು ಶ್ರೀಮಠಕ್ಕೆ ಬರುವಂಥ ಜಿನಸು ಎಂಬುದಾಗಿ ಸುಳ್ಳು ಹೇಳುತ್ತ ತಮ್ಮ ತಮ್ಮ ಮನೆಗಳಿಗೆ ತರಿಸಿಕೊಳ್ಳುತ್ತಾರಾದ ಕಾರಣ, ಆ ಪ್ರಕಾರ ಮಠದ ಹೆಸರು ಹೇಳಿಕೊಂಡು ಜಿನಸುಗಳನ್ನು ತೆಗೆದುಕೊಂಡು ಬಾರದ ಹಾಗೆ ತಾವು ಕಟ್ಟಳೆ ಮಾಡಿಸಿರುವುದಾಗಿ ಪೂರ್ಣಯ್ಯನವರು ೧೮೦೬ ರಲ್ಲಿ ಸ್ವಾಮಿಗಳಿಗೆ ತಿಳಿಸಿದರು.[೧೦]

ಪೂರ್ಣಯ್ಯನವರು ಶೃಂಗೇರಿ ಮಠದ ಹಿರಿಮೆಯನ್ನು ಸದಾಕಾಲ ಎತ್ತಿ ಹಿಡಿದರೆನ್ನಲು ಕೆಲವು ದಾಖಲೆಗಳು ಸಾಕ್ಷಿಯಾಗಿವೆ. ಮದುವೆ, ಮುಂಜಿ, ಶುಭ - ಶೋಭನಗಳಲ್ಲಿ ಮೊದಲ ತಾಂಬೂಲವನ್ನು ಶೃಂಗೇರಿ ಮಠಕ್ಕೆ ಕೊಟ್ಟು, ಎರಡನೇ ತಾಂಬೂಲವನ್ನು ಶಿವಗಂಗೆ ಮಠದವರಿಗೆ ಕೊಡುವಂತೆ ಮತ್ತು ಆಚಾರ ವ್ಯವಹಾರ,

ಪ್ರಾಯಶ್ಚಿತ್ತ, ಏನಿದ್ದರೂ ಪೂರ್ವಾರಭ್ಯ ನಡೆದು ಬಂದ ಮೇರೆಗೆ ನೋಡಿಕೊಳ್ಳುವಂತೆ ಪೂರ್ಣಯ್ಯನವರು ೧೮೦೨ರಲ್ಲಿ ಸುಬೇದಾರ ಚಿರಂಜೀವಿ - ಮಧ್ವರಾಯರಿಗೆ ಆಜ್ಞಾಪಿಸಿದರು[೧೧]. ಹರಿಹರ ಪುರದ ಮಠದವರು ಪೂರ್ವಾರಭ್ಯ ಇಲ್ಲದ ಅಡ್ಡಪಲ್ಲಕ್ಕಿ ಹತ್ತಿ ಬಿರುದುಗಳನ್ನು ಏರಿಸಿ ಕೊಳ್ಳದಂತೆ ಜೋರಾಗಿ ತಾಕೀತು ಮಾಡುವ ಹಾಗೆ ಕೊಪ್ಪದ ಹೋಬಳಿ ಅಮಲ್ದಾರರಿಗೆ ತಾವು ಪರವಾನೆ ಕಳಿಸಿರುವದಾಗಿ ದಿವಾನರು ಶ್ರಿಸಚ್ಚಿದಾನಂದ ಭಾರತಿಗಳಿಗೆ ೧೮೦೨ರಲ್ಲಿ ಅರುಹಿದರು[೧೨]. ಪೂರ್ವಾರಭ್ಯ ಶೃಂಗೇರಿ ಮಠದ ಅಧೀನದಲ್ಲಿರುವ ತೀರ್ಥಹಳ್ಳಿ ಹೈಗ ಮಠದ ಯತೀಶ್ವರರು ಮುಕ್ತರಾಗಲು, ಅಲ್ಲಿ ಅವರ ಶಿಷ್ಯರು ಬಾಲ್ಯದೆಶೆಯಲ್ಲಿರುವಾಗ, ಪುತ್ತಿಗೆ ಮಠದವರು ಪ್ರವರ್ತಿಸಿದ ಅಕ್ರಮವನ್ನು ಸರಿಪಡಿಸಬೇಕಾಗಿ ಪೂರ್ಣಯ್ಯನವರು ಕವಲೆದುರ್ಗದ ಅಮೂಲ ಶಂಕರಯ್ಯನವರಿಗೆ ಆಜ್ಞಾಪಿಸಿದರು[೧೩].

ಜಾತಿ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತೆಂಬುದಕ್ಕೆ ಒಂದು ಉದಾಹರಣೆ ನೀಡಬಹುದು. ಮಾರ್ಕರು ಪೂರ್ವಾರಭ್ಯ ನಡೆದು ಬಂದ ತಮ್ಮ ಜಾತಿ ಧರ್ಮದ ನಡತೆಗಳ ಬಿಟ್ಟು, ಬ್ರಾಹ್ಮಣರು ನಡೆಯುವಂಥ ನಡತೆಗಳನ್ನೇ ನಡೆಯುತ್ತಾರಾದ ಕಾರಣ, ಈ ಜನ ಯಾವತ್ತೂ ಶೃಂಗೇರಿ ಮಠದ ಶಿಷ್ಯರಿರುವುದರಿಂದ ತಮ್ಮ ಜಾತಿ ಧರ್ಮದಲ್ಲಿ ನಡೆಯುವುದೇ ಹೊರತು ಬ್ರಾಹ್ಮಣರ ನಡತೆಗಳ ನಡೆಯದ ಹಾಗೆ ಮಾಡುವುದು ಮತ್ತು ಹೆಚ್ಚು ನಡತೆ ಯಾರು ನಡೆಯುತ್ತಾರೋ ಅಂಥವರನ್ನು ಪಹರೆ ಹಾಕಿ ಹಜೂರರಿಗೆ ಕಳುಹಿಸಬೇಕು ಎಂದು ಪೂರ್ಣಯ್ಯನವರು ೧೮೦೨ರಲ್ಲಿ, ಮೈಸೂರು, ತಾಯೂರು, ಹರದನಹಳ್ಳಿ, ಯಳಂದೂರು, ಗುಂಡಲು, ತೆರಕಣಾಂಬಿ ಮುಂತಾದ ಅರಮನೆ ಸೀಮೆ ಗಡಿಗಳ ಕಿಲ್ಲೆದಾರ ಮತ್ತು ಅಮಲ್ದಾರರಿಗೆ ಆಜ್ಞಾಪಿಸಿದರು[೧೪].

ಸಂಗಮದವರು ಮತ್ತು ಶಿವಗಂಗೆ ಮಠದವರು ಏಕಸ್ವರಾಗಿ, ರಾಜಭಯವಿಲ್ಲದೆ, ಕುದುರೆ ಕಟ್ಟಿಕೊಂಡು ಮಧ್ಯಮಾರ್ಗದಲ್ಲಿ ಅಡ್ಡಿಮಾಡಿ ದುರ್ವ್ಯವಹಾರ ಮಾಡಬೇಕೆಂಬ ಯೋಚನೆಯನ್ನು ಬಂದು ಮಾಡಿರುವುದರಿಂದ, ಶೃಂಗೇರಿ ಸ್ವಾಮಿಗಳು ಬೆಂಗಳೂರಿಗೆ ಮತ್ತು ಶ್ರಿರಂಗಪಟ್ಟಣಕ್ಕೆ ಸುಖದಿಂದ ಚಿತ್ತೈಸಬೇಕಾಗಿ ೧೮೦೬ರಲ್ಲಿ ದಿವಾನರು ಶ್ರಿ ಸಚ್ಚಿದಾನಂದ ಭಾರತಿಗಳಿಗೆ ಭಿನ್ನವತ್ತಳೆ ಕಳುಹಿದರು[೧೫].

೧೮೦೫ರಲ್ಲಿ ಸ್ವಾಮಿಗಳು ಮದ್ರಾಸಿಗೆ ಪ್ರಯಾಣ ಮಾಡಿದಾಗ, ಅಲ್ಲಿ ಗವರ್ನರರು ಸ್ವಾಮಿಗಳ ದರ್ಶನ ಪಡೆದರು. ಪ್ರಯಾಣದ ಸಕಲ ವ್ಯವಸ್ಥೆಯನ್ನು

ಪೂರ್ಣಯ್ಯನವರು ಮಾಡಿದರು. ಮದ್ರಾಸಿನಿಂದ ಮರುಪ್ರಯಾಣಕ್ಕೆ ಸಂಬಂಧಿಸಿ ಗವರ್ನರರು, ಗುರುಗಳಿಗೆ ಸಕಲ ವ್ಯವಸ್ಥೆ ಮತ್ತು ರಕ್ಷಣೆ ನೀಡುಂತೆ, ರಹದಾರಿ ಹೊರಡಿಸಿದರು[೧೬]. ಗುರುಗಳು ಮದ್ರಾಸಿನಿಂದ ತಿರುಪತಿ, ಕಂಚಿ, ಕಾಳಹಸ್ತಿ, ಮಧುರೆ, ರಾಮೇಶ್ವರ, ತ್ರಿವೇಂದ್ರಮ್, ಶ್ರಿರಂಗಪಟ್ಟಣ ಮತ್ತು ಬೆಂಗಳೂರು ಸಂದರ್ಶಿಸಿ ಶೃಂಗೇರಿಗೆ ಬಂದರು.

ಸ್ವಾಮಿಗಳವರು ಮೈಸೂರಿಗೆ ದಯಮಾಡಿಸುವುದರಿಂದ ನಿಮ್ಮ ನಿಮ್ಮ ತಾಲೂಕಿನ ಸರಹದ್ದಿಗೆ ಬಂದಲ್ಲಿ, ನೀವು, ಶಿರಸ್ತೆದಾರರು, ಗ್ರಾಮದ ಮಹಾಜನರು, ವರ್ತಕರು, ತಾಳ, ಮೇಳ, ಭಜಂತ್ರಿ, ಮುಂತಾಗಿ ಕರೆದುಕೊಂಡು ಹೋಗಿ, ಎದುರುಗೊಂಡು, ಕರೆದುಕೊಂಡು ಬಂದು ಒಳ್ಳೆ ಸ್ಥಳದಲ್ಲಿ ಇರಿಸಿ, ಪೂರ್ವದ ಮೇರೆಗೆ ಮರ್ಯಾದೆಯಿಂದ ನಡಕೊಂಡು ಬರಬೇಕು ಮತ್ತು ರಾತ್ರೆ ಕಾಲದಲ್ಲಿ ಕಳ್ಳರ ಉಪದ್ರ ಇಲ್ಲದಂತೆ ಬಂದೋಬಸ್ತ ಮಾಡಿಸಬೇಕು ಎಂದು ಪೂರ್ಣಯ್ಯನವರು ಅರಮನೆ ಸೀಮೆ ಗಡಿಗಳ ಅಮಲ್ದಾರ, ಕಿಲ್ಲೇದಾರ, ಜಾಗಿರದಾರ, ಮುಂತಾದವರಿಗೆ ನಿರೂಪ ಹೊರಡಿಸಿದರು[೧೭].

ಶೃಂಗೇರಿ ವಿದ್ಯಾಶಂಕರ ದೇವಸ್ಥಾನದ ಗಚ್ಚು-ಗಾರೆ ಶಿಥಿಲವಾಗಿರುವುದರಿಂದ, ಗಚ್ಚಿನ ಕೆಲಸಕ್ಕೆ ಬೇಕಾದ ಆಳುಕಾಳು, ಮಜೂರಿ, ಸುಣ್ಣ ಮತ್ತು ಬೇಕಾದ ಸಾಮಾನುಗಳನ್ನು ಒದಗಿಸಿಕೊಡಬೇಕೆಂದು ದಿವಾನರು ಕೊಪ್ಪದ ಅಮಲ್ದಾರ ಮಧ್ವರಾಯರಿಗೆ ೧೮೦೭ರಲ್ಲಿ ಆಜ್ಞಾಸಿದರು[೧೮].

ಶೃಂಗೇರಿ ಮಠಕ್ಕೆ ಅನಾದಿಕಾಲದಾರಭ್ಯ ಶೃಂಗೇರಿ ಗ್ರಾಮಗಳು ತಮ್ಮ ಸ್ವಾಧೀನಕ್ಕೆ ಇನಾಮ ನಡೆದು ಬಂದಿರುವುದರಿಂದ, ಸದರಿ ಗ್ರಾಮಗಳಲ್ಲಿ ತಾವು ವೃತ್ತಿಗಳ ನಿಬಂಧನೆ ಮಾಡಿ, ಗ್ರಾಮವನ್ನು ಮಹಾಜನರು, ಬ್ರಾಹ್ಮಣರು, ಮುಂತಾದವರಿಗೆ ಕೊಟ್ಟಿರುವಿರಿ. ಆ ಜನರು ಒಂದು ವೇಳೆ ತಮ್ಮ ಅಪ್ಪಣೆ ಪ್ರಕಾರ ಶುಶ್ರೂಷೆ ಮಾಡಿ ನಡೆಯದೆ ತಕರಾರು ಮಾಡಿದ್ದಲ್ಲಿ, ಸದರಿ ಇನಾಮ ಇರುವ ಗ್ರಾಮಗಳನ್ನು ಅಂಥವರಿಗೆ ನಡೆಸುವ ಅವಶ್ಯವಿಲ್ಲ ಎಂದು ಪೂರ್ಣಯ್ಯನವರು ೧೮೧೦ರಲ್ಲಿ ಸ್ವಾಮಿಗಳಿಗೆ ತಿಳಿಸಿದರು[೧೯].

ಸೀಮೆಯ ಬಂದೋಬಸ್ತಿನ ಬಗ್ಗೆ ಮಠದಲ್ಲಿ ಇರಬೇಕು. ಸೀಮೆಯ ಸಾಗುಸಂತು ಮತ್ತು ಬಾಕಿ ಬರತಕ್ಕ ಹಣವನ್ನು ನಿರ್ದಾಕ್ಷಿಣ್ಯದಿಂದ ಬರಮಾಡಿಕೊಂಡು, ಶ್ರೀಮಠದ ಕೆಲಸಕ್ಕೆ ಅನುಕೂಲವಾಗುವಂತೆ, ಮಾಡಿಸಬೇಕು. ಶ್ರೀ ಮಠದ ಖರ್ಚು - ವೆಚ್ಚವನ್ನು ಶ್ರೀಗಳವರ ಆಜ್ಞೆ ಮೇರೆಗೆ ಮಾಡಬೇಕೆಂದು ಶೃಂಗೇರಿ ಮಠದ ಸುಬೇದಾರ ಮಲ್ಲಪ್ಪನವರಿಗೆ

ಪೂರ್ಣಯ್ಯನವರು ೧೮೧೦ ರಲ್ಲಿ ಆಜ್ಞಾಪಿಸಿದರು[೨೦].

ಮೈಸೂರಿನ ದಿವಾನ ಪೂರ್ಣಯ್ಯನವರು ಶೃಂಗೇರಿ ಜಗದ್ಗುರುಗಳಾದ ತೃತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು ಮತ್ತು ಅವರ ಮಠವನ್ನು ಗೌರವಿಸುತ್ತಿದ್ದರೆಂಬುದು ಮೇಲ್ಕಾಣಿಸಿದ ಪೂರ್ಣಯ್ಯನವರ ಕಾಗದಗಳಿಂದ ಸ್ಪಷ್ಟವಾಗುತ್ತದೆ. ಹೆಚ್ಚಿನ ಬಿರುದು ಬಾವಲಿಗಳಿಗೆ ಶೃಂಗೇರಿ ಮಠವೊಂದೇ ಅರ್ಹ ಎಂಬುದನ್ನು ಪೂರ್ಣಯ್ಯನವರು ಇತರ ಮಠಗಳಿಗೆ ತಿಳಿಸಿದರು. ಮಠಕ್ಕೆ ರೈತರಿಂದ ಸಲ್ಲಬೇಕಾದ ಕಂದಾಯ, ಶಿಷ್ಯರ ಆಚಾರ ವಿಚಾರ, ವಿದ್ಯಾಶಂಕರ ದೇವಾಲಯದ ದುರಸ್ತಿ ಕೆಲಸ, ಜಾತಿ - ಧರ್ಮ ವಿಚಾರ, ಗುರುಗ ತ್ರ, ಮೊದಲಾದ ಶ್ರೀಮಠಕ್ಕೆ ಸಂಬಂಧಿಸಿದ ಸಕಲ ವಿಷಯಗಳಲ್ಲೂ ಪೂರ್ಣಯ್ಯನವರು ವಿಶೇಷ ಆಸಕ್ತಿ ವಹಿಸುತ್ತಿದ್ದರು. ಪೂರ್ಣಯ್ಯನವರು ಗುರುಗಳಿಗೆ ಮತ್ತು ಇನ್ನಿತರ ಅಧಿಕಾರಿಗಳಿಗೆ ಬರೆದ ಪತ್ರಗಳು ಕನ್ನಡದಲ್ಲಿವೆ. ದಾಖಲೆಗಳು ಗುರುಗಳ ಸಕಲ ಬಿರುದಾವಳಿಗಳಿಂದ ಪ್ರಾರಂಭವಾಗಿ, ಬಿಂನಹ ಎಂಬ ಶಬ್ದದಿಂದ ಮುಕ್ತಾಯವಾಗುತ್ತವೆ. ಕೆಲವೊಂದು ದಾಖಲೆಗಳ ಕೊನೆಯಲ್ಲಿ ರುಜು ಶ್ರೀ ಎಂದು ಉಲ್ಲೇಖಿಸಲಾಗದೆ. ಜಗದ್ಗುರುಗಳು ಪೂರ್ಣಯ್ಯನವರಿಗೆ ಬರೆದ ಪತ್ರಗಳು ಮಠದಲ್ಲಿ ದೊರಕಿಲ್ಲ. ಕಾಲ ಸರಿದಂತೆ, ಮಠದಲ್ಲಿ ಸಹಸ್ರಾರು ದಾಖಲೆಗಳು ಕಳೆದುಹೋಗಿವೆ, ಇಲ್ಲವೆ ನಶಿಸಿವೆ.[೨೧] ಮೈಸೂರಿನಲ್ಲಿ, ಮುಂದೆ ಅರಸೊತ್ತಿಗೆಯ ಜವಾಬ್ದಾರಿ ವಹಿಸಿಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರೂ ಶೃಂಗೇರಿ ಜಗದ್ಗುರುಗಳನ್ನು ಮತ್ತು ಅವರ ಮಠ ವನ್ನು ಅತ್ಯಂತ ಭಕ್ತಿಯಿಂದ ಕಂಡರೆಂದು ಚರಿತ್ರೆಯಿಂದ ತಿಳಿದು ಬರುತ್ತದೆ.

ಟಿಪ್ಪಣಿಗಳು ಮತ್ತ ಸಾಂದರ್ಭಿಕ ಗ್ರಂಥಗಳು

೧ ಹೆಚ್ಚಿನ ಮಾಹಿತಿಗಾಗಿ ಲೇಖಕರ ಎ ಹಿಸ್ಟೋರಿ ಆಫ್ ಶೃಂಗೇರಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨ ಮತ್ತು ಶೃಂಗೇರಿ ಧರ್ಮಸಂಸ್ಥಾನ, ಶೃಂಗೇರಿ ಮಠ, ೧೯೮೩, ನೋಡಿರಿ.

೨ ಶೃಂಗೇರಿ ಜಗದ್ಗುರು ಪೀಠದಲ್ಲಿ ೨೭ನೆಯವರಾದ ದ್ವಿತೀಯ ಶ್ರೀ ಸಚ್ಚಿದಾನಂದ ಭಾರತಿಗಳ ಪೀಠಾಧಿಪತ್ಯ, ಕ್ರಿ.ಶ. ೧೭೦೫ - ೧೭೪೧.

೩ ಲೇಖಕರ ಪೂರ್ವೋಲ್ಲೇಖಿತ ಗ್ರಂಥಗಳನ್ನು ಓದಿರಿ.

೪ (ಅ) ಶೃಂಗೇರಿ ಶ್ರೀಮಠೀಯ, ಪ್ರಾಕ್ತನ ಲೇಖಮಾಲಾ ಸಂಗ್ರಹ (ಶೃ.ಶ್ರೀ. ಪ್ರಾ.ಲೇ.ಸ.) ಮೈಸೂರು ೧೯೨೭, ದಾ (ದಾಖಲೆಗಳು) : ೬೨ -೧೦೮

(ಬ) ಆ್ಯನ್ಯುಅಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ (ಎಂ.ಎ.ಆರ್) ೧೯೧೬.

(ಕ) ಎ.ಕೆ. ಶಾಸ್ತ್ರಿ, ಎ ಕ್ಯಾಟಲಾಗ್ ಆಫ್ ದಿ ರಿಕಾರ್ಡ್ಸ್ ಇನ್ ದಿ ಶೃಂಗೇರಿ ಮಠ್ (ಎಸ್. ಆರ್)

ಪಾರ್ಟ್ - ೧, ಅಧ್ಯಾಯ ೭, ದಾ : ೧ - ೨೩ ಮತ್ತು

ಪಾರ್ಟ್ - ೨, ಅಧ್ಯಾಯ ೫, ದಾ: ೧- ೧೭ (ಎರಡನೇ ಭಾಗದಲ್ಲಿರುವ ಈ ದಾಖಲೆಗಳು ಶೃ.ಶ್ರಿ. ಪ್ರಾ. ಲೇ. ಸ. ದಲ್ಲಿ ಪ್ರಕತಟವಾಗಿವೆ.

೫ ಎಸ್. ಆರ್ ೧, ಅಧ್ಯಾಯ ೭, ದಾ. ೧

೬ ಅದೇ, ಅದೇ, ದಾ. ೩

೭ ಅದೇ, ಅದೇ , ದಾ. ೪

೮ ಅದೇ , ಅದೇ, ದಾ. ೫

೯ ಅದೇ, ೨, ಅಧ್ಯಾಯ ೫, ದಾ. ೨ ಮತ್ತು ಶೃ.ಶ್ರಿ. ಪ್ರಾಲೇ.ಸ. ೯೩

೧೦ ಅದೇ, ೨, ಅದೇ, ದಾ. ೩. ಮತ್ತು ಅದೇ, ೯೪

೧೧ ಅದೇ, ೨, ಅದೇ, ದಾ. ೬ ಮತ್ತು ಅದೇ, ೯೭

೧೨ ಅದೇ, ೨, ಅದೇ, ದಾ. ೮ ಮತ್ತು ಅದೇ ೧೦೬

೧೩ ಅದೇ, ೨, ಅದೇ, ದಾ. ೧೮ ಮತ್ತು ಅದೇ ೧೦೬

೧೪ ಅದೇ, ೧, ಅಧ್ಯಾಯ ೭, ದಾ. ೧೧

೧೫ ಅದೇ, ಅದೇ, ಅದೇ, ದಾ. ೮.

೧೬ ಶೃ.ಶ್ರಿ. ಪ್ರಾ.ಲೇ. ಸ. ೯೫

೧೭ ಎಸ್. ಆರ್. ಭಾಗ ೧, ಅದ್ಯಾಯ ೭, ೧೯

೧೮ ಅದೇ, ೧೫

೧೯ ಎಸ್.ಆರ್. ಭಾಗ ೨, ಅಧ್ಯಾಯ ೫, ೧೪

೨೦ ಅದೇ, ಭಾಗ ೧, ಅಧ್ಯಾಯ ೭, ೨೨

೨೧ ಶೃಂಗೇರಿ ಮಠದ ಕಡತಗಳನ್ನು, ಮೈಸೂರಿನ ಅರಮನೆಯ ಮತ್ತು ಯಳಂದೂರಿನ ದಾಖಲೆಗಳನ್ನು ಪರಿಶೀಲಿಸಿದರೆ, ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಇನ್ನೂ ಹೆಚ್ಚಿನ ಮಾಹಿತಿ ದೊರೆಯಬಹುದು.

ಭಾರತೀಯ ಮಾಧ್ಯಮ ಪರಿಸರದಲ್ಲಿ ಉದಾರೀಕರಣ

- ಎಸ್. ಜಿ. ಲಕ್ಷ್ಮೀನಾರಾಯಣ ಯಾದವ್

'ಇಂಡಿಯಾ ಟುಡೇ' ಭಾರತದ ಅತ್ಯಂತ ಪ್ರತಿಷ್ಠಿತ ಪಾಕ್ಷಿಕ. ಇದು ಭಾರತೀಯ ಪತ್ರಿಕೋದ್ಯಮದ ಸಂದರ್ಭದಲ್ಲಿ ವಾರ್ತಾರಂಜಕ ಪತ್ರಿಕೋದ್ಯಮದ ಒಂದು ಹೊಸ ಆಯಾಮ ಸೃಷ್ಟಿಸಿದೆ. ಇಂದು ಈ ಪತ್ರಿಕೆಯ ಆಂಗ್ಲ ಆವೃತ್ತಿ ಅತ್ಯಧಿಕ ಪ್ರಸಾರವನ್ನು ಹೊಂದಿದೆ. ಇತರೆ ಪ್ರಮುಖ ಭಾರತೀಯ ಭಾಷಾ ಪತ್ರಿಕೆಗಳಲ್ಲೂ ವಿಶೇಷ ಆವೃತ್ತಿಯನ್ನು ಪ್ರಕಟಿಸಿ, ಭಾರತೀಯ ಪತ್ರಿಕೋದ್ಯಮದಲ್ಲಿ ಒಂದು ಹೊಸ ಪ್ರವೃತ್ತಿಗೆ ಅವಕಾಶ ಕಲ್ಪಿಸಿತು. ಲಿವಿಂಗ್ ಮೀಡಿಯಾ ಇಂಡಿಯಾ ಲಿಮಿಟೆಡ್ ಈ ಪತ್ರಿಕೆಯ ಪ್ರಕಾಶಕ ಸಂಸ್ಥೆ. ಭಾರತೀಯ ಪತ್ರಿಕೋದ್ಯಮದಲ್ಲೇ ತನ್ನ ಕ್ರಿಯಾಶೀಲ ಪತ್ರಿಕೋದ್ಯಮದ ತತ್ವಗಳಿಗೆ ಹೆಸರಾದ ಈ ಸಂಸ್ಥೆ ಇಂದು ಟೈ, ಕಾಸ್ಮೊಪೊಲಿಟನ್ ಹಾಗೂ ಇನ್ನೂ ಕೆಲವು ಪ್ರತಿಷ್ಠಿತ ವಿದೇಶಿ ಪತ್ರಿಕೆಗಳ ಸಹಯೋಗಕ್ಕೆ ಹಾತೊರೆದು, ವಿದೇಶೀ ಪತ್ರಿಕೆಗಳ ಭಾರತೀಯ ಅವತರಣಿಕೆಗೆ ಕಾತುರವಾಗಿರುವುದು ನಮ್ಮ ಸಮಕಾಲೀನ ಪತ್ರಿಕೋದ್ಯಮದ ಒಂದು ಸಾಮೂಹಿಕ ಸೋಜಿಗ.

ಒಂದು ಯಶಸ್ವಿ ಪತ್ರಿಕೆ ವಿದೇಶೀ ಸಹಯೋಗಕ್ಕೆ ಹಾತೊರೆಯುತ್ತಿರುವುದು ಕುತೂಹಲಕಾರಿ ವಿಷಯವಾದರೂ ಭಾರತೀಯ ಪತ್ರಿಕೆಗಳ ಸ್ವಂತಿಕೆ ಹಾಗೂ ನೆಲೆಗಟ್ಟನ್ನು ಪ್ರಶ್ನಿಸುತ್ತಿರುವುದು ಇಲ್ಲಿ ಅಪ್ರಸ್ತುತವೇನಲ್ಲ. ಬಹುತೇಕ ಪ್ರತಿಷ್ಠಿತ ಭಾರತೀಯ ಪತ್ರಿಕಾ ಸಂಸ್ಥೆಗಳು ವಿದೇಶೀ ಪತ್ರಿಕೆಗಳ ಸಹಕಾರಕ್ಕೆ ಧಾವಿಸುತ್ತಿರುವುದು ನಮ್ಮ ಬದಲಾಗುತ್ತಿರುವ ರಾಜಕೀಯ, ಅರ್ಥವ್ಯವಸ್ಥೆಯ ನೀತಿಗಳಿಗೆ ಕನ್ನಡಿಯಾಗಿದೆ. ಆನಂದ ಬಜಾರ್ ಸಂಸ್ಥೆ ಬ್ರಿಟನ್ನಿನ ಪಿಯರ್ ಸನ್ ಗುಂಪಿನ ದಿ ಫೈನಾನ್ಸಿಯಲ್ ಟೈಮ್ಸ್ ಮತ್ತು ದಿ ಎಕಾನಮಿಸ್ಟ್ ಹಾಗೂ ಹಿಂದು ಉದ್ಯೋಗಪತಿಗಳು ಇಂಟರ್ ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್ ಹಾಗೂ ಎಲ್ ಅಂಡ್ ಟಿ. ವಿ. ಗೈಡ್ ಪತ್ರಿಕೆಯನ್ನು ಭಾರತದಲ್ಲಿ ಪ್ರಕಟಿಸಲು ಮುಂದಾಗಿದೆ.

ಉದಾರೀಕರಣದ ಮುಕ್ತ ಆರ್ಥಿಕ ನೀತಿಯಡಿಯಲ್ಲಿ ಭಾರತವಿಂದು ವಿಶ್ವ ಸಮುದಾಯಕ್ಕೆ ತನ್ನೆಲ್ಲ ಬಾಗಿಲುಗಳನ್ನು ತೆರೆದು ಸ್ವಾಗತಿಸಿದೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆನಿಸಿಕೊಂಡಿರುವ ಭಾರತ ಹಲವಾರು ಸಮಸ್ಯೆಗಳಿಂದ ನರಳುತ್ತಿದೆ ಯಾದರೂ, ಉದಾರೀಕರಣದ ಹೊಸ ಗಾಳಿಯಲ್ಲಿ ಇತರ ಉದ್ಯಮಗಳಂತೆ ಪ್ರಸಾರ

ಮಾಧ್ಯಮದಲ್ಲಿ ಬಲಾಢ್ಯರೆನಿಸಿಕೊಂಡವರೆಲ್ಲಾ ಭಾರತೀಯ ಮುದ್ರಣ ಮಾಧ್ಯಮ ರಂಗಕ್ಕೆ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾರೆ. ಈ ವಿಚಾರ ಕಳೆದ ಕೆಲವು ವರ್ಷಗಳಿಂದ ಭಾರತೀಯ ಮಾಧ್ಯಮ ವಲಯದಲ್ಲಿ ಚರ್ಚಾಗ್ರಾಸ ವಿಷಯವಾಗಿದ್ದು, ವಿದೇಶೀ ಮಾಲೀಕತ್ವ ಭಾರತೀಯ ಮಾಧ್ಯಮ ರಂಗವನ್ನು ಪ್ರವೇಶಿಸುವ ಕುರಿತಾಗಿ ಪರ ವಿರೋಧ ಅಭಿಪ್ರಾಯಗಳಿವೆ.

ವಿಶ್ವ ಸಮುದಾಯಕ್ಕೆ ಎಲ್ಲಾ ರಂಗಗಳ ಬಾಗಿಲುಗಳು ತೆರೆದಿರುವಾಗ ಕೇವಲ ಸುದ್ದಿ ಮಾಧ್ಯಮಗಳ ವಿಚಾರದಲ್ಲಿ ಮಾತ್ರ ಈ ಪ್ರತ್ಯೇಕತೆ ಏಕೆ? ಎಂಬ ಸಂದೇಹ ಸಹಜ. ಈ ಸಂದರ್ಭದಲ್ಲಿ ಭಾರತೀಯ ಪತ್ರಿಕೋದ್ಯಮದ ವಿಕಾಸ, ಪರಂಪರೆ ಹಾಗೂ ಪಾತ್ರಗಳ ಹಿನ್ನೆಲೆಯ ಪರ್ಯಾಲೋಚನೆ ಸಮಂಜಸ.

'ಜೇಮ್ಸ್ ಆಗಸ್ಟಸ್ ಹಿಕ್ಕಿ ' ಯ 'ಬೆಂಗಾಲ್ ಗೆಜೆಟ್ 'ಪತ್ರಿಕೆಯಿಂದ ಪ್ರಾರಂಭ ವಾದ ಭಾರತೀಯ ಮುದ್ರಣಮಾಧ್ಯಮ ಎರಡು ಶತಮಾನಗಳ ವೃತ್ತಿ ಪರಂಪರೆ ಹೊಂದಿದೆ. ವಸಾಹತು ಕಾಲದಂದಿನಿಂದಲೂ ಹಕ್ಕು ಮತ್ತು ಸ್ವಾತಂತ್ರ್ಯ ಮತ್ತದರ ಪೂರಕ ಸ್ವಾತಂತ್ರ್ಯಗಳನ್ನು ಭಾರತ ಸ್ವಾತಂತ್ರ್ಯ ಹೋರಾಟದೊಂದಿಗೇ ಗುರುತಿಸ ಬಹುದಾಗಿದೆ.

೧೯೪೭ರಲ್ಲಿ ಭಾರತ ಸ್ವಾತಂತ್ರ್ಯಗೊಂಡ ನಂತರ ಭಾರತದಲ್ಲಿ ಪ್ರಚಲಿತವಿದ್ದ ವಿದೇಶೀ ಮಾಲೀಕತ್ವದ ಪತ್ರಿಕೆಗಳು ಭಾರತದ ಸಮಗ್ರ ಹಿತದೃಷ್ಟಿಯಿಂದ ಮತ್ತು ಮಾಧ್ಯಮದ ದೃಷ್ಟಿಯಿಂದ ಉಚಿತವೇ? ಎಂಬುದಾಗಿ ಭಾರತದ ಐತಿಹಾಸಿಕ ಅನುಭವದಿಂದಾಗಿ ಸವಾಲಿನ ಪ್ರಶ್ನೆ ಎದ್ದಿತು. ಇದಕ್ಕಾಗಿ ಜಸ್ಟೀಸ್ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಪ್ರಥಮ ಪತ್ರಿಕಾ ಆಯೋಗವನ್ನು ನೇಮಿಸಲಾಯಿತು. ೧೯೫೪ರಲ್ಲಿ ಪ್ರಥಮ ಪತ್ರಿಕಾ ಆಯೋಗ ವಿದೇಶೀ ಶಕ್ತಿಗಳಿಗೆ ಭಾರತದಲ್ಲಿ ಸುದ್ದಿ ಮಾಧ್ಯಮಗಳನ್ನು ನಡೆಸಲು ಅವಕಾಶವನ್ನು ನೀಡಬಾರದೆಂದೂ, ವಿದೇಶೀಯರು ವಸಾಹತು ಹಾಗೂ ಗುಲಾಮಿ ಪರಂಪರೆಯನ್ನು ಮುಂದುವರೆಸುವರೆಂದೂ, ವಿದೇಶೀ ಮಾಲೀಕತನದ ಪತ್ರಿಕೆಯ ಬಂಡವಾಳ ಮತ್ತು ನೌಕರರಲ್ಲಿ ವಿಶೇಷವಾಗಿ ಉನ್ನತ ಮಟ್ಟದಲ್ಲಿ ಭಾರತೀಯರೇ ಇರಬೇಕೆಂದು, ಇದು ಭಾರತದ ರಾಷ್ಟ್ರೀಯ ಹಿತದೃಷ್ಟಿಯಿಂದ ಆರೋಗ್ಯಪೂರ್ಣ ಮತ್ತು ಪ್ರಜಾಸತ್ತಾತ್ಮಕ ಪತ್ರಿಕೋದ್ಯಮದ ವಿಕಾಸದ ದೃಷ್ಟಿಯಿಂದ ಸಂಪೂರ್ಣ ಅಗತ್ಯವೆಂದು, ನೇರ ಹಾಗೂ ಸ್ಪಷ್ಟ ಶಿಫಾರಸ್ಸು ಮಾಡಿದರು.

ಅಂದಿನ ಮುದ್ರಣ ಮಾಧ್ಯಮ ಹಾಗೂ ರಾಜಕೀಯ ಚಿಂತಕರಿಂದ ಈ ಮಹತ್ವದ ಶಿಫಾರಸ್ಸುಗಳಿಗೆ ಒಪ್ಪಿಗೆ ಹಾಗೂ ಬೆಂಬಲಗಳು ದೊರೆತವು. ೧೯೫೫ರ ಸೆಪ್ಟೆಂಬರ್ ೩೦ ರಿಂದ ಲೋಕ ಸಭೆಯಲ್ಲಿ ಅಂದಿನ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ಮಂತ್ರಿಗಳಾದ ಬಿ.ವಿ. ಕೇಸ್ಕರ್‌ರವರು ಭಾರತ ಸರ್ಕಾರ ಪತ್ರಿಕಾ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಲು ನಿರ್ಧರಿಸಿದೆ ಎಂದು ಪ್ರಕಟಿಸಿದರು. ವಿದೇಶೀ ಸುದ್ದಿ ಪತ್ರಿಕೆಗಳು, ರಂಜಕ ಪತ್ರಿಕೆಗಳು, ನಿಯತಕಾಲಿಕೆಗಳೇ ಅಲ್ಲದೇ ಸುದ್ದಿ ಹಾಗೂ ದೈನಂದಿನ ಆಗುಹೋಗುಗಳನ್ನು ವರದಿ ಮಾಡುವ ವಿದೇಶೀ ಪತ್ರಿಕೆಗಳನ್ನು ಭಾರತದಲ್ಲಿ ಪ್ರಕಟಿಸಲು ಅವಕಾಶವಿಲ್ಲ ಎಂಬ ಪತ್ರಿಕಾ ಆಯೋಗದ ಶಿಫಾರಸ್ಸನ್ನು ಒಪ್ಪಿಕೊಳ್ಳ ಲಾಯಿತು. ಅಲ್ಲದೇ ಅವರು, ಭಾರತದಲ್ಲಿ ನ್ಯೂಯಾರ್ಕ್ ಟೈಮ್ಸ್ ತನ್ನ ಪ್ರಕಾಶನವನ್ನು ಹೊರತರುವ ಅಭಿಲಾಷೆಯ ಸೂಚನೆಯನ್ನು ಪುನರಾವಲೋಕಿಸುತ್ತಾ ಮೇಲಿನ ನೀತಿ ನಿಯಮಾವಳಿಗಳ ಹಿನ್ನೆಲೆಯಲ್ಲಿ ಆ ಪತ್ರಿಕೆಯ ಉದ್ದೇಶಗಳಿಗೆ ಆಸ್ಪದ ನೀಡಲಾಗದು ಎಂದಿದ್ದರು.

ಎರಡನೆಯ ಪತ್ರಿಕಾ ಆಯೋಗ ಜಸ್ಟೀಸ್ ಕೆ.ಕೆ. ಮ್ಯಾಥ್ಯೂ ಅವರ ಅಧ್ಯಕ್ಷತೆಯಲ್ಲಿ ೨೫ ವರ್ಷಗಳ ನಂತರ ನೇಮಕವಾಯಿತು. ಎರಡನೆಯ ಪತ್ರಿಕಾ ಆಯೋಗ ವಿಕಸಿತ ಪರಿಸರದ ಬೆಳಕಿನಲ್ಲಿ ಅದೇ ವಿಚಾರಗಳ ಕುರಿತಾಗಿ ವೃತ್ತಿ ಪೂರಕ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅದರ ಅನುಸಾರ ಒಂದು ನಿರ್ಧಿಷ್ಟ ಕಾನೂನು ಪರಿಮಿತಿಯನ್ನು ಅಳವಡಿಸಬೇಕು. ಯಾವುದೇ ಸುದ್ದಿ ಪತ್ರಿಕೆಯ ವಿದೇಶೀ ಮಾಲೀಕತನವನ್ನು ಷೇರುಗಳ ರೂಪದಲ್ಲಾಗಲೀ ಅಥವಾ ಸಾಲದ ರೂಪದಲ್ಲಾಗಲೀ ಹೊಂದಿರಕೂಡದು. ಅಲ್ಲದೇ ಇಂಥಹ ರೀತಿಯ ಹಣಕಾಸು ಸಹಕಾರವು ಸುದ್ದಿ ಪತ್ರಿಕೆಗಳನ್ನು ಹಾಗೂ ಸುದ್ದಿ ಪಾರುಪತ್ಯ ಗಳನ್ನು ತಮ್ಮ ಸ್ವಾತಂತ್ರ್ಯದಿಂದ ಕುಂಠಿತಗೊಳಿಸುತ್ತವೆ ಎಂದು ಅಭಿಪ್ರಾಯಪಟ್ಟಿತು.

೧೯೫೫ರ ಯೋಜನಾತ್ಮಕ ನಿರ್ಧಾರದಂತೆ ಯಾವುದೇ ವಿದೇಶೀ ಮಾಲೀಕರು ಭಾರತದಲ್ಲಿ ತಮ್ಮ ಮಾಧ್ಯಮ ಅಥವಾ ದಿನ ಪತ್ರಿಕೆಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಭಾರತ ಸಂವಿಧಾನದ ವಿಧಿ ೧೯ರ ರೀತ್ಯಾ ವಾಕ್ ಸ್ವಾತಂತ್ರ್ಯ ಒಂದು ಮೂಲಭೂತ ಹಕ್ಕು, ಈ ಮೂಲಭೂತ ಹಕ್ಕನ್ನು ಕೆಲವಾರು ಸಕಾರಣಿಕ ನಿರ್ಬಂಧಗಳೊಡನೆ ಭಾರತೀಯ ಪ್ರಜೆಗೆ ದತ್ತವಾಗಿರುತ್ತದೆ. ಆದರೆ ಪತ್ರಿಕಾ ಸ್ವಾತಂತ್ರ್ಯ ವಿಧಿ ೧೯ ರ ರೀತ್ಯಾ ಸಂವೈಧಾನಿಕ ನ್ಯಾಯಾಂಗದಲ್ಲಿ ಉದ್ಧೃತವಾಗಿದೆ. ಅದು ಸಂವಿಧಾನದ

ಅನುಮೋದನೆಯನುಸಾರ ಇತರೆ ಕಾನೂನುಗಳಿಂದ ಕೂಡಿದ ರಾಷ್ಟ್ರೀಯ ನೀತಿಯ ನಿರ್ಧಾರವಾಗಿದೆ. ವಿಶೇಷವಾಗಿ ೧೮೬೭ರ ಪತ್ರಿಕಾ ನಿಯಂತ್ರಣ ಕಾಯ್ದೆಯನ್ನು ಪುನರ್ ವಿಮರ್ಶಿಸಿ ೧೯೬೦ ರಲ್ಲಿ ನಮ್ಮ ರಾಷ್ಟ್ರೀಯ ಅಗತ್ಯಗಳಿಗನುಸಾರವಾಗಿ ನವೀಕರಿಸಲಾಯಿತು.

ವಿದೇಶೀ ಸುದ್ದಿ ಪಾರುಪತ್ಯಗಳ ವಿಚಾರವಾಗಿ ಬೇರೆಯದೇ ಆದ ನಿರ್ಧಾರವನ್ನು ಸರ್ಕಾರ ತಳೆದಿದೆ. ವಿದೇಶೀ ಸುದ್ದಿ ಪಾರುಪತ್ಯೆಗಳು ಭಾರತೀಯ ಪತ್ರಿಕೆಗಳಿಗೆ ನೇರವಾಗಿ ಸೇವೆಯನ್ನು ನೀಡುವಂತಿಲ್ಲ. ಆದರೆ ತಮ್ಮ ಸೇವೆಗಳನ್ನು ಅವು ಭಾರತೀಯ ಸುದ್ದಿ ಪಾರುಪತ್ಯೆಗಳ ಮುಖಾಂತರ ನೀಡಬಹುದು. (ಈ ನೀತಿಯನ್ನು ಇತ್ತೀಚೆಗೆ ವಿದೇಶೀ ಪಾರುಪತ್ಯೆಗಳು ಹಣಕಾಸು ಮತ್ತು ವ್ಯಾಪಾರೀ ಮತ್ತಿತರ ವಾಣಿಜ್ಯ ಮಾಹಿತಿಗಳನ್ನು ಮಾಧ್ಯಮೇತರ ಗ್ರಾಹಕರಿಗೆ ನೀಡುವ ಸಲುವಾಗಿ ರೂಪಿಸಿದಂತಹುದಾಗಿದೆ).

ಭಾರತೀಯ ಮುದ್ರಣ ಮಾಧ್ಯಮ ಪರಿಸರದಲ್ಲಿ ವಿದೇಶೀ ಸುದ್ದಿ ಪತ್ರಿಕೆಗಳ ಪ್ರವೇಶ ಕುರಿತಾದ ವಿಚಾರ ಬಹಳಷ್ಟು ಹಿಂದಿನದು. ಭಾರತ ಸರ್ಕಾರದ ಉದಾರೀಕರಣ ನೀತಿಯಡಿಯಲ್ಲಿ ವಿದೇಶೀ ಮಾಧ್ಯಮಕ್ಕೂ ಪ್ರವೇಶ ಕುರಿತಂತೆ ಚರ್ಚಿಸಲಾಯಿತು. ಆರ್ಥಿಕ ಉದಾರೀಕರಣ ಹಾಗೂ ಪರಿವರ್ತನೆಯ ವೇಗವನ್ನು ಹೆಚ್ಚಿಸಲು ವಿದೇಶೀ ಮಾಧ್ಯಮದ ಪ್ರವೇಶವು ಉತ್ತೇಜನಕಾರಿ. ಇದರಿಂದಾಗಿ ಹೆಚ್ಚಿನ ವಿದೇಶೀ ಬಂಡವಾಳವನ್ನು ಆಕರ್ಷಿಸಲು ಸಾಧ್ಯವೆಂದು ಸರ್ಕಾರ ಅಭಿಪ್ರಾಯ ಪಟ್ಟಿತು. ಈ ವಿಚಾರವಾಗಿ ಸಮಗ್ರ ಅಧ್ಯಯನ ಹಾಗೂ ಉಪಯುಕ್ತ ಪರಿಹಾರ ಶಿಫಾರಸ್ಸಿಗಾಗಿ ಐವರು ಸದಸ್ಯರನ್ನುಳ್ಳ ಮಂತ್ರಿ ಮಂಡಲದ ಉಪಸಮಿತಿಯನ್ನು ಭಾರತ ಸರ್ಕಾರ ರಚಿಸಿತು. ಕೇಂದ್ರ ವಿದ್ಯುತ್ ಖಾತೆ ಮಂತ್ರಿ ಎಸ್ ಕೆ.ಪಿ. ಸಾಳ್ವೆಯ ಅಧ್ಯಕ್ಷತೆಯನ್ನುಳ್ಳ ಈ ಉಪಸಮಿತಿಯಲ್ಲಿ ಕೇಂದ್ರ ವಾಣಿಜ್ಯ ಮಂತ್ರಿ ಪ್ರಣವ ಮುಖರ್ಜಿ, ಹಣಕಾಸು ಮಂತ್ರಿ ಮನಮೋಹನಸಿಂಗ್, ವಾರ್ತಾ ಮತ್ತು ಪ್ರಸಾರ ಮಂತ್ರಿ ಕೆ.ಪಿ. ಸಿಂಗ್‌ದೇವ್ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ ಅರ್ಜುನ್ ಸಿಂಗ್ ರಿದ್ದರು. ಉಪಸಮಿತಿಯು ವೃತ್ತಿಪರ ಸಂಸ್ಥೆಗಳಾದ ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಮೊದಲಾದ ಸಂಸ್ಥೆಗಳನ್ನು ಭೇಟಿ ಮಾಡಿ ಅಭಿಪ್ರಾಯ ಸಂಗ್ರಹಿಸಿತು. ಎರಡು ಬಾರಿ ಸಭೆ ಸೇರಿದ್ದ ಉಪಸಮಿತಿ ವೃತ್ತಿಪರ ಸಂಸ್ಥೆಗಳ ಉತ್ತರಕ್ಕಾಗಿ ಕಾಯತೊಡಗಿತು. ಅಷ್ಟರಲ್ಲಿ ಈ ವಿಚಾರ ಇಡೀ ರಾಷ್ಟ್ರದ ಗಮನ ಸೆಳೆಯಿತು. ಅನೇಕ ಸಭೆಗಳು, ವಿಚಾರ ಸಂಕಿರಣಗಳು ವಿವಿಧ ಸ್ತರಗಳಲ್ಲಿ ರಾಷ್ಟ್ರಾದ್ಯಂತ

ಜರುಗಿದವು. ವಿವಿಧ ಸಂಸ್ಥೆಗಳು ವೈವಿಧ್ಯಪೂರ್ಣ ನಿಲುವುಗಳನ್ನು ತಳೆದವು. ಕೆಲವರು ವಿದೇಶೀ ಮಾಧ್ಯಮ ಪ್ರವೇಶವನ್ನು ಸ್ವಾಗತಿಸಿದರೆ, ಹಲವಾರು ಸಂಸ್ಥೆಗಳು ತಮ್ಮ ವಿರೋಧವನ್ನು ವ್ಯಕ್ತ ಪಡಿಸಿದವು.

ವಿದೇಶಿ ಮಾಧ್ಯಮಗಳು ಭಾರತೀಯ ರಂಗದಲ್ಲಿ ಪ್ರವೇಶ ಮಾಡುವ ವಿಚಾರ ಅನೇಕ ಬಗೆಯ ವಿವಾದಗಳಿಗೆ ಕಾರಣವಾಗಿದೆ. ಉದಾರೀಕರಣ ನೀತಿಯಡಿಯಲ್ಲಿ ಮುಕ್ತ ಆರ್ಥಿಕೀಕರಣ ಹಾಗೂ ಆಧುನೀಕರಣವನ್ನು ಇನ್ನಷ್ಟು ವೇಗವಾಗಿ ಕಾರ್ಯ ಸಾಧ್ಯವಾಗಿಸುವಲ್ಲಿ ಭಾರತೀಯ ಪರಿಸರಕ್ಕೆ ವಿದೇಶೀ ಮಾಧ್ಯಮ ಪ್ರವೇಶದಿಂದ ಫಲಕಾರಿ ಎಂದು ಭಾರತ ಸರ್ಕಾರ ಭಾವಿಸಿದೆ. ವಿದೇಶೀ ಮಾಧ್ಯಮದ ಪ್ರವೇಶದಿಂದ ಇನ್ನಷ್ಟು ಹೆಚ್ಚು ವಿದೇಶೀ ಬಂಡವಾಳವನ್ನು ಭಾರತೀಯ ಉದ್ಯಮ ರಂಗದಲ್ಲಿ ಆಕರ್ಷಿಸಲು ಸಾಧ್ಯ ಎಂದು ಸರ್ಕಾರದ ಅಭಿಪ್ರಾಯ.

ಭಾರತದ ಮೂಲೆ ಮೂಲೆಗಳ ಸುದ್ದಿಗಳನ್ನುಸಂಗ್ರಹಿಸಲು ಸಂಪನ್ಮೂಲಗಳ ಕೊರತೆಯಿಂದ ದೊಡ್ಡ ದೊಡ್ಡ ಭಾರತೀಯ ಪತ್ರಿಕೆಗಳಿಗೂ ಸಾಧ್ಯವಾಗಿಲ್ಲ, ವಿದೇಶೀ ಮಾಧ್ಯಮಗಳು ತಮ್ಮ ಆರ್ಥಿಕ ಸಂಪನ್ಮೂಲಗಳ ದೃಢತೆಯಿಂದ ಭಾರತದಲ್ಲಿನ ಅತ್ಯಂತ ಅಲಭ್ಯ ಸುದ್ದಿಯು, ಜನ ಸಾಮಾನ್ಯರಿಗೆ ಲಭ್ಯವಾಗುತ್ತದೆ.

ಭಾರತೀಯ ಪತ್ರಿಕೋದ್ಯಮಕ್ಕೆ ಅಂತರ ರಾಷ್ಟ್ರೀಯ ವಿದ್ಯಮಾನಗಳ ಪರಿಚಯದೊಂದಿಗೆ ಆಧುನಿಕ ತಂತ್ರವಿಜ್ಞಾನ ಹಾಗೂ ಓದುಗರಿಗೆ ರುಚಿಸಲು ಅತ್ಯಾಧುನಿಕ ಉತ್ಕೃಷ್ಟ ಗುಣಮಟ್ಟದ ವಿಚಾರಗಳ ಸೇವೆಯು ಲಭ್ಯವಾಗುತ್ತದೆ.

ಉಪಗ್ರಹ ಟೆಲಿ ಪ್ರಸಾರದಿಂದಾಗಿ ಈಗಾಗಲೇ ಭಾರತೀಯರು ವಿದೇಶೀ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದು, ವಿದೇಶೀ ರಂಜಕ ಪತ್ರಿಕೆಗಳು, ವಿಡಿಯೋ ಕ್ಯಾಸೆಟ್ ಗಳು ಭಾರತೀಯ ಮಾರುಕಟ್ಟೆಯಲ್ಲಿ ಲಭ್ಯವಿರುವಾಗ ಕೇವಲ ಸುದ್ದಿ ಪತ್ರಿಕೆಗಳಿಂದ ಮಾತ್ರ ಭಾರತೀಯ ಸಂಸ್ಕೃತಿ ಪಾಶ್ಚಾತೀಕರಣದ ಧಾಳಿಗೊಳಗಾಗಬಹುದು ಎಂಬ ಭಯ ಅಪ್ರಸ್ತುತವಾಗುತ್ತದೆ.

ಬ್ಯಾಂಕಿಂಗ್ ಸೇವೆ, ಖಾಸಗಿ ವಾಯುಯಾನ ಸೇವೆ ಹಾಗೂ ಇತರ ಉದ್ಯಮ ಗಳಲ್ಲಿ ವಿದೇಶೀ ಸಂಸ್ಥೆಗಳ ಪ್ರವೇಶವಾಗಿ, ಭಾರತೀಯ ಬ್ಯಾಂಕಿಂಗ್ ವಾಯುಯಾನ ಉದ್ಯಮಗಳು ಸಮರ್ಥವಾಗಿ ಸ್ಪರ್ಧೆ ನೀಡುತ್ತಿರುವಲ್ಲಿ ಪತ್ರಿಕೋದ್ಯಮ ಹೊರತಾಗುವುದು ಸ್ಪರ್ಧಾ ವಿಮುಖತೆಗೆ ಕಾರಣವಾಗುತ್ತದೆ.

ಭಾರತೀಯ ಪತ್ರಿಕೋದ್ಯಮ ಆರ್ಥಿಕ ದುರ್ಬಲವೆಂದಾದಲ್ಲಿ, ಭಾರತೀಯ ಓದುಗನಿಗೆ ಉತ್ಕೃಷ್ಟ ಹಾಗೂ ಅತ್ಯಾಧುನಿಕ ಪತ್ರಿಕಾ ಸೇವೆಯನ್ನು ಪಡೆಯುವ ಹಕ್ಕಿಲ್ಲವೇ? ವಿದೇಶೀ ಮಾಧ್ಯಮ ಪ್ರವೇಶದಿಂದಾಗಿ ಭಾರತೀಯ ಮಾಧ್ಯಮಕ್ಕೆ ಆರೋಗ್ಯಕರ ಸ್ಪರ್ಧೆಯುಂಟಾಗಿ ಪತ್ರಿಕೋದ್ಯಮ ವಿಕಾಸಗೊಂಡು ಹೊಸ ಆಯಾಮ ಪಡೆಯುವದು ನಿಶ್ಚಯ. ಅಲ್ಲದೇ ಭಾರತೀಯ ಸಮುದಾಯ ಸುದ್ದಿ ಪ್ರವಾಹಗಳನ್ನು ಪಡೆದಂತಾಗುವುದಲ್ಲದೇ ಬದಲಾಗುತ್ತಿರುವ ವಿಶ್ವದ ವಿಚಾರಗಳಿಗೆ ಸಂವೇದನಾ ಶೀಲವಾಗುವುದು ನಿಸ್ಸಂಶಯ.

ವಿದೇಶೀ ಮಾಧ್ಯಮ ಪ್ರವೇಶ ಕುರಿತು ಏಕ ಮುಖವಾಗಿ ಬರೆಯುತ್ತಿರುವ ಭಾರತೀಯ ಪತ್ರಿಕೆಗಳು ದೊಡ್ಡ ಉದ್ದಿಮೆದಾರರ ಹಿಡಿತದಲ್ಲಿದ್ದು ಏಕಮುಖ ಸುದ್ದಿಗಳನ್ನು ಅವು ನೀಡುತ್ತಿವೆ. ವಿದೇಶೀ ಮಾಧ್ಯಮ ಪ್ರವೇಶದಿಂದಾಗಿ ಈ ಏಕಮುಖ ಸುದ್ದಿಗಳನ್ನು ತಡೆದಂತಾಗಿ, ಉತ್ತಮ ಸ್ಪರ್ಧೆ, ಮೌಲ್ಯಗಳನ್ನು ಓದುಗ ನಿರೀಕ್ಷಿಸಬಹುದು.

ವಿದೇಶೀ ಪತ್ರಿಕೆಗಳ, ಸಂಸ್ಥೆಗಳ ಸಹಭಾಗಿತನದಲ್ಲಿ ಭಾರತೀಯ ಪತ್ರಿಕೆಗಳು ಓದುಗರಿಗೆ ಉತ್ತಮ ಸೇವಾ ಸೌಲಭ್ಯಗಳನ್ನು ನೀಡುವಂತಾಗುವುದು. ವಿದೇಶೀ ಮಾಧ್ಯಮಗಳ ಅತ್ಯಾಧುನಿಕ ತಂತ್ರ, ವಿಜ್ಞಾನ, ಮುದ್ರಣ ತಾಂತ್ರಿಕತೆ ಭಾರತೀಯ ಪತ್ರಿಕೋದ್ಯಮಕ್ಕೆ ಲಭ್ಯವಾಗುತ್ತದೆ.

ವಿದೇಶೀ ಪತ್ರಿಕೆಗಳ ಧಾಳಿಯಿಂದ ತತ್ತರಿಸುತ್ತಿರುವ ತೃತೀಯ ಜಗತ್ತಿನ ದೇಶಗಳಿಗೆ, ಭಾರತವೂ ಸೇರಿದಂತೆ, ವಿರೋಧಾತ್ಮಕ ಸಂವಹನ ವಿಚಾರಗಳಿಗೆ ಎಡೆ ಮಾಡಿದೆ. ವಾಕ್ ಸ್ವಾತಂತ್ರ್ಯವೆಂಬುಮ ಭಾರತ ಸಂವಿಧಾನವು ಭಾರತೀಯ ಪ್ರಜೆಗೆ ನೀಡಿರುವಂತಹ ಮೂಲಭೂತವಾದ ಹಕ್ಕು. ಇದು ವಿದೇಶೀ ವ್ಯಕ್ತಿ ಅಥವಾ ಸಂಸ್ಥೆಗೆ ನೀಡಲಾಗಿಲ್ಲ. ಆದ್ದರಿಂದ ಭಾರತೀಯ ಪರಿಸರದಲ್ಲಿ ವಿದೇಶೀ ಮುದ್ರಣ ಮಾಧ್ಯಮಗಳಿಗೆ ಭಾರತೀಯ ಪತ್ರಿಕೆಗಳೊಡನೆ ಸ್ಪರ್ಧಿಸುವ ಮುಕ್ತ ಅವಕಾಶವಿಲ್ಲ.

೧೯೪೭ರ ನಂತರದ ಭಾರತೀಯ ಸ್ವತಂತ್ರ ನೀತಿ ವಿದೇಶೀ ಪತ್ರಿಕೆಗಳ ಉಚ್ಚಾಟನೆಗೆ ಕಾರಣವಾಯಿತು ಎನ್ನುವುದು ಸರ್ವ ವಿಧಿತ. ವಿದೇಶೀ ಮಾಧ್ಯಮ ಪ್ರವೇಶವು, ಭಾರತ ಸರ್ಕಾರ ೧೯೫೫ರಲ್ಲಿ ಒಪ್ಪಿ ರೂಪಿಸಿರುವ ಮಾಧ್ಯಮ ನೀತಿಗಳಾದ ವಿದೇಶೀ ಸುದ್ದಿ ಪತ್ರಿಕೆಗಳನ್ನು ಭಾರತದಲ್ಲಿ ಪ್ರಾರಂಭಿಸಲು ಅವಕಾಶ ನೀಡುವುದಿಲ್ಲ ಎನ್ನುವುದಕ್ಕೆ ವಿರೋಧವಾಗುತ್ತದೆ.

ಒಂದು ವೇಳೆ ವಿದೇಶೀ ಸುದ್ದಿ ಪತ್ರಿಕೆಗಳಿಗೆ ಭಾರತೀಯ ಮಾಧ್ಯಮರಂಗಕ್ಕೆ ಪ್ರವೇಶಾನುಮತಿ ದೊರೆತಲ್ಲ, ವಿದೇಶೀ ಪತ್ರಿಕೆಗಳು ಭಾರತೀಯ ಪತ್ರಿಕೋದ್ಯಮದ ಸೈದ್ಧಾಂತಿಕ ನೀತಿ ನಿಯಮಾವಳಿಗಳನ್ನು ಗಾಳಿಗೆ ತೂರಿ, ಕಾಶ್ಮೀರ, ಪಂಜಾಬಿನಂಥ ಸೂಕ್ಷ್ಮ ವಿಚಾರಗಳಲ್ಲಿ ಸುದ್ದಿಗಳನ್ನು ಪ್ರಕಟಿಸಿ, ಕೋಮು ಘರ್ಷಣೆಯಂಥ ಸುದ್ದಿಗಳಿಗೆ ಮಹತ್ವ ಕೊಟ್ಟು ಶಾಂತಿ ಕದಡಬಹುದು. ಆದ್ದರಿಂದ ಇಂತಹ ಉದಾರೀಕರಣ ನೀತಿಯನ್ನು, ರಾಷ್ಟ್ರೀಯತೆಯನ್ನು ಒತ್ತೆ ಇಟ್ಟು ಕಾರ್ಯರೂಪಕ್ಕೆ ತರುವ ಅಗತ್ಯವಿಲ್ಲ.

ವಿದೇಶೀ ಸುದ್ದಿ ಪತ್ರಿಕೆಗಳು ವ್ಯಾಪಾರಿ ಮನೋಭಾವದಿಂದ ಬರುತ್ತಿವೆಯೇ ಹೊರತು ಅವುಗಳಿಗೆ ಯಾವುದೇ ಸಾಮಾಜಿಕ ಜವಾಬ್ದಾರಿಯಿಲ್ಲ. ಅಲ್ಲದೇ ಅವು ಇಲ್ಲಿ ಸ್ಥಳೀಯ ಪತ್ರಿಕೆಗಳೊಂದಿಗೆ, ಅನಾರೋಗ್ಯಕರ ಪೈಪೋಟಿಗೆ ಎಡೆ ಮಾಡಿಕೊಡುವುದರ ಜೊತೆಗೆ ವೃತ್ತಿ ಅನೈತಿಕತೆಗೆ ಕಾರಣವಾಗಬಲ್ಲದು.

ಭಾರತೀಯ ಸುದ್ದಿ ಪತ್ರಿಕೆಗಳು ಭಾರತೀಯ ಸಂಸ್ಕೃತಿಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದು, ವಿದೇಶೀ ಪತ್ರಿಕೆಗಳು ಭಾರತೀಯ ಸಂಸ್ಕೃತಿಗೆ ಅಭದ್ರತೆಯನ್ನುಂಟು ಮಾಡಿ ಸಂಸ್ಕೃತಿಯ ಮೇಲೆ ಋಣಾತ್ಮಕ ಪರಿಣಾಮವನ್ನುಂಟು ಮಾಡಿ , ಭಾರತೀಯ ಸಂಸ್ಕೃತಿಯನ್ನು ಮಲಿನಗೊಳಿಸಬಹುದಲ್ಲದೇ ಜನರಿಗೆ ತಪ್ಪು ಮಾಹಿತಿಯನ್ನು ನೀಡಿ ತಪ್ಪು ದಾರಿಗೆಳೆಯಬಹುದಾಗಿದೆ.

ನಿರಂತರ ಹಾಗೂ ಸ್ವಚ್ಛಂದ ವಿದೇಶೀ ಸಂಸ್ಕೃತಿಯ ಪ್ರವಾಹದಿಂದಾಗಿ ಭಾರತೀಯ ಸಮುದಾಯ, ಸಂಸ್ಕೃತಿ ಹಾಳಾಗಬಹುದು ಎಂಬ ವಿಚಾರ ಗಮನಾರ್ಹ. ವಿದೇಶಿ ಪತ್ರಿಕೆಗಳು ಭಾರತದ ಕೆಲವು ಗಂಭೀರ ಸಮಸ್ಯೆಗಳಿಗೆ ಸ್ಪಂದಿಸದೇ, ರಾಷ್ಟ್ರೀಯ ಅನೈಕ್ಯತೆ ಹಾಗೂ ಅಭದ್ರತೆಗೆ ದಾರಿಮಾಡಿಕೊಡಬಹುದು. ಸಾಮಾನ್ಯವಾಗಿ ವಿದೇಶೀ ಮಾಧ್ಯಮಗಳು ಭಾರತ ವಿರೋಧಿ ಹಾಗೂ ತೃತೀಯ ರಾಷ್ಟ್ರಗಳ ವಿರೋಧಿಯಾಗಿದ್ದು, ಅವುಗಳು ಸುದ್ದಿ ನೀಡಿಕೆಯಲ್ಲಿ ಪೂರ್ವಾಗ್ರಹ ಪೀಡಿತ ವಿಪಕ್ಷೀಯವಾಗಬಹುದು.

ಅತ್ಯಾಧುನಿಕ ಮಾಹಿತಿಗಳಿಂದ ಜನರಲ್ಲಿ ಮಾಹಿತಿಗಳ ಪ್ರವಾಹ ಹರಿದು ಜನಸಾಮಾನ್ಯರ ವಿಚಾರ ಶಕ್ತಿಯ ನಿರ್ವಿಣ್ಣತೆಗೆ ಕಾರಣವಾಗಬಲ್ಲದು. ಸುದ್ದಿ ಮಾಹಿತಿಗಳಿಗಾಗಿ ವಿದೇಶೀ ಪತ್ರಿಕೆಗಳು ವಿದೇಶೀ ಗೂಡಾಚಾರರಂತೆ ಪ್ರವರ್ತಿಸಬಹುದಲ್ಲದೇ, ಭಾರತದ ವೈರಿ ರಾಷ್ಟ್ರಗಳು ಸಹ ಭಾರತದಲ್ಲಿ ಪತ್ರಿಕೆಗಳನ್ನು ಪ್ರಾರಂಭಿಸಿ ಅವುಗಳ ಅಭಿಪ್ರಾಯಗಳನ್ನು ಭಾರತೀಯ ಜನಮನದಲ್ಲಿ ಪ್ರಚಾರ ಮಾಡಿ ಪ್ರಚೋದಿಸಬಹುದಾಗಿದೆ.

ಮುದ್ರಣ ಮಾಧ್ಯಮ ಇತರ ಉದ್ಯಮಗಳಂಥಲ್ಲ, ವಿದೇಶೀ ಬಂಡವಾಳಗಾರರಿಗೆ ತೆರೆದು ಕೂರುವುದಕ್ಕೆ, ಅಲ್ಲದೇ ವಿದೇಶೀ ಮಾಧ್ಯಮದ ಪ್ರವೇಶವು ಗಾಂಧೀಜಿಯವರ ಚಿಂತನೆ, ಸ್ವರಾಜ್ಯ, ಸ್ವದೇಶಿ ಪರಿಕಲ್ಪನೆಗೆ ವಿರೋಧವಾಗಿದೆ. ಸ್ವತಂತ್ರ ಭಾರತೀಯ ಮಾಧ್ಯಮ ಸಂಸ್ಕೃತಿಗೆ ಒಂದು ವಿರೋಧಾಭಾಸವಾಗುತ್ತದೆ.

ಕೆಲವು ಸಂದಿಗ್ಧ ಪರಿಸರದಲ್ಲಿ ಭಾರತೀಯ ಸಂವಿಧಾನ, ಪತ್ರಿಕೆಯಿಂದ ತತ್ಸಂಬಂಧಿಯಾದ ನಿಷೇಧಗಳನ್ನು ಬಯಸುತ್ತದೆ. ಆದರೆ ವಿದೇಶೀ ಮಾಧ್ಯಮಗಳು ರಾಷ್ಟ್ರೀಯ ಭಾವನೆಗಳಿಗಂ ಸ್ಪಂಧಿಸಲಾರವು.

ವಿದೇಶೀ ಪತ್ರಿಕೆಗಳು ಭಾರತೀಯ ಪತ್ರಿಕೋದ್ಯಮದ ಬಹುಮುಖ್ಯ ಆದಾಯದ ಮೂಲವಾದ ಜಾಹೀರಾತುಗಳನ್ನು ಸೆಳೆದುಕೊಳ್ಳಬಹುದು. ಇದು ಅವುಗಳ ಏಕಮಾತ್ರ ಗುರಿ ಕೂಡ. ಹೊಸ ಆರ್ಥಿಕ ನೀತಿ ಮುಕ್ತ ಮಾರುಕಟ್ಟೆಯ ಸೋಗಿನಲ್ಲಿ ಆರ್ಥಿಕ ಶೋಷಣೆಗೆ ದಾರಿ ಮಾಡುತ್ತದೆ. ವಿದೇಶೀ ಮಾಧ್ಯಮಗಳ ಪ್ರವೇಶದಿಂದಾಗಿ, ಸ್ಪರ್ಧೆಯನ್ನು ಎದುರಿಸಲಾಗದೇ ಅನೇಕ ಸಣ್ಣ ಹಾಗೂ ಮಧ್ಯಮ ಪತ್ರಿಕೆಗಳನ್ನು ಮುಚ್ಚಬೇಕಾಗಬಹುದು.

ವಿದೇಶೀ ಪತ್ರಿಕೆಗಳು, ಭಾರತೀಯ ರಾಷ್ಟ್ರೀಯ ಹಿತಾಸಕ್ತಿ ಹಾಗೂ ಸ್ವಾತಂತ್ರ್ಯಕ್ಕೆ ವಿರೋಧವಾಗಿದ್ದು, ಅವು ರಾಷ್ಟ್ರ ವಿರೋಧಿ ಶಕ್ತಿಗಳೊಂದಿಗೆ ಹಾಗೂ ರಾಷ್ಟ್ರದಲ್ಲಿನ ಜಾತಿವಾದಿ, ಮೂಲಭೂತವಾದಿಗಳೊಂದಿಗೆ ಕೈಜೋಡಿಸಬಹುದಾಗಿದ್ದು, ವೈವಿಧ್ಯಮಯ ಸಂಸ್ಕೃತಿ, ಜನಾಂಗ, ಭಾಷೆಗಳ ದೇಶವಾದ ಭಾರತ ರಾಷ್ಟ್ರದ ಅಖಂಡತೆ, ಏಕತೆಗಳಿಗೆ ಧಕ್ಕೆಯೊದಗಿಸಬಹುದು.

ಬಹುತೇಕ ಭಾರತೀಯ ಪತ್ರಿಕೆಗಳು, ಗಣ್ಯ ಹಾಗೂ ಪ್ರಮುಖ ಪತ್ರಕರ್ತರು ವಿದೇಶೀ ಮುದ್ರಣ ಮಾಧ್ಯಮಗಳ ಭಾರತೀಯ ಪರಿಸರ ಪ್ರವೇಶವನ್ನುವಿರೋಧಿಸಿ ಈ ಹಿನ್ನೆಲೆಯಲ್ಲಿ ಸಾಧಕ - ಬಾಧಕಗಳ ಚಿಂತನೆ ನಡೆಸುತ್ತಿದ್ದಾರೆ.

ಕೇಂದ್ರ ಸರ್ಕಾರ, ವಿದೇಶೀ ಪತ್ರಕೋದ್ಯಮ ಭಾರತೀಯ ಪರಿಸರದಲ್ಲಿ ಕಾಲಿಡುವುದರ ಕುರಿತು ಆಸಕ್ತಿಯಿಂದಿದೆ. ಆರ್ಥಿಕ ಸುಧಾರಣೆ ಹಾಗೂ ಉದಾರೀಕರಣ ನೀತಿ ಅವುಗಳಿಗೆ ಬೆಂಬಲವಾಗಿದ್ದು, ಪ್ರಧಾನ ಮಂತ್ರಿಗಳೂ ಸಹ ವೈಯಕ್ತಿಕವಾಗಿ ಒಲವು ತೋರಿಸಿದ್ದಾರೆ. ವಿದೇಶೀ ಪತ್ರಿಕೋದ್ಯಮದ ಪ್ರವೇಶಾನುಮತಿ ಕುರಿತಾಗಿ ರಚಿಸಲಾಗಿದ್ದ ಮಂತ್ರಿ ಮಂಡಲದ ಉಪಸಮಿತಿಯೂ ಕೂಡ ಪರವಾಗಿ ನಿರ್ಣಯಿಸಿದೆ.

ಆದಾಗ್ಯೂ ಕೇಂದ್ರ ಸರ್ಕಾರ ವಿವಿಧ ವಲಯಗಳಿಂದ ಕೇಳಿ ಬಂದಿರುವ ವಿರೋಧದ ಧ್ವನಿ ಹಾಗೂ ಒತ್ತಡದಿಂದಾಗಿ ನಿರ್ಧಾರವನ್ನು ತಡೆಹಿಡಿದಿದೆ. ಈ ನಡುವೆ ಅಲಹಾಬಾದ್ ಉಚ್ಛ ನ್ಯಾಯಾಲಯ ಸಹ ವಿದೇಶೀ ಸುದ್ದಿ ಪತ್ರಿಕೆಗಳು ಭಾರತೀಯ ರಂಗ ಪ್ರದೇಶದ ನಿರ್ಣಯ ಕುರಿತಾಗಿ ತಡೆಯಾಜ್ಞೆ ನೀಡಿದೆ. ಹಿಂದಿನ ಕೇಂದ್ರ ವಾರ್ತಾ ಪ್ರಸಾರ ಖಾತೆಯ ಮಂತ್ರಿ ಪಿ.ಎ. ಸಂಗ್ಮಾರ ಹೇಳಿಕೆಯಂತೆ 'ಈಗಾಗಲೇ ವಿದೇಶೀ ಮಾಧ್ಯಮ ಕುರಿತು, ರಾಷ್ಟ್ರಾದ್ಯಂತ ಮುಕ್ತ ಚರ್ಚೆ ನಡೆಯುತ್ತಿದೆ. ಮುದ್ರಣ ಮಾಧ್ಯಮಕ್ಕೆ ಹೊಸ ನೀತಿ ನಿಯಮಾವಳಿಗಳನ್ನು ರೂಪಿಸುವ ಅಗತ್ಯವಿದೆ. ಪ್ರಸ್ತುತ ಕಾನೂನುಗಳಡಿಯಲ್ಲಿ ವಿದೇಶೀ ಪತ್ರಿಕೆಗಳು ರಾಷ್ಟ್ರದಲ್ಲಿ ಮುಕ್ತವಾಗಿ ವ್ಯವಹರಿಸಲಾರವು' ಎಂದಿದ್ದಾರೆ.

ವಿದೇಶೀ ಪತ್ರಿಕೆಗಳ ಆಗಮನ ಇಂದು ಮಾಧ್ಯಮ ವಲಯ ಮತ್ತು ಬುದ್ಧಿ ಜೀವಿಗಳ ಗಮನವನ್ನು ಸೆಳೆದಿದೆ. ಮಾಧ್ಯಮ ವಲಯಗಳಲ್ಲಿ ಈ ಕುರಿತಾಗಿ ವಿಭಿನ್ನ ರೀತಿಯ ಪ್ರತಿಕ್ರಿಯೆಗಳಿದ್ದು, ಅಮೃತ ಬಜಾರ್, ಇಂಡಿಯಾ ಟುಡೇ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಸಮೂಹಗಳು ವಿದೇಶೀ ಸುದ್ದಿ ಪತ್ರಿಕೆಗಳ ಪ್ರವೇಶವನ್ನು ಬೆಂಬಲಿವೆ. ಇತರೇ ದೊಡ್ಡ ಪತ್ರಿಕೆಗಳೆನಿಸಿಕೊಂಡ ಹಿಂದೂಸ್ತಾನ್ ಟೈಮ್ಸ್, ಟೈಮ್ಸ್ ಆಫ್ ಇಂಡಿಯಾ, ಹಿಂದೂ, ಮಲಯಾಳ ಮನೋರಮಾ, ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಮೂಹಗಳು ತಮ್ಮ ತಿರಸ್ಕಾರವನ್ನು ಸ್ಪಷ್ಟಪಡಿಸಿವೆ. ಐ.ಎನ್. ಎಸ್, ಭಾರತೀಯ ಪತ್ರಿಕಾ ಮಂಡಳಿ ಮತ್ತು ಇತರೇ ಭಾರತೀಯ ವೃತ್ತಿನಿರತ ಪತ್ರಿಕಾ ಸಂಸ್ಥೆಗಳು ಕೂಡ ತಮ್ಮ ವಿರೋದವನ್ನು ವಿದೇಶೀ ಪತ್ರಿಕೆಗಳ ಬಗ್ಗೆ ಖಚಿತಪಡಿಸಿವೆ.

ಇದೇ ಸಂದರ್ಭದಲ್ಲಿ ಬಹುತೇಕ ಬರಹಗಾರರು, ಬುದ್ಧಿಜೀವಿಗಳು ವಿದೇಶೀ ಪತ್ರಿಕೋದ್ಯಮದ ಭಾರತ ಪ್ರವೇಶವನ್ನು ಸ್ವಾಗತಿಸಿದ್ದಾರೆ. ಇವರು ಕೆಲವೊಂದು ನಿರ್ಬಂಧಗಳನ್ನು ಕೂಡ ಸೂಚಿಸಿದ್ದಾರೆ. ವಿದೇಶೀ ಪತ್ರಿಕೋದ್ಯಮ ಭಾರತ ಸಂವಿಧಾನ ಹಾಗೂ ಭಾರತೀಯ ನ್ಯಾಯಾಂಗದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವಂತಿದ್ದರೆ ಮಾತ್ರ ಇವರ ಸ್ವಾಗತವಿದೆ. ಭಾರತೀಯ ಪತ್ರಿಕೋದ್ಯಮಕ್ಕೆ ಅನ್ವಯಿಸುವ ಎಲ್ಲಾ ಕಾನೂನು ಮತ್ತು ನಿಯಮಗಳು ವಿದೇಶೀ ಪತ್ರಿಕೆಗಳಿಗೂ ಅನ್ವಯವಾಗುವಂತಿರಬೇಕು. ಉದಾಹರಣೆಗೆ : ಪತ್ರಿಕಾ ಕಾನೂನು, ಸರ್ಕಾರ, ಭಾರತದಲ್ಲಿ ವಿದೇಶೀ ಮಾಧ್ಯಮದ ಕಾರ್ಯ ಚಟುವಟಿಕೆಗಳನ್ನು ಗಮನಿಸಲು ಒಂದು ಪರಿವೀಕ್ಷಣಾ ಸಮಿತಿಯನ್ನು ರಚಿಸ ಬಹುದು. ಅಂತಹ ಸಮಿತಿ, ವಿದೇಶೀ ಪತ್ರಿಕೆಗಳು ಭಾರತದಲ್ಲಿ ಕಾರ್ಯನಿರ್ವಹಿಸಲು

ಕೆಲವು ನಿಯಮ ನಿಬಂಧನೆಗಳನ್ನು ರೂಪಿಸಬಹುದು. ಒಂದು ವೇಳೆ ಅವುಗಳೊಳಗೆ ಕಾರ್ಯನಿರ್ವಹಿಸಲು ವಿಫಲವಾದಲ್ಲಿ ವಿದೇಶೀ ಪತ್ರಿಕೋದ್ಯಮ ಕಾರ್ಯನಿರ್ವಹಿಸುವ ಅದರ ಅನುಮತಿಯನ್ನು ವಜಾ ಮಾಡಬಹುದು.

ಭಾರತ ಸಂವಿಧಾನದ ವಿಧಿ ೧೯(೧) (ಎ) ಪ್ರಕಾರ ಭಾರತೀಯ ನಾಗರೀಕನಿಗೆ ಅಭಿಪ್ರಾಯ ಮತ್ತು ವಾಕ್ ಸ್ವಾತಂತ್ರ್ಯಗಳು ಭಾರತದ ಐಕ್ಯತೆ ಹಾಗೂ ಸಮಗ್ರತೆಯ ನಿರ್ಬಂಧಗಳಿಗೊಳಪಟ್ಟು ದತ್ತವಾಗಿದೆ. ಆದ್ದರಿಂದ ಯಾವುದೇ ವಿದೇಶೀ ವ್ಯಕ್ತಿಗೆ ಭಾರತದಲ್ಲಿ ಈ ಹಕ್ಕು ಲಭ್ಯವಿಲ್ಲ. ಆದರೆ ವಿಧಿ ೧೯(೨)ರ ನಾಗರೀಕ ಮತ್ತು ರಾಜಕೀಯ ಹಕ್ಕುಗಳ ಅಂತರರಾಷ್ಟ್ರೀಯ ಒಡಂಬಡಿಕೆಯು ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಅವಕಾಶವನ್ನು ಬೆಂಬಲಿಸುತ್ತದೆ.

ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿರುತ್ತದೆ. ಈ ಹಕ್ಕು ಸಂಶೋಧನೆ, ಮಾಹಿತಿ, ಸಮಾಚಾರವನ್ನು ವ್ಯಕ್ತಿಯ ಆಯ್ಕೆಗೆ ಬಿಟ್ಟಂತೆ ಯಾವುದೇ ಭೇದವಿಲ್ಲದೇ ಮೌಖಿಕವಾಗಲೀ, ಬರಹ ರೂಪದಲ್ಲಾಗಲೀ, ಅಥವಾ ಮದ್ರಣ ರೂಪದಲ್ಲಾಗಲೀ, ಕಲಾ ಪ್ರಕಾರದ ರೂಪದಲ್ಲಾಗಲೀ ಪಡೆದುಕೊಳ್ಳುವುದು ಆತನ ಹಕ್ಕು. ಅಂದರೆ ಯಾವುದೇ ವ್ಯಕ್ತಿ ಸಂಶೋಧನೆಯ ಹಕ್ಕು ಹೊಂದಿದ್ದು, ಆತನ ಆಯ್ಕೆಗೆ ಅನುಗುಣವಾಗಿ ಮಾಹಿತಿಯನ್ನು ಯಾವುದೇ ಮಾಧ್ಯಮದಲ್ಲಿ ಪಡೆಯುವ ಹಕ್ಕಿದೆ. ಹೀಗಿರುವಾಗ ಯಾವುದೇ ಭಾರತೀಯ ಪ್ರಜೆ ವಿದೇಶೀ ಪತ್ರಿಕೆಯ ಮೂಲಕ ಮಾಹಿತಿಯನ್ನು ಪಡೆಯ ಬಯಸಿದಾಗ ಯಾರೂ ಆ ವ್ಯಕ್ತಿಯ ಈ ಹಕ್ಕನ್ನು ನಿರಾಕರಿಸಲೂ ಸಂವಿಧಾನದಲ್ಲಿ ಅವಕಾಶವಿಲ್ಲ.

ದಿನ ಪತ್ರಿಕೆಗಳಲ್ಲದೇ ಹಲವಾರು ವಿದೇಶೀ ಸಮೂಹ ಸಂವಹನ ಮಾಧ್ಯಮಗಳು ಭಾರತದಲ್ಲಿಂದು ಲಭ್ಯವಿದೆ. ವಿದೇಶೀ ಟಿ.ವಿ. ಚಾನಲ್ ಗಳು, ವಿದೇಶದಿಂದ ಪ್ರಸಾರ ವಾಗುವ ರೇಡಿಯೋ ಕಾರ್ಯಕ್ರಮಗಳು, ಅಂತರ ರಾಷ್ಟ್ರೀಯ ಕಂಪ್ಯೂಟರ್ ಜಾಲ, ಆಡಿಯೋ - ವಿಡಿಯೋ ಕ್ಯಾಸೆಟ್ಟುಗಳು, ವಿದೇಶೀ ಪುಸ್ತಕಗಳು, ಚಲನ ಚಿತ್ರಗಳು, ಜರ್ನಲ್ ಗಳು, ರಂಜಕ ಪತ್ರಿಕೆಗಳು ಎಲ್ಲಾ ಲಭ್ಯವಿದೆ. ವಿದೇಶೀ ದಿನಪತ್ರಿಕೆಗೆ ಚಂದಾದಾರರಾಗಲೂ ಸಾಧ್ಯ. ಭಾರತದ ಯಾವ ಭಾಗದಲ್ಲಾದರೂ ಇವು ಇಂದು ಸುಲಭವಾಗಿ ಸಿಗುತ್ತಿವೆ. ಹೀಗಿದ್ದಲ್ಲಿ, ವಿದೇಶೀ ಪತ್ರಿಕೋದ್ಯಮ ಭಾರತದ ಪರಿಸರದಲ್ಲಿ ಏಕೆ ಸಾಧ್ಯವಿಲ್ಲ ಎಂಬ ಪ್ರಶ್ನೆ ಸಹಜ.

ನಾವು ವಿಶ್ವದ ವ್ಯಾಪಾರ ರಂಗ ಹಾಗೂ ಮಾಹಿತಿರಂಗದ ಬಾಗಿಲು ಮುಚ್ಚಿ

ಕೂರಲು ಸಾಧ್ಯವಿಲ್ಲ. ವಿದೇಶದಲ್ಲಿ ಪ್ರಕಟಿತ ಪತ್ರಿಕೆಗಳು ಭಾರತದಲ್ಲಿ ಲಭ್ಯವಾಗುವುದರಿಂದ ಪಾಶ್ಚಿಮಾತ್ಯ ರಾಷ್ಟ್ರಗಳ ಅಭಿಪ್ರಾಯ, ವಿವಿಧ ಅವಲೋಕನಗಳು ವಿವಿಧ ಛಾಯೆಗಳಲ್ಲಿ ಭಾರತಕ್ಕೆ ಕಾಣಸಿಗುತ್ತದೆ. ಆದರೆ ವಿದೇಶೀ ಪತ್ರಿಕೆಗಳ ಸಹಯೋಗ ವಿವಾದಾತ್ಮಕ. ವಿದೇಶೀ ಪತ್ರಿಕೆಯೊಂದು ಭಾರತದಲ್ಲೇ ಪುನರ್ ಮುದ್ರಿತವಾಗಬಹುದು. ಆದರೆ ವಿದೇಶೀಯ ಅಥವಾ ಅವನಿಂದ ನೇಮಕಗೊಂಡವನಿಂದಲ್ಲ. ಏಕೆಂದರೆ ಭಾರತ ಸಂವಿಧಾನದ ಪ್ರಕಾರ ಭಾರತದಲ್ಲಿ ವಿಧಿ ೧೯(೧) (ಎ) ಪ್ರಕಾರ ಮೂಲಭೂತ ಹಕ್ಕು, ಅಲ್ಲದೇ ೧೯೬೦ರಲ್ಲಿ ತಿದ್ದುಪಡಿಯಾದ ಪತ್ರಿಕಾ ನಿಯಂತ್ರಣ ಕಾಯಿದೆ, ಭಾರತೀಯ ಪತ್ರಿಕೋದ್ಯಮಕ್ಕೆ ನಂತರದ ರಕ್ಷಣೆ ನೀಡಿದೆ.

ವಿದೇಶೀ ಸುದ್ದಿ ಪತ್ರಿಕೆಗಳನ್ನು ಭಾರತೀಯ ದಿನ ಪತ್ರಿಕೆಗಳು ವಿರೋಧಿಸುತ್ತಿರುವ ಕಾರಣವೆಂದರೆ ಭಾರತೀಯ ದಿನಪತ್ರಿಕೆಗಳು ಕ್ಲಿಷ್ಟಕರ ಸ್ಪರ್ಧೆಯನ್ನು ವಿದೇಶೀ ಪತ್ರಿಕೆಗಳಿಂದ ಎದುರಿಸಬೇಕಾಗುವುದು. ತಮ್ಮ ಮಾಹಿತಿಯ ಗುಣಮಟ್ಟವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾಗಬಹುದು ಎಂಬ ಆರೋಪವಿದೆ. ಆದರೆ ಕಳೆದ ನಾಲ್ಕೈದು ವರ್ಷಗಳಲ್ಲಿ ಭಾರತೀಯ ಪತ್ರಿಕೋದ್ಯಮ ವಿದೇಶೀಯ ಪತ್ರಿಕೋದ್ಯಮದೊಂದಿಗೆ ಸಮಾನಾಂತರತೆಯನ್ನು ಸಾಧಿಸಿದೆ. ಭಾರತದ ಅನೇಕ ದೊಡ್ಡ ಪತ್ರಿಕೆಗಳು ವಿಶ್ವದ ಉತ್ತಮ ತಾಂತ್ರಿಕತೆಯನ್ನು ಹೊಂದಿದ್ದು, ತಮ್ಮ ತಮ್ಮಲ್ಲಿ ಪ್ರಬಲ ಸ್ಪರ್ಧೆಯನ್ನು ಹೊಂದಿವೆ. ಈ ಸ್ಪರ್ಧೆಯಿಂದಲೇ ಸಂಪಾದಕೀಯ ಗುಣಮಟ್ಟವನ್ನು ಹೆಚ್ಚಿಸಿ ವೈವಿಧ್ಯಮಯ ಉತ್ತಮ ಸೇವೆಯನ್ನು ನೀಡುತ್ತಿವೆ.

ಇಂದು ಸಣ್ಣ ಪತ್ರಿಕೆಗಳೂ ಸಹ ಆಧುನಿಕ ಆವಿಷ್ಕಾರಗಳಾದ ಕಂಪ್ಯೂಟರ್ ಗಳು, ಟೈಪ್ ಸೆಟ್ಟಿಂಗ್, ಡಿ.ಟಿ.ಪಿ., ಇಂಟರ್‌ನೆಟ್ ಸೌಲಭ್ಯವನ್ನು ಹೊಂದಿವೆ. ಭಾರತದಲ್ಲಿ ಪತ್ರಿಕೋದ್ಯಮ ಇತರ ಉದ್ಯಮಗಳಂತೆ ರಕ್ಷಿತ ಮಾರುಕಟ್ಟೆಯನ್ನು ಹೊಂದಿಲ್ಲ. ಭಾರತದಲ್ಲಿಂದು ೨೮೦೦೦ ಪ್ರಕಾಶನ ಸಂಸ್ಥೆಗಳಿದ್ದು ಓದುಗರು ಹಾಗೂ ಜಾಹೀರಾತಿಗಾಗಿ ಅವ್ಯಾಹತ ಸ್ಪರ್ಧೆಗೆ ಎಡೆಮಾಡಿದೆ.

ವಿದೇಶೀ ಪತ್ರಿಕೆಗಳ ಆಗಮನದಿಂದ ಭಾರತೀಯ ಪತ್ರಿಕೆಗಳ ಜಾಹೀರಾತು ಆದಾಯಕ್ಕೆ ಧಕ್ಕೆಯುಂಟಾಗುತ್ತದೆ ಎಂಬುದು ಎಲ್ಲೆಡೆ ಕೇಳಿ ಬರುತ್ತಿರುವ ದೂರು, ಇದು ಸ್ವಲ್ಪ ಸತ್ಯ ಕೂಡ. ವಿಶೇಷವಾಗಿ ಸಣ್ಣ ಹಾಗೂ ಮಧ್ಯಮ ಪತ್ರಿಕೆಗಳಿಗೆ ತೀವ್ರ ಸ್ಪರ್ಧೆಯಾಗುತ್ತದೆ ಎಂಬ ನಂಬಿಕೆ. ಆದರೆ ಭಾರತದಲ್ಲಿ ಆಂಗ್ಲ ದಿನಪತ್ರಿಕೆಗಳು ಅಲ್ಪ ಸಂಖ್ಯಾತವಾಗಿದ್ದು, ಅವು ಅತಿದೊಡ್ಡ ಅಭಿಪ್ರಾಯ ನಿರ್ಮಾಪಕರಾಗಿವೆ. ಭಾಷಾ

ಪತ್ರಿಕೆಗಳಿಗಿಂತ ಅವುಗಳೇ ಹೆಚ್ಚಿನ ಸವಾಲನ್ನು ಎದುರಿಸಬೇಕಾಗುವುದು ಎಂಬ ವಿಚಾರವೂ ಗಮನಾರ್ಹ. ಇದರಿಂದಾಗಿಯೇ ಬಹುತೇಕ ಆಂಗ್ಲ ಮಾಧ್ಯಮ ಪತ್ರಿಕೆಗಳೇ ವಿದೇಶೀ ಪತ್ರಿಕೋದ್ಯಮವನ್ನು ವಿರೋಧಿಸುತ್ತಿವೆ. ವಿದೇಶೀ ಪತ್ರಿಕೆಗಳ ಆಗಮನದಿಂದ ಭಾರತೀಯ ಪತ್ರಿಕೆಗಳು ತಮ್ಮ ನೌಕರರಿಗೆ ಉತ್ತಮ ವೇತನ ಭತ್ಯೆಗಳನ್ನು ನೀಡಬೇಕಾಗಬಹುದು. ಭಾರತೀಯ ಪತ್ರಿಕೆಗಳ ಖ್ಯಾತ ಪತ್ರಿಕೋದ್ಯಮಿಗಳು ವಿದೇಶೀ ಪತ್ರಿಕೆಗಳಿಗೆ ಹಾರಬಹುದು. ಅಲ್ಲದೇ ಭಾರತೀಯ ಪತ್ರಿಕೆಗಳು ಮಾಹಿತಿ, ಮುದ್ರಣ ಗುಣಮಟ್ಟಗಳನ್ನು ಹೆಚ್ಚಿಸಿಕೊಳ್ಳಬೇಕಾಗಬಹುದು. ಸ್ಪರ್ಧೆ ಭಾರತೀಯ ಮಾಧ್ಯಮ ರಂಗದ ಅವಿಭಾಜ್ಯ ಅಂಗವಾಗಲಿದೆ.

ಭಾರತೀಯ ಸುದ್ದಿ ಪತ್ರಿಕೆಗಳು ಬಹುತೇಕ ತಮ್ಮ ಮಾಹಿತಿ ಹಾಗೂ ಸುದ್ದಿಗಳಿಗಾಗಿ ಸುದ್ದಿ ಪಾರುಪತ್ಯಗಳನ್ನು ಅವಲಂಬಿಸಿವೆ. ಬಾರತೀಯ ಸುದ್ದಿ ಪಾರುಪತ್ಯೆಗಳ ಸುದ್ದಿ ಶೇಖರಣೆಯು ಬಡವಾಗಿದ್ದು, ಅವು ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಹಣಕಾಸಿನ ಸಂಪನ್ಮೂಲವಾಗಲೀ, ಮಾನವ ಸಂಪನ್ಮೂಲವಾಗಲೀ ಇಲ್ಲ. 'ಭಾರತೀಯ ಸುದ್ದಿ ಪಾರುಪತ್ಯಗಳು ಹಣಕಾಸಿನ ದೌರ್ಬಲ್ಯವನ್ನೇನು ಹೊಂದಿಲ್ಲ. ಆದರೆ ಅವು ವಿದೇಶೀ ಪಾರುಪತ್ಯಗಳ ಸವಾಲನ್ನು ಎದುರಿಸುವ ಆತ್ಮ ವಿಶ್ವಾಸವನ್ನು ಹೊಂದಿರಬೇಕು'. ಎನ್ನುತ್ತಾರೆ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ಚಂದನ್ ಮಿಶ್ರ ಅವರು. ವಾಸ್ತವವಾಗಿ ಭಾರತೀಯ ಸುದ್ದಿ ಪಾರುಪತ್ಯಗಳನ್ನು ಸಂಪನ್ಮೂಲ ಕೊರತೆಯಿಂದ ನರಳುತ್ತಿರುವುದನ್ನು ಅನೇಕ ಹಿರಿಯ ಪತ್ರಕರ್ತರೇ ಒಪ್ಪಿಕೊಂಡಿದ್ದಾರೆ.

ಇಂದು ವಿಶ್ವದ ಎಲ್ಲೆಡೆಯಿಂದಲೂ ಟಿ.ವಿ. ಚಾನಲ್, ರೇಡಿಯೋ ಪ್ರಸಾರಗಳು ಭಾರತಕ್ಕೆ ಹರಿದು ಬರುತ್ತಿರುವುದನ್ನು ೧೯೫೫ರ ಭಾರತೀಯ ಮಾಧ್ಯಮ ನೀತಿಯು ತಡೆಯಲು ಸಾಧ್ಯವೇ? ಎಂಬ ಪ್ರಶ್ನೆಯಿದೆ. ಐವತ್ತರ ದಶಕದ ರಾಜಕೀಯ ಪರಿಸ್ಥಿತಿ, ಸ್ವಾತಂತ್ರ್ಯ ನಂತರದ ದಿನಗಳ ವಿದೇಶೀ ವಿರೋಧ ನೀತಿ, ೧೯೫೫ರ ಭಾರತೀಯ ಮಾಧ್ಯಮ ನೀತಿ ರೂಪಿಸುವಲ್ಲಿ ಬೆಂಬಲವಾಗಿತ್ತು. ಬದಲಾಗುತ್ತಿರುವ ವಿಶ್ವದಲ್ಲಿ ೧೯೫೫ರ ಸಿದ್ಧಾಂತ, ಅಭಿವೃದ್ಧಿ ವಿರೋಧಿ ಎಂಬ ಭಾವನೆಯಿದೆ.

ರಾಷ್ಟ್ರೀಯ ಐಕ್ಯತೆ ಮತ್ತು ಸ್ವಾತಂತ್ರ್ಯದ ಸಂದರ್ಭಗಳಲ್ಲಿ ಮಾಧ್ಯಮ ಕುರಿತಂತೆ ಜಸ್ಟಿಸ್ ಕೃಷ್ಣ ಅಯ್ಯರ್ ಅವರ ಆಲೋಚನೆ ಗಮನಾರ್ಹ ಜಸ್ಟಿಸ್ ಕೃಷ್ಣ ಅಯ್ಯರ್ ಅವರ ಪ್ರಕಾರ ಮುದ್ರಿತ ಪದ ಎಲೆಕ್ಟ್ರಾನಿಕ್ ಮಾಧ್ಯಮಕ್ಕಿಂತ ಆಕರ್ಷಣೆ ಹಾಗೂ

ವಿಶ್ವಾಸಾರ್ಹತೆಯನ್ನು ಹೊಂದಿದೆ. ೧೯೫೫ರ ಐತಿಹಾಸಿಕ ನಿರ್ಧಾರವನ್ನು ಕಡೆಗಣಿಸಿದಲ್ಲಿ ವಿದೇಶೀ ಮಾಧ್ಯಮವನ್ನು ತಡೆಯಲು ಯಾವುದೇ ನೀತಿನಿಯಮಗಳಿರುವುದಿಲ್ಲ. ನಮ್ಮ ವಿರೋಧಿ ರಾಷ್ಟ್ರದ ವ್ಯಾಪಾರಿಯೂ ಕೂಡ ವ್ಯಾಪಾರಿ ಆಸಕ್ತಿಗಳ ಹಿಂದೆ ವಿಶೇಷ ಆಸಕ್ತಿಗಳನ್ನು ಅಡಗಿಸಿಟ್ಟು ಪತ್ರಿಕೆ ನಡೆಸಬಹುದಾಗಿದೆ.

ಸುದ್ದಿ ಪತ್ರಿಕೆಗಳು ದೇಶದ ಸಾಂಸ್ಕೃತಿಕ ರಾಯಭಾರಿಗಳಾಗಿವೆ. ಅಭಿವೃದ್ಧಿ ಹೊಂದಿದ ಪ್ರಜಾಸತ್ತಾತ್ಮಕ ರಾಷ್ಟ್ರಗಳೂ ಕೂಡ ಅವುಗಳ ಆರ್ಥಿಕ ಸುಧಾರಣೆಗಳಲ್ಲಿ ವಿದೇಶಿ ಪತ್ರಿಕೆಗಳಕುರಿತಾಗಿ ಮಾತ್ರ ವಿಭಿನ್ನ ನಿಲುವು ತಳೆದಿವೆ. ಫ್ರಾನ್ಸ್, ಸ್ವೀಡನ್, ಸ್ವಿಜರ್ ಲ್ಯಾಂಡ್, ಚೀನಾ ಹಾಗೂ ಆಗ್ನೇಯ ಏಷ್ಯಾ ರಾಷ್ಟ್ರಗಳು ಪ್ರಕಾಶನ ಹಕ್ಕು ವಿದೇಶೀಯರಿಗೆ ನೀಡಿಲ್ಲ. ಅಮೆರಿಕೆಯಂಥ ಮುಂದುವರೆದ ಮುಕ್ತ ರಾಷ್ಟ್ರದಲ್ಲಿಯೂ ಸಹ 'ರೂಪರ್ಟ್ ಮುರ್ಡಕ್' ಅಮೆರಿಕೆಯ ನಾಗರೀಕನಾದ ನಂತರವೇ ಹೆರಾಲ್ಡ್ ಪೋಸ್ಟ್ ಪತ್ರಿಕೆಯ ಮಾಲಿಕನಾಗಲು ಸಾಧ್ಯವಾಯಿತು ಎಂಬ ವಿಚಾರ ಗಮನಾರ್ಹ.

ವಿದೇಶೀ ಪತ್ರಿಕೆಗಳು ಭಾರತದ ಹಾಳು ಮುಖವನ್ನೇ ಚಿತ್ರಿಸುತ್ತಾ ಭಾರತದ ವರ್ಚಸ್ಸನ್ನು ಹಾಳು ಮಾಡುತ್ತಿವೆ ಎಂಬುದು ವಾಸ್ತವವಾದರೂ ಹಲವಾರು ಭಾರತೀಯ ಪತ್ರಿಕೆಗಳೂ ಸಹ ರಾಜಕೀಯ ಹಿಂಬಾಲಕತನ, ಜಾತಿ, ಮತೀಯ ಪಕ್ಷಪಾತ, ವ್ಯಾವಹಾರಿಕ, ಬಂಡವಾಳಶಾಹಿಗಳ ಆಸಕ್ತಿಗಳನ್ನು ಬಿಂಬಿಸುತ್ತಿರುವುದು ಕೂಡ ಅಷ್ಟೇ ಸತ್ಯ.

ವಿದೇಶೀ ಪತ್ರಿಕೆಗಳು ಕೇವಲ ಹಣ ಮಾಡುವ ದೃಷ್ಟಿಯನ್ನು ಹೊಂದಿವೆ ಎಂಬ ಆಪಾದನೆಯನ್ನು ಭಾರತೀಯ ಪತ್ರಿಕೋದ್ಯಮಿಗಳು ಮಾಡಿದ್ದಾರೆ. ಇದರೊಟ್ಟಿಗೆ ನಿಜವಾಗಿಯೂ ಪತ್ರಿಕೆಗೆ ಇರಬೇಕಾದ ಇನ್ನೊಂದು ಮುಖ ರಾಷ್ಟ್ರೀಯತೆ. ಬದಲಾದ ಆರ್ಥಿಕ ಸನ್ನಿವೇಶದಲ್ಲಿ ಅದರ ಮೂಲಭೂತ ವಿಚಾರಗಳನ್ನು ಮರೆಯಲಾಗುವುದಿಲ್ಲ. ವಿಶ್ವದ ಅಬಿವೃದ್ಧಿ ಪಥ ಎಷ್ಟೇ ಮುಂದೆ ಸಾಗಿದ್ದರೂ ಸುದ್ದಿ ಪತ್ರಿಕೆಗಳು ಇಂದಿಗೂ ಸಾರ್ವಜನಿಕ ಅಭಿಪ್ರಾಯದ ರೂವಾರಿಗಳಾಗಿವೆ.

ಎನ್.ಕೆ.ಪಿ. ಸಾಳ್ವೆ ಅಧ್ಯಕ್ಷತೆಯ ಮಂತ್ರಿ ಮಂಡಲದ ಉಪಸಮಿತಿ ವಿದೇಶಿ ಪತ್ರಿಕೋದ್ಯಮದ ಪ್ರವೇಶಕ್ಕೆ ಮೂರು ಷರತ್ತುಗಳನ್ನು ವಿಧಿಸಿದೆ. ಅವು ಭಾರತೀಯ ಪ್ರಕಾಶನದ ವಿದೇಶೀ ಪತ್ರಿಕೆಗಳಲ್ಲಿ ಶೇಕಡಾ ೪೯ ಕ್ಕಿಂತ ಮೇಲ್ಪಟ್ಟು ಭಾಗಸ್ವಾಮ್ಯ ವಿದೇಶೀ ಪತ್ರಿಕೆಗಳಿಗಿರಬಾರದು. ಸಂಪಾದಕ ಮಂಡಳಿ ಹಾಗೂ ಆಡಳಿತ ಮಂಡಳಿಯಲ್ಲಿ

ಸಿಂಹಪಾಲು ಭಾರತೀಯರಿರಬೇಕು ಎಂಬುದಾಗಿವೆ. ಅದೇನೇ ಇದ್ದರೂ ಮಾಜಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರು ಹಾಗೂ ಈಗಿನ ಲೋಕಸಭಾ ಸ್ಪೀಕರ್ ಪಿ.ಎ. ಸಂಗ್ಮಾ ಅವರ ಹೇಳಿಕೆಯಂತೆ, 'ಭಾರತೀಯ ಪರಿಸರದಲ್ಲಿ ವಿದೇಶೀ ಮಾಲೀಕತನದ ಸುದ್ದಿ ಪತ್ರಿಕೆಗಳ ಪ್ರವೇಶ ಕುರಿತಂತೆ ಈಗಾಗಲೇ ರಾಷ್ಟ್ರಾದ್ಯಂತ ಮುಕ್ತ ಚರ್ಚೆ ನಡೆಯುತ್ತಿದೆ. ಭಾರತೀಯ ಮುದ್ರಣ ಮಾಧ್ಯಮ ರಂಗಕ್ಕೆ ಹೊಸ ನೀತಿ ನಿಯಮಾವಳಿಗಳನ್ನು ರೂಪಿಸುವ ಅಗತ್ಯವಿದೆ. ಅಂತೆಯೇ ಪ್ರಸ್ತುತ ಕಾನೂನುಗಳಡಿಯಲ್ಲಿ ವಿದೇಶೀ ಸುದ್ದಿ ಪತ್ರಿಕೆಗಳು ರಾಷ್ಟ್ರದಲ್ಲಿ ಮುಕ್ತವಾಗಿ ಸ್ವಚ್ಛಂದವಾಗಿ ವ್ಯವಹರಿಸಲಾರವು' ಎಂಬುದು ನಿರ್ವಿವಾದ.

X

ಮುಟ್ಟುಗಿ (ಗೆ)ಡು

- ಎಸ್. ವಿ. ಶ್ರೀನಿವಾಸ ಶರ್ಮ

(ಅ)

ನನ್ನಿಗೆ ದಾಯಿಗಂ ಗೆಳೆಯನೊಪ್ಪಿಸಿದೆಂಗಡಿಮೆಂಬ ಮಾತುಗಳ್
ನಿನ್ನವು ಕೂರದರ್ ನೆಲನನೊಟ್ಟಜೆಯಿಂ ಕೊಳೆ ಕೊಟ್ಟು ಮುಟ್ಟುಗೆ
ಟ್ಟಿನ್ನುಮರಣ್ಯದೊಳ್ ನಮೆದಪಂ ಯಮನಂದನನೆಂಬ ಬನ್ನಮುಂ
ಮುನ್ನಮೆ ಸೋಂಕಿ ಕಣ್ಮಲಿವ ಮಾತುಗಳೆಲ್ಲರ ಪೇಟ್ಟುಮಾತುಗಳ್

-ವಿ.ವಿ. ೭ ಆ ; ೫೫ ಪದ್ಯ

ಈ ಪದ್ಯಕ್ಕೆ ಅರ್ಥವಿವರಣೆಯನ್ನು ಕೊಡುವ ಪ್ರಾ.ಡಿ.ಎಲ್. ಎನ್ ರವರು ಪಂ.ಭಾ. ದೀಪಿಕೆಯಲ್ಲಿ ಹೀಗೆ ವ್ಯಾಖ್ಯಾನ ಮಾಡಿರುತ್ತಾರೆ.

ಸತ್ಯಕ್ಕಾಗಿ, ದಾಯಾದಿಗೆ, ಭೂಮಿಯನ್ನು ಒಪ್ಪಿಸಿಬಿಟ್ಟೆನು ಎನ್ನುವ ಮಾತುಗಳು ನಿನ್ನವು. ಪ್ರೀತಿಸದವರು (ವೈರಿಗಳು) ರಾಜ್ಯವನ್ನು, ಬಟ್ಟಜೆಯಿಂ ಪರಾಕ್ರಮದಿಂದ, ಕೊಳೆ =ಕಿತ್ತುಕೊಳ್ಳಲು , ಕೊಟ್ಟು, ಮುಟ್ಟುಗೆಟ್ಟು - ಮನೆಯ ಸಲಕರಣೆಗಳನ್ನು ನೀಗಿಕೊಂಡು, ಎಂದರೆ ನಿರುಪಾಯನಾಗಿ, ಕಾಡಿನಲ್ಲಿ ಧರ್ಮರಾಯನು ನಮೆಯುತ್ತಿದ್ದಾನೆ. ...... ಎಂದು ಹೇಳಿ ಅಂತ್ಯದಲ್ಲಿ, "ಒಟ್ಟಜೆ, ಮುಟ್ಟುಗಿಡು - ಇವಕ್ಕೆ ಕೊಟ್ಟಿರುವ ಅರ್ಥಗಳಿಗೆ ಖಚಿತವಾದ ನೈಘಂಟಕ ಆಧಾರಗಳಾಗಲೀ, ಪ್ರಯೋಗಾಧಾರಗಳಾಗಲಿ ಅವಶ್ಯಕ "- ಎಂದಿದ್ದಾರೆ. ಡಿ.ಎಲ್.ಎನ್.ರವರು.

ನನ್ನ ಅನಿಸಿಕೆ ಇದು :- `ಮುಟ್ಟುಗೆಡು'; ಮುಟ್ಟು + ಕೆಡು, ಇದೊಂದು ಸಂಯುಕ್ತ ಪದ. ಮೊದಲಿಗೆ 'ಮುಟ್ಟು' ಎಂಬುದಕ್ಕೆ ಪ್ರಚಲಿತವಿರುವ touch, ಸ್ಪರ್ಶ, ಮೈಲಿಗೆ, ಎಂಬ ಅರ್ಥವೂ ಉಂಟು. ಹಾಗೆಯೇ, ಸಲಕರಣೆ, ಪದಾರ್ಥ, ವಸ್ತು , ಅರ್ಥಗಳೂ ಉಂಟು. ಇಲ್ಲಿ ಸ್ಪರ್ಶ, touch, ಮುಂತಾದ ಅರ್ಥ ಹೊಂದಿಕೆಯಾಗದಿರುವುದರಿಂದ, ಪದಾರ್ಥ, ಸಲಕರಣೆ ವಸ್ತು, ಎಂಬ ಅರ್ಥವೇ ಉಚಿತವಾಗಿರುತ್ತದೆ ಎಂದು ಹೇಳಬಹುದು. ಇದನ್ನೇ ಸ್ವೀಕರಿಸುವುದು ಸೂಕ್ತ. ಎಂದ ಮೇಲೆ ' ಮುಟ್ಟುಗೆಡು ' =ಪದಾರ್ಥ ಕೆಡುವುದು, ವಸ್ತುನಾಶವಾಗುವುದು ಎಂದು ಅರ್ಥೈಸಬಹುದು.

ಆದರೆ ಈ ವಾಚ್ಯಾರ್ಥದಿಂದ ಪದ್ಯಕ್ಕೆ ಯಾವ ಲಾಭವೂ ಬಂದಂತಾಗುವುದಿಲ್ಲ

ವಾದ್ದರಿಂದ, ಒಳ ಅರ್ಥವನ್ನು ಹುಡುಕುವ ಮಾರ್ಗದ ಅವಶ್ಯಕತೆ ಬೇಕೆನಿಸುತ್ತದೆ. ಈಗ ಪಂಪನ ಗದ್ಯದ ತುಣುಕೊಂದನ್ನು ಪರಿಶೀಲಿಸುವುದು ಒಳ್ಳೆಯದು ಎನ್ನಿಸುತ್ತದೆ.

"ಮತ್ತಮಾಗಿರೀಂದ್ರ ಕಂದರದೊಳ್ ತಪಂಗೈವ ತಪೋಧನರ ತಂಪಂ
ಗಳೆಲ್ಲಮಾತನ ತಪೋಮಯಶಿಖಿಗಳಿಂ ಬೆಂದು ಬೆಂದ ನುಲಿಯಂತೇತರ್ಕಂ
ಮುಟ್ಟಲ್ಲದೆ ಮುಟ್ಟುಗಿಡೆ .... "

– (ವಿ.ವಿ. ೭ – ೮೦ ವಚನ)

ಇದು, ಪಾಶುಪತಾಸ್ತ್ರಕ್ಕಾಗಿ ಶಿವನನ್ನು ಕುರಿತು ಅರ್ಜುನ ಕೈಗೊಂಡಿರುವ ತಪಸ್ಸಿನ ಸಂದರ್ಭ :– ಅರ್ಜುನನ ತಪಃ ಪ್ರಭಾವದಿಂದ, ಇತರ ತಪೋಧನರ ಸ್ಥಿತಿ ಹೇಗಿತ್ತು ಎಂಬುದರ ಚಿತ್ರಣ ಇಲ್ಲಿದೆ. ಗಿರಿಕಂದರಗಳಲ್ಲಿ ತಪಸ್ಸು ಮಾಡುವ ತಪೋಧನರ ತಪಸ್ಸು, ಅರ್ಜುನನ ತಪೋಮಯ ಶಿಖಿಗಳಿಂದ ಬೆಂದು ಮುಟ್ಟಲ್ಲದೆ ಮುಟ್ಟುಗಿಡೆ – ಮೂಲವಸ್ತುಹೀನವಾಗಿರುತ್ತದೆ. ತಪಸ್ವಿಗಳು ಅರ್ಜುನನ ಎದುರು ಕುಳಿತಿದ್ದರೂ, ಅವನ ಪ್ರಭಾವದಿಂದ, ಅವರಲ್ಲಿ ತಪಸ್ಸಿನ ತೇಜಸ್ಸು ಇರಲಿಲ್ಲ. ಅವರು ಬೆಂದ ನುಲಿಗಳಂತೆ ಮಾತ್ರ ಎಂದು ಅರ್ಥ ಸ್ಫುರಿಸುವುದು ಸಹಜ ಎನ್ನಿಸುತ್ತದೆ. ಇದಕ್ಕೆ ಮತ್ತೊಂದು ಉದಾಹರಣೆ ನೋಡಬಹುದು.

"ಕರ್ಮಕ್ಷಯಾರ್ಥಂ, ತಪಂಬಟ್ಟಾತನನಿಳಿಸಿ,
ಪರಿಭವಿಸಿ, ಮುಟ್ಟುಗಿಡಿಸಿ, ನುಡಿಯಲ್ವೇಡೆಂದು ಬಾರಿಸಿ
ದೊಳಂ, ಜಮಾವತಿ ... "

– (ವಡ್ಡಾ: ಸುಕೌಶಲಸ್ವಾಮಿ ಕಥೆ : ಪುಟ ೪೬ : ಸೌ. ೧೨)

ಈಗ, "ಕರ್ಮ ಕ್ಷಯಾರ್ಥವಾಗಿ, ತಪಸ್ಸುಮಾಡಿ, ಜ್ಞಾನದಿಂದ ವ್ಯಕ್ತಿತ್ವವನ್ನು ಗಳಿಸಿಕೊಂಡವನು ಈ ತಪಸ್ವಿ. ಈತನನ್ನು 'ಇಳಿಸಿ', 'ಪರಿಭವಿಸಿ', 'ಮುಟ್ಟುಗೆಡಿಸಿ', ಮಾತಾಡಬಾರದು ಎಂದವಳನ್ನು ಜಮಾವತಿ ..." – ಇಲ್ಲಿ ಮೂರು ಪದಗಳಿಗೆ ಸಮಾನಾರ್ಥವಿರುವಂತೆ ಕಾಣಿಸುತ್ತದೆ. 'ಕೀಳಾಗಿ ಕಾಣುವ', 'ಅವಮಾನಪಡಿಸುವ', 'ಮುಟ್ಟುಗಿಡಿಸಿ', (ವ್ಯಕ್ತಿತ್ವ ಕಳೆಯುವ) ಮಾತಾಡಬಾರದು, ಎಂದು ಅರ್ಥೈಸಬಹುದಾಗಿದೆ ಎನ್ನಿಸದೇ ಇಲ್ಲ. ಈಗ, ಪಂಪರಾಮಾಯಣ, ಆಶ್ವಾಸ ೧೦; ೧೯೯ ವ. ಭಾಗದಲ್ಲಿ ಬರುವ ಸಂದರ್ಭವನ್ನು ನೋಡಬಹುದು.

(ಲಂಕೆಗೆ ಅಧಿಪತಿಯಾದ ವಿದ್ಯುತ್ಕೇಶನೆಂಬ ವಿದ್ಯಾಧರನ ಹೆಂಡತಿಗೆ,

ವಾನರನೊಬ್ಬ ಅಂಗಭಂಗ ಮಾಡಿದಾಗ, ವಿದ್ಯಾಧರನು ಕಪಿಕುಲಕ್ಕೆ ಅಪಾಯುವನ್ನು ಒಡ್ಡುತ್ತಾನೆ. ವಾನರರು ಅವನೊಡನೆ ಹೋರಾಟಕ್ಕೆ ನಿಲ್ಲುತ್ತಾರೆ. ಹೆದರಿ ಓಡಿದ ವಿದ್ಯುತ್ಕೇಶನು ಜಾರಣ ಋಷಿಯೊಬ್ಬನ ಪಾದಕಮಲಗಳಿಗೆ ಶರಣು ಹೋಗುತ್ತಾನೆ. ಈ ಸಂದರ್ಭದಲ್ಲಿ ಋಷಿಯು,

" ಅನ್ನೆಗಂ, ಬೆಂಬಟಿಯನು ಟಿಯದೆ ಮುಟ್ಟೆವಂದೀ ಮುಟ್ಟುಗೆಟ್ಟ ದುರಾತ್ಮನಂ (ವಾನರ) ವಿದಾರಿಸುವೆನೆಂದಾ ಆ ವಾನರ ಚರ ಅನುರಂಗೆ ಮುಳಿಸನುಟಿವಂತು ಧರ್ಮೋಪದೇಶ ಮಾಡಿ, ವಿದ್ಯುತ್ಕೇಶನಂ ನೋಡಿ ... "

- (ಪಂಪ ರಾ. ಆಶ್ವಾಸ ೧೦ ; ೧೯ ವ)

ಇಲ್ಲಿ, "ಬೆನ್ನು ಹತ್ತಿ, ಮುಟ್ಟಲು ಬಂದ ಈ 'ಮುಟ್ಟುಗೆಟ್ಟ' ದುರಾತ್ಮನಂ" ಎನ್ನುವ ವಾಕ್ಯವನ್ನು ನೋಡಬಹುದು. ವಾನರ ಚರ ಹಿಂದಿನ ಜನ್ಮದಲ್ಲಿ ಬೇಡನಾಗಿದ್ದು, ಮರು ಜನ್ಮದಲ್ಲಿ ಕೋಡಗನಾಗಿರುತ್ತಾನೆ. ಈ ವಿಷಯಗಳನ್ನು ವಿದ್ಯುತ್ಕೇಶನಿಗೆ ವಿವರಿಸುತ್ತಾ, ವಾನರನು 'ಮುಟ್ಟುಗೆಟ್ಟ 'ವಾನರ, 'ಮುಟ್ಟುಗೆಟ್ಟ ದುರಾತ್ಮ ವಾನರ' ಎಂಬ ಪದ ಪ್ರಯೋಗ ಮಾಡುತ್ತಾನೆ ಕವಿ. ಎಂದಮೇಲೆ, ಇಲ್ಲಿಯೂ 'ಸತ್ವಹೀನ', 'ಗುಣಹೀನ', 'ಅಯೋಗ್ಯ' ಎಂಬ ಅರ್ಥಹೊಂದಿಬರುತ್ತದೆ, ಅಲ್ಲವೆ?

ಮತ್ತೊಂದು ಸಂವಾದಿಯಾದ ಪ್ರಯೋಗವನ್ನು ನೋಡೋಣ. ಧರ್ಮಾವೃಂತ ಆಶ್ವಾಸ ೧೦; ಗದ್ಯ ೧೩೬ :-

ತನ್ನ ತಂಗಿ ರಾಧೆಗೆ ಮಕ್ಕಳಿಲ್ಲವೆಂದು ತಿಳಿದಿದ್ದ ಶ್ರೀಧತ್ತಶೆಟ್ಟಿಗೆ ಅವಳು ಮಗನನ್ನು ಪಡೆದಳೆಂಬ ಸುದ್ದಿ ತಿಳಿದು ತಂಗಿಯ ಮನೆಗೆ ಬರುತ್ತಾನೆ. ಅಲ್ಲಿ ಸತ್ಯವನ್ನ ರಿಯತ್ತಾನೆ.

"ಗುಣಪಾಲ ಶೆಟ್ಟಿಯೊಳಚ್ಚೊತ್ತಿದಂತಪ್ಪ ಶಿಶುವಂ ಕಂಡು, ಅಟೀದು ಬೆರ್ಚಿ ಕಲ್ಲಂತಾಗಿದ ಮಾಂಟೆ (ಮಿಟ್ಟೆ) ಯಂತೆ ಮಟ್ಟುಗೆಟ್ಟು... ಮತ್ತಂ ಕೊಲ್ವೆನೆಂಬ ಬಗೆಯಂ ತಂದು ಉಪಾಯದಿಂ..."

- (ಧರ್ಮ ಆಶ್ವಾಸ ೧೦; ಗದ್ಯ ೧೩೬)

ಈ ಸಂದರ್ಭದ ಪ್ರಯೋಗಾರ್ಥದ ಕಡೆ ಗಮನವೀಯುವುದು ಸೂಕ್ತ.

ತಂಗಿ ರಾಧೆಯ ಬಳಿ ಇರುವ ಶಿಶುವಿನ ರಹಸ್ಯವನ್ನೆಲ್ಲಾ ಅರಿತ ಶ್ರೀಧತ್ತಶೆಟ್ಟಿ, ತಾನು ಹಿಂದೆ ಕೊಲ್ಲಿಸಿದ್ದ ಧನಶ್ರೀಯ ಶಿಶುವೇ, ತನ್ನ ತಂಗಿಯ ಬಳಿ ಇರುವ ಶಿಶು

ಎಂದು ಯೋಚಿಸುತ್ತಾನೆ. ಶಿಶುವನ್ನು ಕಂಡ ಕ್ಷಣದಲ್ಲಿ ಅವನ ಸ್ವಭಾವವೇ ಬೇರೆಯಾಗುತ್ತದೆ ಬೆಚ್ಚುತ್ತಾನೆ. ಕಲ್ಲು ತಾಗಿದ ಮಣ್ಣು ಹೆಂಟೆ ತನ್ನ ಗಡ್ಡೆ ರೂಪ ಹೋಗಿ ಮಣ್ಣುಹುಡಿಯಾಗುವಂತೆ (ರೂಪ ಬದಲಾವಣೆಯಾದಂತೆ), ಶ್ರೀಧತ್ತಶೆಟ್ಟಿ ತನ್ನ ಮೂಲಗುಣ ಬದಲಾಯಿಸುತ್ತಾನೆ. ಕಟುಕ ಶ್ರೀಧತ್ತಶೆಟ್ಟಿಯಾಗುತ್ತಾನೆ. ಅಯೋಗ್ಯ ನಾಗುತ್ತಾನೆ. ಮತ್ತೆ ಮಗುವನ್ನು ಕೊಲ್ಲಿಸಲು ಸಿದ್ಧನಾಗುತ್ತಾನೆ. ಇಲ್ಲಿಯೂ 'ಮುಟ್ಟುಗೆಡು' ಅರ್ಥ ಮೇಲಿನಂತೆಯೇ ಸ್ಥಾನಗಳಿಸುತ್ತದೆ, ಅಲ್ಲವೇ?

ಆದಿ ಪುರಾಣ ಸಂಗ್ರಹ : ಪದ ೨೪ ವಚನ. ಮತ್ತೊಂದು ಸಂವಾದಿಯಾದ ಉದಾಹರಣೆಯನ್ನು ನೋಡಬಹುದು:

"ಶ್ರೀಷೇಣಂ ತಪಕ್ಕೆ ಪೋಪ ಪದದೊಳ್ ಅಗ್ರಪುತ್ರಂ ಜಯವರ್ಮನಿರ್ದ್ದೊಡ ಮವಂ 'ಮುಟ್ಟಲ್ಲ'ನೆಂದು , ಕಿಱಿಯಾತನಂ ಶ್ರೀವರ್ಮನಂ ರಾಜದೊಳ್ ನಿಱಿಸಿದಂ."

ಈ ಪ್ರಯೋಗದಲ್ಲಿ ನೇರವಾಗಿ ವ್ಯಕ್ತಿತ್ವವನ್ನು ಕುರಿತು ಆಡಿರುವ ಪಂಪನ ಪ್ರಯೋಗವನ್ನು ಗಮನಿಸಬಹುದು. ಮುಟ್ಟು + ಅಲ್ಲನ್ =ವ್ಯಕಿತ್ತ್ವ ಇಲ್ಲದವನು ಯೋಗ್ಯನಲ್ಲದವನು ಎಂಬ ಅರ್ಥ ಸ್ಫುರಿಸುತ್ತದೆ.

ಈಗ ಆರಂಭದ ಪಂಪನ ೭ ಆ – ೫೫ ಪದ್ಯಕ್ಕೆ ಬರಬಹುದು. ಯಾವುದೇ ಪದದ ಅರ್ಥನಿರ್ಣಯದ ಸಂದರ್ಭದಲ್ಲಿ ಅದರ ಹಿನ್ನೆಲೆಗೆ ಬಂದ ಸನ್ನಿವೇಶದ ಅಭ್ಯಾಸ ಮಾಡುವುದು ಸೂಕ್ತ ಎನ್ನಿಸುತ್ತದೆ. ವಿ. ವಿ. ಆಶ್ವಾಸ ೭ – ಪದ್ಯ ೪೬ – ೫೪ ರ ವರೆಗೆ ದ್ರೌಪದಿ ಹಾಗೂ ಭೀಮ ಆಡಿರುವ ಮಾತುಗಳಲ್ಲಿ ವ್ಯಕ್ತವಾಗುವುದು ಹೀಗೆ :- ಅಡವಿಯಲ್ಲಿ ಹಣ್ಣು ಹಂಪಲು ಆರಿಸಿ ಅಲೆದಾಡುವ ಭೀಮನ ಸ್ಥಿತಿ, ಬೇರುನಾರುಗಳನ್ನು ಆಯುವ ಅರ್ಜುನನ ಸ್ಥಿತಿ, ತನ್ನ ವ್ಯಕ್ತಿತ್ವವನ್ನೇ ಅರಿಯದಾಗಿರುವ ಧರ್ಮಜನ ಸ್ಥಿತಿ – ಇವುಗಳ ಚಿಂತನೆ ಇದೆ. ದ್ರೌಪದಿಯ ಮಾನಸಿಕ ನೋವಿನಲ್ಲಿ ಕಾಣಬರುತ್ತಿರುವುದು 'ಹೇಗಿದ್ದವರು ಹೇಗಾದರು' ಎಂಬ ಮನೋಭಾವ ಸುಸ್ಪಷ್ಟವಾಗಿದೆ. ಇಲ್ಲಿ ಶೂರತನದ ವ್ಯಕ್ತಿತ್ವದಿಂದ ಹೇಡಿತನದ ವ್ಯಕ್ತಿತ್ವಕ್ಕೆ ಇಳಿದರೆಂಬ ನೋವು ವ್ಯಕ್ತವಾಗದೇ ಇಲ್ಲ. 'ವಲ್ಕಲ ವ್ಯಸನಕ್ಕೆ ಮೈಯ್ಯ ನಾಂಪುದು ಪೆಂಪೇಂ' (೭-೫೪) ಎಂಬ ಭೀಮನ ಮಾತಿನಲ್ಲಿಯೂ ಇದೇ ಭಾವನೆ ತುಂಬಿರುವುದು ಖಚಿತ.

ಈ ಹಿನ್ನೆಲೆಯಲ್ಲಿ ಈಗ ೭-೫೫ ರ ಪದ್ಯಕ್ಕೆ ಬರಬಹುದು. 'ನನ್ನಿಗೆ, ದಾಯಿಗಂಗೆ, ಎಳೆಯನೊಪ್ಪಿಸಿದೆಂ, ಗಡಿಂ' ಎಂಬ ಭೀಮನ ಮಾತಿನಲ್ಲಿ 'ಗಡಿಂ' ಎಂಬುದು ಗಮನಾರ್ಹ.

'ನಾನೇ ರಾಜ್ಯವನ್ನು ದಾಯಾದಿಗೆ ಬಿಟ್ಟು ಕೊಟ್ಟೆ 'ಎನ್ನುವ ಧರ್ಮರಾಯನ ಮಾತಿನಲ್ಲಿ ಹೆಮ್ಮೆ ಇದೆ. ಆದರೆ 'ಹೆಮ್ಮೆಯ ಮಾತು ಕಣ್ಮಲೆವವರ ದೃಷ್ಟಿಯಲ್ಲಿ ಕಾಣಿಸುವುದೇ ಬೇರೆ 'ಎಂಬುದು ಭೀಮನ ಅಭಿಪ್ರಾಯ. 'ಕೂರದರ್ ನೆಲನಂ ಒಟ್ಟಜೆ ಯಿಂ ಕೊಳೆ, ಕೊಟ್ಟು, ಮುಟ್ಟುಗೆಟ್ಟು, ಇನ್ನುಂ ಅರಣ್ಯದೊಳ್ ನಮೆದಪಂ ಯಮನಂದನಂ ಎಂಬ ಬನ್ನಮುಂ ಮುನ್ನಮೆ ಸೋಂಕಿ, ಕಣ್ಮಲೆಯವರ ಪೇಟ್ವ ಮಾತುಗಳು' ಎಂಬಲ್ಲಿ ತಮ್ಮ ಬಗ್ಗೆ ಇರುವ ವ್ಯಂಗ್ಯವನ್ನು ಎತ್ತಿ ಹಿಡಿಯುತ್ತಿರುವ ಸಂದರ್ಭವಾಗಿದೆ. ಇಲ್ಲಿಯೂ 'ಮುಟ್ಟುಗೆಟ್ಟು' ಎಂದರೆ ಮೂಲವ್ಯಕ್ತಿತ್ವ ನಾಶವಾಗಿ, ಬೆಲೆ ಹೀನರಾಗಿ, ಬದುಕುವ ಪಾಂಡವರ ಸ್ಥಿತಿ ವ್ಯಕ್ತವಾಗುತ್ತದೆ. ಶೌರ್ಯಗುಣದ ವಿರುದ್ಧ ಕಾರ್ಯದಲ್ಲಿ ತೊಡಗಬೇಕಾಗಿ ಬಂದ ಸ್ಥಿತಿಯನ್ನು ವಿವರಿಸುವ ದ್ರೌಪದಿ ಮಾತುಗಳಲ್ಲಿಯೂ ಇದೇ ಅರ್ಥ ಹೊರಹೊಮ್ಮದೇ ಇಲ್ಲ. – –

ಹೀಗಿರುವಾಗ, ಡಿ.ಎಲ್. ಎನ್ ರವರ 'ನಿಷ್ಪ್ರಯೋಜಕ' 'ನಿರುಪಾಯ'ರಾಗಿ ಎಂಬ ಅರ್ಥ ಇಲ್ಲಿ ಪ್ರಸ್ತುತವಲ್ಲ ಎಂದು ಹೇಳಬಹುದು.

(ಆ)

ಎಂದ ಮೇಲೆ, ಈಗ , ಸಾಧನೆ ೧೯; ೩-೪ ರ ಸಂಚಿಕೆಯ ಮಂಥನಕ್ಕೆ ಆರಿಸಿಕೊಂಡಿರುವ ಶಿವರಾಮಯ್ಯನವರ ವಾದಕ್ಕೆಬರುತ್ತೇನೆ.

ಮುಟ್ಟುಗಿಡೆ ತಾನೆ ತನ್ನಂ
ಕಟ್ಟಿಸಿಕೊಳ್ವಂತೆ ಬೀರ ಪಟ್ಟಮನಾಗಳ್
ಕಟ್ಟಿಸಿಕೊಂಡಂ ಶಲ್ಯಂ
ಕಟ್ಟಿದುದಂ ಕಳೆಯಲಾರ್ಗಮೇಂ ತೀರ್ದಪುದೇ.

– (ವಿ.ವಿ. ೧೩-೩೦)

ಇಲ್ಲಿ 'ಮುಟ್ಟುಗಿಡೆ' ಪದಕ್ಕೆ ಶಿವರಾಮಯ್ಯನವರು ಅತ್ಯಾಧುನಿಕ, ಸಮಕಾಲೀನ ಅರ್ಥವನ್ನು ಹುಡುಕುವುದರಲ್ಲಿ ತೊಡಗಿರುವಂತೆ ಭಾಸವಾಗುತ್ತದೆ. ಮುಟ್ಟಿನ ಗುಣವನ್ನು ಕಳೆದುಕೊಂಡ ಹೆಣ್ಣು ನಿಷ್ಫಲಳೂ, ನಿಷ್ಪ್ರಯೋಜಕಳೂ ಆಗುತ್ತಾಳೆ ಎಂದು ಆರಂಭಿಸಿ ಮುಟ್ಟಾಗಲಾರದ ಹೆಣ್ಣು 'ನಿಷ್ಪ್ರಯೋಜಕಿ' ಎಂಬ ಅರ್ಥ ನಿರ್ಣಯಕ್ಕೆ ಬರುತ್ತದೆ. ಅಲ್ಲದೆ 'ಕಟ್ಟಿಸಿಕೋ 'ಶಬ್ದಕ್ಕೆ 'ಸಂಭೋಗಿಸಿಕೋ' ಎಂಬ ಪ್ರಾಚೀನ ಪ್ರಯೋಗದ ಸಮರ್ಥನೆ ಇಲ್ಲದ, ಸಮಕಾಲೀನ ಅರ್ಥ ಹೇಳಿ, 'ಮುಟ್ಟುಗೆಟ್ಟ ಹೆಣ್ಣು ಕಟ್ಟಿಸಿ ಕೊಂಡರೂ

ವ್ಯರ್ಥ'ವಾದದ್ದು ಎನ್ನುತ್ತಾರೆ. ಶಲ್ಯ ಕಟ್ಟಿಸಿಕೊಂಡ ವೀರಪಟ್ಟ ನಿಷ್ಪ್ರಯೋಜಕ, ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಇದು ಡಿ.ಎಲ್.ಎನ್ ರವರ 'ನಿಷ್ಪ್ರಯೋಜಕ' ಎಂಬ ಅರ್ಥವನ್ನು ಅನುಸರಿಸಿ ಕಟ್ಟಿದ ಅರ್ಥ ಎನ್ನಿಸುವುದೂ ಉಂಟು.

ಆದರೆ ಇಲ್ಲಿ ಅಶ್ವತ್ಥಾಮ - ದುರ್ಯೋಧನರ ನಡುವೆ ಚಕಮಕಿಯಾಗಿ ಅಶ್ವತ್ಥಾಮ ದೂರವಾದ ಮೇಲೆ, ಶಲ್ಯನಿಗೆ ವೀರಪಟ್ಟ ಕಟ್ಟುವ ಸಂದರ್ಭ. ಇಲ್ಲಿ ಪಂಪನ ಉದ್ಗಾರ ಎದ್ದು ಕಾಣುವುದು ಸಹಜ. 'ಸೂಟ್ ಪಡೆಯಲಪ್ಪುದು' ಎಂಬ ಭೀಷ್ಮರ ನುಡಿಯ ಹಿನ್ನೆಲೆಯಲ್ಲಿ 'ಕಟ್ಟಿದುದಂ ಕಳೆಯಲಾರ್ಗಂ ತೀರ್ದಪುದೇ' - ಎಂಬ ಮಾತಿನಲ್ಲಿಯೂ ಅದೇ ಉದ್ಗಾರವಿರುವಂತಿದೆ. ಹೀಗಿರುವಾಗ , ಶಲ್ಯನಂತಹ ಮಹಾ ಬಲಶಾಲಿಯೂ ಇಲ್ಲಿ 'ಮುಟ್ಟುಗೆಡಲೇ ಬೇಕು' 'ಸತ್ವಹೀನನಾಗಲೇ ಬೇಕು'. ಅದು ಹೇಗೆಂದರೆ, ತನ್ನನ್ನು ತಾನೇ ಬಂಧನಕ್ಕೆ ಒಳಗಾಗಿಸಿಕೊಳ್ಳುವ ಕ್ರಿಯೆಯಲ್ಲೇ ಭವಿಷ್ಯದಲ್ಲಿ 'ಮುಟ್ಟುಗಿಡು'ವ ಕ್ರಿಯೆ ನಡೆಯಲೇಬೇಕು - ಇದು ಅನಿವಾರ್ಯ. ಎನ್ನುವ ಅರ್ಥವನ್ನು ಪಂಪ ಸೂಚ್ಯವಾಗಿ ತಿಳಿಸುತ್ತಾನೆ ಎನ್ನಬಹುದು. ಎಂದ ಮೇಲೆ ನಿಷ್ಪ್ರಯೋಜಕ, ಬಂಜೆತನ, ಅಪ್ರಯೋಜಕ, ಎಂಬ ಶಿವರಾಮಯ್ಯನವರು ತೋರಿಸಿದ ಅರ್ಥಗಳು ದೂರವೇ ಉಳಿಯುತ್ತವೆ ಎನ್ನಲೇ ಬೇಕಾಗುತ್ತದೆ. ಹಾಗೆಯೇ ದೀಪಿಕೆಯಲ್ಲಿ ಪುಟ ೫೨೦ - ಪದ್ಯ ೩೦ ರಲ್ಲಿ ಡಿ.ಎಲ್.ಎನ್ ರವರು "ಮುಟ್ಟುಗಿಡೆ =ಉಪಕರಣ ಅಥವಾ ಆಯುಧನಾಶವಾಗಲು" ಎಂದು ವ್ಯಾಖ್ಯಾನಿಸಿರುವ ಅರ್ಥವೂ ದೂರವೇ ಉಳಿಯುತ್ತದೆ ಎಂದು ಹೇಳಬಹುದು. ಆದರೆ, ಡಿ.ಎಲ್.ಎನ್ ರವರು ಹೇಳಿದ "ಖಚಿತವಾದ ನೈಘಂಟಕ ಆಧಾರಗಳಾಗಲೀ, ಪ್ರಯೋಗಾಧಾರಗಳಾಗಲಿ ಅವಶ್ಯಕ "ಎಂಬ ಮಾರ್ಗವನ್ನು ಅನುಸರಿಸಿ ಈ ಅರ್ಥಕ್ಕೆ ಬರಬಹುದೆನ್ನಿಸುತ್ತದೆ.

0

ಈ ಸಂಚಿಕೆಯ ಲೇಖಕರು

೧. ಪ್ರೊ॥ ದೊಡ್ಡರಂಗೇಗೌಡ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎನ್. ಕಾಲೇಜು
ಬೆಂಗಳೂರು

೨. ಡಾ॥ ಆರ್. ಶೇಷಶಾಸ್ತ್ರಿ
ಮುಖ್ಯಸ್ಥರು
ಕನ್ನಡ ವಿಭಾಗ
ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಅನಂತಪುರಂ, ಆಂಧ್ರಪ್ರದೇಶ

೩. ಡಾ॥ ವಿಜಯಶ್ರೀ ಸಬರದ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ – ೫೮೦ ೦೦೩

೪. ಶ್ರೀ ಕೆ.ವಿ. ಜುಕ್ತಿ ಮಠ
ಸಂಶೋಧನಾ ವಿದ್ಯಾರ್ಥಿ
ತತ್ವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ – ೫೮೦ ೦೦೩

೫. ಡಾ॥ ವಿಲ್ಯಂ ಮಾಡ್ತ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ – ೫೮೦ ೦೦೩

೬. ಡಾ॥ ವಿಜಯಕುಮಾರ ಮಹಾನುಭಾವಿಗಳು
ಜಗದ್ಗುರು ಪ್ರಭುದೇವ ಧರ್ಮಪೀಠ
ಜೋಗ್ ಮಠ, ಮಾವಿನಗುಂಡಿ ಅಂಚೆ
ಸಿದ್ಧಾಪುರ ತಾಲ್ಲೂಕು, ಉ.ಕ. ಜಿಲ್ಲೆ

೭. – ಅದೇ –

೮. ಡಾ || ಎಸ್.ಎನ್. ಶಿವರುದ್ರಸ್ವಾಮಿ
ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಪಿ.ಎ. ಕಾಲೇಜು, ತಿಪಟೂರು

೯. ಡಾ || ಜಿ.ಡಿ. ಜೋಷಿ
ನೆಹರೂ ನಗರ
ಮುಂಬಯಿ

೧೦. ಡಾ || ಚಂದ್ರಮೌಳಿ ನಾಯ್ಕರ್
ಮುಖ್ಯಸ್ಥರು, ಸಂಸ್ಕೃತ
ಪ್ರಾಕೃತ ಹಾಗೂ ಯೋಗ ಅಧ್ಯಯನ ವಿಭಾಗ
ಕರ್ನಾಟಕ ಕಾಲೇಜು, ಧಾರವಾಡ

೧೧. ಡಾ || ಎ.ಕೆ. ಶಾಸ್ತ್ರಿ
ಭವಾನಿ ಬಿಲ್ಡಿಂಗ್ಸ್,
ಹೊಸ ಮಾರ್ಕೆಟ್ ಯಾರ್ಡ್ ಹತ್ತಿರ,
ಶಿರಸಿ - ೫೮೧೪೦೨
ಉತ್ತರ ಕನ್ನಡ ಜಿಲ್ಲೆ

೧೨. ಶ್ರೀ ಎಸ್.ಜಿ. ಲಕ್ಷ್ಮೀನಾರಾಯಣ ಯಾದವ್
ಸಂಶೋಧನಾ ವಿದ್ಯಾರ್ಥಿ
ಸಮೂಹ ಸಂವಹನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೫೬೦ ೦೫೬

೧೩. ಪ್ರೊ || ಎಸ್.ವಿ. ಶ್ರೀನಿವಾಸ ಶರ್ಮ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಂ.ಇ.ಎಸ್. ಕಾಲೇಜು
ಬೆಂಗಳೂರು

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056